ಸಂಪುಟ: 04 ಸಂಚಿಕೆ: 357 ಪುಟಗಳು: 08 ಸೋಮವಾರ 10 ಮಾರ್ಚ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833

₹5

**ಮುಂಜಾನೆ ಮಾತು**

ಅಧರ್ಮದಿಂದ ಶತ್ರು ಹಲವು ಬಾರಿ ಗೆಲ್ಲಬಹುದು, ಆದರೆ ಕರ್ಮ ಎದುರಾಗುವ ವೇಳೆ ಧರ್ಮ ಅವನನ್ನು ಸುಡಲು ಪ್ರಾರಂಭಿಸುತ್ತದೆ, ನಿರ್ನಾಮ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಒಂದೇ ವಾರದಲ್ಲಿ ಬೆಂಗಳೂರು ಸೇರಿ 3 ಕಡೆ ಚಿನ್ನ ಕಳ್ಳಸಾಗಣೆ

• ಉದಯವಾಹಿನಿ, ಬೆಂಗಳೂರು

ಅಕ್ರಮವಾಗಿ ಚಿನ್ನ ಕಳ್ಳಸಾಗಣೆ ಮಾಡುತ್ತಿದ್ದ ಆರೋಪದಡಿ ಬಂಧಿಸಲ್ಪಟ್ಟಿರುವ ನಟಿ ರನ್ಯಾ ರಾವ್ ಹಿಂದೆ ಕಳ್ಳಸಾಗಣೆ ಜಾಲವೇ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ)ದ ಅಧಿಕಾರಿಗಳು ಶಂಕಿಸಿದ್ದಾರೆ. ಮಾರ್ಚ್ ಆರಂಭದಿಂದ ಒಂದು ವಾರದ ಅವಧಿಯಲ್ಲಿ ದೆಹಲಿ, ಬೆಂಗಳೂರು ಹಾಗೂ ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಆರು ಜನರನ್ನು ಡಿಆರ್‌ಐ ಅಧಿಕಾರಿಗಳು ಬಂಧಿಸಿದ್ದಾರೆ. ಮೂರು ಪ್ರಕರಣಗಳ ಮಧ್ಯೆ ಲಿಂಕ್ ಇರುವ ಬಗ್ಗೆ ಶಂಕೆ ಹಾಗೂ ಮತ್ತಷ್ಟು ಚಿನ್ನ ಕಳ್ಳಸಾಗಣಿಕೆ ಪ್ರಕರಣಗಳು ಬಯಲಾಗುವ ಸಾಧ್ಯತೆಯಿದೆ




**ಮೂರು ಪ್ರಕರಣಗಳ ಮಧ್ಯೆ ಲಿಂಕ್**

ಎಂದು ಸಿಬಿಐ ಅಧಿಕಾರಿಗಳೊಂದಿಗೆ ಮಾಹಿತಿ ಹಂಚಿಕೊಂಡಿರುವ ಕುರಿತು ಡಿಆರ್‌ಐ ಮೂಲಗಳು ತಿಳಿಸಿವೆ. ಮಾರ್ಚ್ 2ರಂದು ಮಯನ್ಮಾರ್‌ನಿಂದ 2 ಕೆ.ಜಿ, 158 ಗ್ರಾಂ ಚಿನ್ನದ ಸಮೇತ ದೆಹಲಿ ವಿಮಾನ ನಿಲ್ದಾಣಕ್ಕೆ ಬಂದಿಳಿದ ಮೂವರು ಆರೋಪಿಗಳನ್ನು ಡಿಆರ್‌ಐ ಅಧಿಕಾರಿಗಳು ಬಂಧಿಸಿದ್ದರು. ಬಂಧಿತರ ಶೂಗಳಲ್ಲಿ ಚಿನ್ನ ಸಿಕ್ಕಿತ್ತು.

ಮಾರ್ಚ್ 3ರಂದು ದುಬೈನಿಂದ ಬೆಂಗಳೂರಿನ ಕೆಂಪೇಗೌಡ ಇಂಟರ್ನ್ಯಾಷನಲ್ ಏರ್‌ಪೋರ್ಟ್‌ಗೆ ಬಂದಿಳಿದಿದ್ದ ರನ್ಯಾ ರಾವ್ ಬಳಿ 14 ಕೆ.ಜಿ 200 ಗ್ರಾಂ ಚಿನ್ನದ ಗಟ್ಟಿ ಪತ್ತೆಯಾಗಿತ್ತು. ಮಾರ್ಚ್ 6ರಂದು ದುಬೈನಿಂದ ಮುಂಬೈನ ಛತ್ರಪತಿ ಶಿವಾಜಿ ಇಂಟರ್ನ್ಯಾಷನಲ್ ಏರ್‌ಪೋರ್ಟ್‌ಗೆ ಬಂದಿಳಿದ ಯುಎಇ ಹಾಗೂ ಒಮಾನ್ ಪ್ರಜೆಗಳಿಬ್ಬರನ್ನು ಡಿಆರ್‌ಐ ಅಧಿಕಾರಿಗಳು ಬಂಧಿಸಿದ್ದರು. ಆರೋಪಿಗಳು ಧರಿಸಿದ್ದ ಬೆಲ್ಟ್‌ಗಳಲ್ಲಿ ಒಟ್ಟು 21 ಕೆ.ಜಿ 281 ಗ್ರಾಂ ಚಿನ್ನದ ಗಟ್ಟಿಗಳು ದೊರೆತಿದ್ದವು. ಒಂದು ವಾರದ ಅವಧಿಯಲ್ಲಿ ಬಯಲಾಗಿರುವ 3 ಪ್ರಕರಣಗಳ ನಡುವೆ ಪರಸ್ಪರ ಲಿಂಕ್ ಇರುವುದರ ಕುರಿತು ಶಂಕಿಸಿರುವ ಡಿಆರ್‌ಐ ಅಧಿಕಾರಿಗಳು, ಸಿಬಿಐ ಅಧಿಕಾರಿಗಳಿಗೂ ಮಾಹಿತಿ ರವಾನಿಸಿದ್ದಾರೆ. ಈ ಹಿಂದೆಯೂ ಸಹ ಸಾಕಷ್ಟು ಸಂದರ್ಭಗಳಲ್ಲಿ ಎರಡೂ ತನಿಖಾ ಸಂಸ್ಥೆಗಳು ಜಂಟಿಯಾಗಿ ಕಾರ್ಯಾಚರಣೆ ಕೈಗೊಂಡಿವೆ. 2018ರಲ್ಲಿ ದೆಹಲಿ ಇಂಟರ್ನ್ಯಾಷನಲ್ ಏರ್‌ಪೋರ್ಟ್‌ನಲ್ಲಿ 17.73 ಕೆ.ಜಿ ಚಿನ್ನ ಕಳ್ಳಸಾಗಣೆ ಮಾಡುತ್ತಿದ್ದ ಪ್ರಕರಣವನ್ನು ಡಿಆರ್‌ಐ ಬಯಲಿಗೆಳೆದಿತ್ತು. ಬಳಿಕ ಪ್ರಕರಣದ ತನಿಖೆ ಕೈಗೊಂಡಿದ್ದ ಸಿಬಿಐ ಅಧಿಕಾರಿಗಳು, 2021ರಲ್ಲಿ ಇಬ್ಬರು ಮಾಜಿ ಕಸ್ಟಮ್ಸ್ ಅಧಿಕಾರಿಗಳು ಸೇರಿದಂತೆ 11 ಜನರ ವಿರುದ್ಧ ಭ್ರಷ್ಟಾಚಾರ ಪ್ರಕರಣ ದಾಖಲಿಸಿಕೊಂಡಿದ್ದರು.


## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಚಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.

ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

9448225696

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)

udayavahininews@gmail.com


## ಭೂಮಿಗೆ ಮರಳಲಿದ್ದಾರೆ ಸುನೀತಾ ವಿಲಿಯಮ್ಸ್

• ಉದಯವಾಹಿನಿ, ಬೆಂಗಳೂರು

ಕಳೆದ ಒಂಬತ್ತು ತಿಂಗಳಿಂದ ಅಂತರಿಕ್ಷದಲ್ಲಿ ತ್ರಿಶಂಕು ಸ್ಥಿತಿಗೆ ಸಿಲುಕಿರುವ ನಾಸಾ ಗಗನಯಾನಿಗಳಾದ ಭಾರತೀಯ ಮೂಲದ ಸುನೀತಾ ವಿಲಿಯಮ್ಸ್ ಹಾಗೂ ಬೆರ್ರಿ ವಿಲ್‌ಮೋರ್ ಮಾ.16 (ಭಾನುವಾರ)ರಂದು ಕೊನೆಗೂ ಭೂಮಿಗೆ ಮರಳಲಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ, ಮಾ.16ರಂದು ಇಬ್ಬರೂ ಗಗನಯಾತ್ರಿಗಳನ್ನು ಸುರಕ್ಷಿತವಾಗಿ ಭೂಮಿಗೆ ಮರಳಿ ಕರೆತರಲಾಗುವುದು ಎಂದು ಸ್ಪಷ್ಟಪಡಿಸಿದೆ. ಎಲಾನ್ ಮಸ್ಕ್ ಒಡೆತನದ ಸ್ಪೇಸ್‌ಎಕ್ಸ್ ಡ್ರ್ಯಾಗನ್ ಗಗನ ನೌಕೆಯು, ಪರ್ಯಾಯ ಗಗನಯಾನಿಗಳೊಂದಿಗೆ ಮುಂದಿನ ವಾರ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ(ಐಎಸ್‌ಎಸ್) ಪ್ರಯಾಣಿಸಲಿದ್ದು, ಅಲ್ಲಿಂದ ಸುನೀತಾ ವಿಲಿಯಮ್ಸ್ ಮತ್ತು ಬೆರ್ರಿ ವಿಲ್‌ಮೋರ್ ಅವರನ್ನು ಭೂಮಿಗೆ ಕರೆತರಲಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸುನೀತಾ ವಿಲಿಯಮ್ಸ್ ಮತ್ತು ಬೆರ್ರಿ ವಿಲ್‌ಮೋರ್ ಅವರನ್ನು ಭೂಮಿಗೆ ಮರಳಿ ಕರೆತರುವಂತೆ, ಸ್ಪೇಸ್ ಎಕ್ಸ್ ಮಾಲೀಕ ಎಲಾನ್ ಮಸ್ಕ್ ಅವರಿಗೆ ಸೂಚನೆ ನೀಡಿದ್ದರು.

## ಭಾರತದ ಮುಡಿಗೆ ಮೂರನೇ ಕಿರೀಟ

# ಚಾಂಪಿಯನ್ ಭಾರತ

• ಉದಯವಾಹಿನಿ, ಬೆಂಗಳೂರು

ಸ್ಪಿನ್ನರ್‌ಗಳ ಬಿಗುದಾಳಿ ಮತ್ತು ನಾಯಕ ರೋಹಿತ್ ಶರ್ಮಾ ಅವರ ಅಮೋಘ ಬ್ಯಾಟಿಂಗ್‌ನ ನೆರವಿನಿಂದ ಭಾರತ ತಂಡ 3ನೇ ಬಾರಿಗೆ ಐಸಿಸಿ ಚಾಂಪಿಯನ್ಸ್ ಟ್ರೋಫಿ ಎತ್ತಿ ಹಿಡಿದಿದೆ. ಈ ಮೂಲಕ ಅತಿ ಹೆಚ್ಚು ಬಾರಿ ಚಾಂಪಿಯನ್ಸ್ ಟ್ರೋಫಿ ಗೆದ್ದ ತಂಡ ಎಂಬ ಗೌರವಕ್ಕೂ ಭಾರತ ತಂಡ ಪಾತ್ರವಾಗಿದೆ. ಚಾಂಪಿಯನ್ಸ್ ಟ್ರೋಫಿಯ ಫೈನಲ್ ಪಂದ್ಯದಲ್ಲಿ ನ್ಯೂಜಿಲ್ಯಾಂಡ್ ತಂಡವನ್ನು ಬಗ್ಗುಬಡಿದ ಭಾರತ ತಂಡ ಚಾಂಪಿಯನ್ಸ್ ಟ್ರೋಫಿ ಗೆದ್ದು ಬೀಗಿದೆ. ರೋಚಕ ಪಂದ್ಯದಲ್ಲಿ ಕಿವೀಸ್ ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿದ ರೋಹಿತ್ ಪಡೆ ಚಾಂಪಿಯನ್ಸ್ ಟ್ರೋಫಿಯನ್ನು ಎತ್ತಿಹಿಡಿದಿದೆ. ಆ ಮೂಲಕ 25 ವರ್ಷಗಳ ಹಿಂದಿನ ಫೈನಲ್ ಪಂದ್ಯದ ಸೋಲಿಗೆ ಸೇಡು ತೀರಿಸಿಕೊಂಡಿದೆ.

### ಶತಕದ ಜೊತೆಯಾಟ

**252 ರನ್ ಗುರಿಯನ್ನ ಬೆನ್ನಟ್ಟಿದ ಭಾರತ 49 ಓವರ್‌ಗಳಲ್ಲಿ 6 ವಿಕೆಟ್ ಕಳೆದು ಕೊಂಡು ಚಾಂಪಿಯನ್ ಆಯಿತು. ಚೇಸಿಂಗ್ ಆರಂಭಿಸಿದ ಭಾರತ ಮೊದಲ ವಿಕೆಟ್‌ಗೆ 105 ರನ್‌ಗಳ ಜೊತೆಯಾಟ ನೀಡಿ ಅದ್ಭುತ ಆರಂಭ ಪಡೆದುಕೊಂಡಿತು.ಗಿಲ್ 50 ಎಸೆತಗಳಲ್ಲಿ 1 ಸಿಕ್ಸರ್ ಸಹಿತ 31 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಕೊಹ್ಲಿ ಕೇವಲ 1 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. 16 ರನ್‌ಗಳ ಅಂತರದಲ್ಲಿ ರೋಹಿತ್ ಕೂಡ ಔಟ್ ಆದರು. ನಂತರ 4ನೇ ವಿಕೆಟ್‌ಗೆ ಒಂದಾದ ಶ್ರೇಯಸ್ ಅಯ್ಯರ್ ಹಾಗೂ ಅಕ್ಷರ್ ಪಟೇಲ್ 75 ಎಸೆತಗಳಲ್ಲಿ 61 ರನ್ ಸಿಡಿಸಿ ನಿರ್ಣಾಯಕ ಜೊತೆಯಾಟ ನೀಡಿ ಭಾರತವನ್ನು ಗೆಲುವಿನ ಸನಿಹ ತಂದರು. ಆದರೆ ಕೆಲವೇ ರನ್‌ಗಳ ಅಂತರದಲ್ಲಿ ಇಬ್ಬರು ಔಟ್ ಆದರು. ಶ್ರೇಯಸ್ ಅಯ್ಯರ್ 62 ಎಸೆತಗಳಲ್ಲಿ ತಲಾ 2 ಬೌಂಡರಿ, ಸಿಕ್ಸರ್ ಸಹಿತ 48 ರನ್‌ಗಳಿಸಿದರೆ, ಅಕ್ಷರ್ 40 ಎಸೆತಗಳಲ್ಲಿ ತಲಾ 1 ಬೌಂಡರಿ, ಸಿಕ್ಸರ್ ಸಹಿತ 29 ರನ್‌ಗಳಿಸಿದರು.ನಂತರ ಬಂದ ಕನ್ನಡಿಗ ಕೆಎಲ್ ರಾಹುಲ್ 33 ಎಸೆತಗಳಲ್ಲಿ ತಲಾ 1 ಬೌಂಡರಿ, ಸಿಕ್ಸರ್ ಸಹಿತ ಅಜೇಯ 34 ರನ್ ಗಳಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು. ಹಾರ್ದಿಕ್ ಪಾಂಡ್ಯ 18 ರನ್‌ಗಳಿಸಿದರೆ, ಜಡೇಜಾ ಅಜೇಯ 9 ರನ್‌ಗಳಿಸಿದರು.**

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಫೈನಲ್ ಪಂದ್ಯದಲ್ಲಿ ಭಾರತ ವಿರುದ್ಧ ಟಾಸ್ ಗೆದ್ದ ಕಿವೀಸ್ ಬಳಗ ಮೊದಲು ಬ್ಯಾಟಿಂಗ್ ಮಾಡಿತು. ನ್ಯೂಜಿಲೆಂಡ್ ತಂಡ 7 ವಿಕೆಟ್ ನಷ್ಟಕ್ಕೆ 251 ರನ್ ಕಲೆಹಾಕಿತು. ಈ ಗುರಿಯನ್ನು ಭಾರತ ಇನ್ನು 6 ಎಸೆತಗಳು ಬಾಕಿ ಇರುವಂತೆ 254 ರನ್ ಬಾರಿ ಗೆಲುವು ಸಾಧಿಸಿತು. ಮೊದಲು ಬ್ಯಾಟಿಂಗ್ ಆರಂಭಿಸಿರುವ ಕಿವೀಸ್ ಪಡೆ ಭರ್ಜರಿ ಆರಂಭ ಪಡೆಯಿತು. ಕಿವೀಸ್ ಪರ ಆರಂಭಿಕರಾಗಿ ಕಣಕ್ಕಿಳಿದ ರಚಿನ್ ರವೀಂದ್ರ (37 ರನ್) ಮತ್ತು ವಿಲ್ ಯಂಗ್ (15 ರನ್) ಜೋಡಿ ಮೊದಲ ವಿಕೆಟ್ ಗೆ 57 ರನ್ ಗಳ ಭರ್ಜರಿ ಜೊತೆಯಾಟವಾಡಿತು. ಆದರೆ ಈ ಹಂತದಲ್ಲಿ ದಾಳಿಗಿಳಿದ ಮಿಸ್ಟ್ರಿ ಸ್ಪಿನ್ನರ್ ವರುಣ್ ಚಕ್ರವರ್ತಿ ವಿಲ್ ಯಂಗ್ ರನ್ನು ಔಟ್ ಮಾಡಿ ಭಾರತಕ್ಕೆ ಮೊದಲ ಮುನ್ನಡೆ ತಂದಿತ್ತರು. ಬಳಿಕ 37 ರನ್ ಗಳಿಸಿ ಅಪಾಯಕಾರಿಯಾಗುತ್ತಿದ್ದ ರಚಿನ್ ರವೀಂದ್ರ ಕುಲದೀಪ್ ಯಾದವ್ ರ ಮೊದಲ ಎಸೆತದಲ್ಲೇ ಕ್ಲೀನ್ ಬೌಲ್ಡ್ ಆದರು. ಬಳಿಕ ಕೇನ್ ವಿಲಿಯಮ್ಸನ್ ಕೂಡ ಕುಲದೀಪ್ ಯಾದವ್‌ಗೆ ವಿಕೆಟ್ ಒಪ್ಪಿಸಿದರು.

ಈ ಹಂತದಲ್ಲಿ ಕ್ರೀಸ್ ಗೆ ಬಂದ ಡರಿಲ್ ಮೆಚೆಲ್ ಕಿವೀಸ್ ಬ್ಯಾಟಿಂಗ್‌ಗೆ ಬಲ ತುಂಬಿದರು. 101 ಎಸೆತಗಳನ್ನು ಎದುರಿಸಿದ ಮಿಚೆಲ್ 3 ಬೌಂಡರಿ ಸಹಿತ 63 ರನ್ ಕಲೆಹಾಕಿದರು. ಅವರಿಗೆ ಟಾಮ್ ಲಾಥಮ್ (14 ರನ್) ಮತ್ತು ಗ್ಲೆನ್ ಫಿಲಿಪ್ಸ್ (34 ರನ್) ಉತ್ತಮ ಸಾಥ್ ನೀಡಿದರು. ಬಳಿಕ ಕ್ರೀಸ್‌ಗೆ ಬಂದ ಬ್ರೇಸ್ ವೆಲ್ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿ ಕಿವೀಸ್ 250ರ ಗಡಿ ದಾಟುವಂತೆ ನೋಡಿಕೊಂಡರು. ಬ್ರೇಸ್ ವೆಲ್ ಕೇವಲ 40 ಎಸೆತಗಳಲ್ಲಿ 2 ಸಿಕ್ಸರ್ ಮತ್ತು 3 ಬೌಂಡರಿ ಸಹಿತ ಅಜೇಯ 53 ರನ್ ಗಳಿಸಿದರು. ಅಂತಿಮವಾಗಿ ನ್ಯೂಜಿಲೆಂಡ್ ತಂಡ ನಿಗದಿತ 50 ಓವರ್ ಗಳಲ್ಲಿ 7 ವಿಕೆಟ್ ನಷ್ಟಕ್ಕೆ 251ರನ್ ಕಲೆಹಾಕಿ ಭಾರತಕ್ಕೆ ಗೆಲಲ್ಲು 252ರನ್ ಗಳ ಸವಾಲಿನ ಗುರಿ ನೀಡಿತು. ಇನ್ನು ಭಾರತದ ಪರ ವರುಣ್ ಚಕ್ರವರ್ತಿ ಮತ್ತು ಕುಲದೀಪ್ ಯಾದವ್ ತಲಾ 2 ವಿಕೆಟ್ ಪಡೆದರೆ, ಶಮಿ ಮತ್ತು ರವೀಂದ್ರ ಜಡೇಜಾ ತಲಾ 1 ವಿಕೆಟ್ ಪಡೆದರು.







### ಚಾಂಪಿಯನ್ಸ್ ಟ್ರೋಫಿ ಗೆದ್ದ ತಂಡಗಳ ವಿವರ

- 1998, ದಕ್ಷಿಣ ಆಫ್ರಿಕಾ
- 2000, ನ್ಯೂಜಿಲೆಂಡ್
- 2002, ಭಾರತ/ ಶ್ರೀಲಂಕಾ
- ಸಿನಿಮಾ ಮತ್ತು ಮನೋರಂ...
- 2004, ವೆಸ್ಟ್ ಇಂಡೀಸ್
- ರಾಜಕೀಯ
- 2006, ಆಸ್ಟ್ರೇಲಿಯಾ
- 2009, ಆಸ್ಟ್ರೇಲಿಯಾ
- 2013, ಭಾರತ
- 2017, ಪಾಕಿಸ್ತಾನ
- 2025,ಭಾರತ

### ಲಾರಾ ದಾಖಲೆ ಸಮಬಲ

**ಈ ದಾಖಲೆಯ ಮೂಲಕ ರೋಹಿತ್ ಶರ್ಮಾ ವೆಸ್ಟ್ ಇಂಡೀಸ್ ಮಾಜಿ ನಾಯಕ ಬ್ರಿಯಾನ್ ಲಾರಾ ಅವರ ದಾಖಲೆ ಸರಿಗಟ್ಟಿದ್ದಾರೆ. ಲಾರಾ 1998ರ ಅ. ನಿಂದ 1999ರ ಮೇ ವರೆಗೂ 12 ಸತತ 12 ಪಂದ್ಯಗಳಲ್ಲಿ ಟಾಸ್ ಸೋತಿದ್ದರು. ಅಂತೆಯೇ ಭಾರತಕ್ಕೆ ಇದು ಸತತ 15ನೇ ಟಾಸ್ ಸೋಲಾಗಿದ್ದು ಈ ಹಿಂದಿನ ಮೂರು ಪಂದ್ಯಗಳಲ್ಲಿ ಶುಭ್ ಮನ್ ಗಿಲ್ ತಂಡದ ನೇತೃತ್ವ ವಹಿಸಿದ್ದರು. ಆ ಪಂದ್ಯಗಳಲ್ಲೂ ಭಾರತ ಟಾಸ್ ಸೋತಿತ್ತು.**

**ಪಂದ್ಯಶ್ರೇಷ್ಠ ರೋಹಿತ್ ಶರ್ಮಾ**

### ಕನ್ನಡಿಗನ ಕೈಸೇರಿದ ಗೋಲ್ಡನ್ ಬ್ಯಾಟ್



**2025ರ ಚಾಂಪಿಯನ್ಸ್ ಟ್ರೋಫಿಯ ಫೈನಲ್‌ನಲ್ಲಿ ಪಂದ್ಯದಲ್ಲಿ ಸೋತರೂ, ಕಿವೀಸ್ ತಂಡದ ಆರಂಭಿಕ ಆಟಗಾರ ರಚಿನ್ ರವೀಂದ್ರ, ಇಡೀ ಟೂರ್ನಿಯ ಹೀರೋ ಆಗಿ ಹೊರಹೊಮ್ಮಿದರು. ಕಿವೀಸ್ ಪರ ಇಡೀ ಪಂದ್ಯಾವಳಿಯ ಉದ್ದಕ್ಕೂ ಅದ್ಭುತವಾಗಿ ಬ್ಯಾಟಿಂಗ್ ಮಾಡಿದ ರಚಿನ್ ಸರಣಿ ಶ್ರೇಷ್ಠ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಅಲ್ಲದೆ ಅವರಿಗೆ ಗೋಲ್ಡನ್ ಬ್ಯಾಟ್ ಸಿಕ್ಕಿದೆ. ಇಡೀ ಪಂದ್ಯಾವಳಿಯಲ್ಲಿ ಆಡಿದ 4 ಇನ್ನಿಂಗ್ಸ್‌ಗಳಲ್ಲಿ 263 ರನ್ ಕಲೆಹಾಕಿದ ರಚಿನ್ ರವೀಂದ್ರ, ಈ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರರ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದುಕೊಂಡಿದ್ದರು. ವಾಸ್ತವವಾಗಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್‌ಗೆ ಗೋಲ್ಡನ್ ಬ್ಯಾಟ್ ನೀಡಲಾಗುತ್ತದೆ.**

## 71 ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಸಾಧ್ಯತೆ

• ಉದಯವಾಹಿನಿ, ಬಳ್ಳಾರಿ

ಬಳ್ಳಾರಿ ಬಿರುಬಿಸಿಲಿಗೆ ಹೆಸರಾದ ಜಿಲ್ಲೆ. ಬೇಸಿಗೆ ಬಂತೆಂದರೆ ಇಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರುತ್ತದೆ. ಈ ಬಾರಿಯ ಬೇಸಿಗೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 71 ಗ್ರಾಮಗಳು ಕುಡಿಯುವ ನೀರಿನ ಅಭಾವ ಎದುರಿಸಬಹುದಾದ ಸಾಧ್ಯತೆಯಿದೆ ಎಂದು ಬಳ್ಳಾರಿ ಜಿಲ್ಲಾಡಳಿತ ಅಂದಾಜಿಸಿದೆ. ಹಾಗಾಗಿ ಕುಡಿಯುವ ನೀರಿನ ಸಮಸ್ಯೆ ಎದುರಿಸಲು ಸಿದ್ಧವಿರುವಂತೆ ಸಂಬಂಧಿಸಿದ ಇಲಾಖೆಗಳಿಗೆ ಸೂಚಿಸಿದೆ. ಬೇಸಿಗೆ ಪ್ರಾರಂಭದ ಹಂತದಲ್ಲಿಯೇ ಬಳ್ಳಾರಿ ಜಿಲ್ಲೆಯಲ್ಲಿ ಕೆರೆಗಳ ಒಡಲು ಬರಿದಾಗುತ್ತಿದ್ದು, ಅಂತರ್ಜಲಮಟ್ಟ ಕುಸಿಯುತ್ತಿದೆ. ಈ ಬಾರಿ ಬೇಸಿಗೆಯ ಬಿಸಿಲ ತೀವ್ರತೆ ಸಾಮಾನ್ಯಕ್ಕಿಂತ ಹೆಚ್ಚು ಇರಲಿದೆ ಎಂದು ಹವಾಮಾನ ಇಲಾಖೆ ಕೂಡ ಹೇಳಿರುವುದರಿಂದ ಕುಡಿಯುವ ನೀರಿನ ಅಭಾವದ ನಡುವೆ ಈ ಬಿರುಬೇಸಿಗೆಯನ್ನು ತಾಳಿಕೊಳ್ಳುವುದು ಹೇಗೆ ಎಂಬ ಪ್ರಶ್ನೆ ಸಾರ್ವಜನಿಕರನ್ನು ಕಾಡುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ನೀರಿಗಾಗಿ ಕೊಡ ಹಿಡಿದು ಪರದಾಡುವ ಪರಿಸ್ಥಿತಿ ಉಂಟಾಗಿದೆ.

ಜಿಲ್ಲೆಯ ಗ್ರಾಮೀಣ ಪ್ರದೇಶದ 64 ಕೆರೆಗಳು ಶೇ.75 ರಿಂದ 80ಕ್ಕಿಂತ ಹೆಚ್ಚು ನೀರಿನ ಸಂಗ್ರಹವಿದೆ. ಆದರೆ ಈ ಬಾರಿ 41 ರಿಂದ 45 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು ತಾಪಮಾನ ಇರಬಹುದು ಎಂಬ ಅಂದಾಜಿದ್ದು, ಈ ಜಲ ಸಂಗ್ರಹ ಬತ್ತಿಹೋಗುವ ಸಾಧ್ಯತೆಗಳಿವೆ. ಬಳ್ಳಾರಿ ತಾಲ್ಲೂಕಿನ ಯಾಳ್ಪಿ, ಕಾರೇಕಲ್ಲು, ಕೆ.ವೀರಾಪುರ, ಸಿಡಿಗಿನಮೊಳ, ಜೋಳದರಾಶಿ, ಚೇಳಗುರ್ಕಿ, ಪಿ.ಡಿ.ಹಳ್ಳಿ, ಮೀನಹಳ್ಳಿ, ಹಲಕುಂದಿ, ಬೆಳಗಲ್ಲು, ರೂಪನಗುಡಿ, ರಾಯಾಪುರ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಿಗಡಾಯಿಸುವ ಸಾಧ್ಯತೆ ಇದೆ. ಕುಡಿಯುವ ನೀರಿನ ಸಮಸ್ಯೆ ಕಂಡುಬರುವ ಗ್ರಾಮಗಳಲ್ಲಿ ಟ್ಯಾಂಕ್ ವ್ಯವಸ್ಥೆ, ಕೆರೆ, ಕೊಳವೆಬಾವಿ, ಬೋರ್‌ವೆಲ್ ಮತ್ತು ಆರ್‌ಒ ಪ್ಲಾಂಟ್‌ಗಳ ದುರಸ್ತಿ ಮಾಡಬೇಕು ಎಂಬುವುದು ಗ್ರಾಮಸ್ಥರ ಒತ್ತಾಸೆಯಾಗಿದೆ. ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದ ನಂತರ ಕ್ರಮಕೈಗೊಳ್ಳುವ ಬದಲು ಮೊದಲೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ತುಂಗಭದ್ರಾ ಜಲಾಶಯ ಎಲ್‌ಎಲ್‌ಸಿ ಕಾಲುವೆಯಿಂದ ಕೆರೆಗಳಿಗೆ ನೀರು ಭರ್ತಿ ಮಾಡಬೇಕು ಎಂಬುವುದು ಜನರು ಆಗ್ರಹವಾಗಿದೆ.



**ಸಮಸ್ಯೆ ನಿಭಾಯಿಸಲು ಸಜ್ಜು**

### ಬೇಸಿಗೆ ನಿಭಾಯಿಸಲು ಹರಸಾಹಸ

**ನಗರದಲ್ಲಿ 411 ಬೋರ್‌ವೆಲ್‌ಗಳಿದ್ದು, ಈ ಪೈಕಿ 327 ಚಾಲ್ತಿಯಲ್ಲಿದ್ದರೆ, 7 ಬೋರ್‌ವೆಲ್ ಬತ್ತಿ ಹೋಗಿವೆ. ಇನ್ನುಳಿದ 75 ಮೋಟಾರ್‌ಗಳು ರಿಪೇರಿ ಹಂತದಲ್ಲಿವೆ. 248 ಕೈ ಪಂಪ್‌ಗಳಿದ್ದು, 168 ಬಳಕೆಯಲ್ಲಿದ್ದರೆ, 62 ಪಂಪ್‌ಗಳು ದುರಸ್ತೆಯಲ್ಲಿವೆ. ನಗರದಲ್ಲಿ ಒಟ್ಟು 13 ಬಾವಿಗಳಿದ್ದು, ನೀರಿನ ಸಮಸ್ಯೆ ಸರಿದೂಗಿಸಲು ಬಾವಿಗಳ ಸ್ವಚ್ಛತೆ ಕಾರ್ಯಕ್ಕೆ ಪಾಲಿಕೆ ಮುಂದಾಗಿದೆ. ಆ ಮೂಲಕ ನೀರು ಸರಬರಾಜಿಗೆ ನಿರ್ಧರಿಸಿದೆ. ಬೇಸಿಗೆಯಲ್ಲಿ ಎದುರಾಗುವ ನೀರಿನ ಸಮಸ್ಯೆಗೆ ಈಗಿನಿಂದಲೇ ನೀರಿನ ಮೂಲಗಳಿಗೆ ಪಾಲಿಕೆ ಬೆನ್ನುಬಿದ್ದಿದೆ.**

## ಭೂಮಿ ಮಾರಾಟ ಮಾಡಬೇಡಿ; ಮುಂದೆ ನಿಮ್ಮ ಆಸ್ತಿ ಮೌಲ್ಯ ಹೆಚ್ಚಲಿದೆ

• ಉದಯವಾಹಿನಿ, ಬೆಂಗಳೂರು

■ ಚೀನಾದಿಂದ ರೇಷ್ಮೆ ಆಮದು ಕಡಿಮೆಯಾಗಿದೆ ■ ಆದ ಕಾರಣಕ್ಕೆ ರೇಷ್ಮೆಗೆ ಉತ್ತಮ ಬೆಲೆ ಬಂದಿದೆ ■ ಅದಕ್ಕೆ ಮಾರಾಟ ಮಾಡಬೇಡಿ

ಯಾರೂ ಸಹ ಭೂಮಿಯನ್ನು ಮಾರಾಟ ಮಾಡಲು ಹೋಗಬೇಡಿ. ಮುಂದಕ್ಕೆ ನಿಮ್ಮ ಭೂಮಿಯ ಬೆಲೆ ಹೆಚ್ಚಲಿದೆ ಎಂದು ಕನಕಪುರ ಕ್ಷೇತ್ರದ ಜನರಿಗೆ ಡಿಕೆ ಶಿವಕುಮಾರ್ ಸಲಹೆ ನೀಡಿದ್ದಾರೆ.

ಕನಕಪುರ ತಾಲ್ಲೂಕಿನ ಭೂಹಳ್ಳಿ ಹೊಸಕೆರೆ ಬಳಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ನನ್ನ ಕ್ಷೇತ್ರಕ್ಕೆ ಸುಮಾರು ರೂ.400 ಕೋಟಿಗಳಷ್ಟು ಅನುದಾನ ತಂದಿದ್ದೇನೆ. ಒಂದೇ ಸಲ ಅನುದಾನ ತಂದರೆ ಬೇರೆ ಕ್ಷೇತ್ರದವರು ಪ್ರಶ್ನೆ ಮಾಡುತ್ತಾರೆ. ಹಂತ, ಹಂತವಾಗಿ ಅನುದಾನ ತಂದು ಅಭಿವೃದ್ಧಿ ಕೆಲಸದ ಮೂಲಕ ಜನರ ಋಣ ತೀರಿಸಲಾಗುವುದು. ರೂ.250 ಕೋಟಿ ಮೊತ್ತದ ಕಾಮಗಾರಿಗಳು ನೀರಾವರಿ ಇಲಾಖೆಯಿಂದಲೇ ನಡೆಯುತ್ತಿದೆ ಎಂದರು.

ಚೀನಾದಿಂದ ರೇಷ್ಮೆ ಆಮದು ಕಡಿಮೆಯಾಗಿದೆ. ಆದ ಕಾರಣಕ್ಕೆ ರೇಷ್ಮೆಗೆ ಉತ್ತಮ ಬೆಲೆ ಬಂದಿದೆ. ಅದಕ್ಕೆ ಯಾರೂ ಸಹ ಭೂಮಿಯನ್ನು ಮಾರಾಟ ಮಾಡಲು ಹೋಗಬೇಡಿ. ಮುಂದಕ್ಕೆ ನಿಮ್ಮ ಭೂಮಿಯ ಬೆಲೆ ಹೆಚ್ಚಲಿದೆ. ಶಿಡ್ಲಘಟ್ಟ ಭಾಗದಲ್ಲಿ ನಮಗಿಂತ ಹೆಚ್ಚು ರೇಷ್ಮೆ ಬೆಳೆಯುತ್ತಿದ್ದಾರೆ. ಸಿಲ್ಕ್ ಮತ್ತು ಮಿಲ್ಕ್ ಅನ್ನು ಕೋಲಾರ ಭಾಗದಲ್ಲಿ ಹೆಚ್ಚು ಉತ್ಪಾದನೆ ಮಾಡುತ್ತಿದ್ದಾರೆ ಎಂದರು.

**ಅನುದಾನ ತಂದು ಅಭಿವೃದ್ಧಿ ಕೆಲಸ**

ಜನರ ಆಸ್ತಿ ಮೌಲ್ಯ ಹೆಚ್ಚಾಗಲಿದೆ

ಪಾದ್ದರೆಯಿಂದ ಭೂಹಳ್ಳಿ ಅರಣ್ಯ ತಪಾಸಣಾ ಕೇಂದ್ರದ ವರೆಗೆ ಸುಮಾರು ರೂ.13 ಕೋಟಿ ವೆಚ್ಚದಲ್ಲಿ ರಸ್ತೆ, ದೊಡ್ಡಆಲಹಳ್ಳಿಯಿಂದ ಕಬ್ಬಾಳಿನ ತನಕ 40 ಕೋಟಿ ವೆಚ್ಚದಲ್ಲಿ ರೂ.14.5 ಕಿಮೀ ಉದ್ದದ ರಸ್ತೆ ಅಗಲೀಕರಣ ಮಾಡಲಾಗುತ್ತಿದೆ. ಇದರಿಂದ ನಮ್ಮ ಜನರ ಆಸ್ತಿ ಮೌಲ್ಯ ಹೆಚ್ಚಾಗಲಿದೆ ಎಂದು ಹೇಳಿದರು.

ಕನಕಪುರ, ಸಾತನೂರು, ದೊಡ್ಡ ಆಲಹಳ್ಳಿ ರಸ್ತೆಗಳನ್ನು ಅಗಲೀಕರಣ ಮಾಡಲು ಸಾಧ್ಯವಿಲ್ಲ ಎಂದು ಒಂದಷ್ಟು ಜನ ನಗುತ್ತಿದ್ದರು. ಆದರೆ ಇಂದು ಕೆಲಸವನ್ನು ಮಾಡಿ ತೋರಿಸಿದ್ದೇವೆ. ರಸ್ತೆ ಅಭಿವೃದ್ಧಿಗೆ ಎಂದು ರೂ.135 ಕೋಟಿ, ಹೊಸಕೆರೆ ತುಂಬಿಸಲು ರೂ.108 ಕೋಟಿ ಖರ್ಚು ಮಾಡಲಾಗುತ್ತಿದೆ.



### ಕ್ಷೇತ್ರದ ಎಲ್ಲಾ ಕೆರೆಗಳನ್ನು ತುಂಬಿಸಲು ಕ್ರಮ

**ನನ್ನ ಕ್ಷೇತ್ರದಲ್ಲಿ ಎಷ್ಟು ಕೆರೆಗಳನ್ನು ತುಂಬಿಸಲು ಸಾಧ್ಯವೋ ಅಷ್ಟು ಕೆರೆಗಳನ್ನು ತುಂಬಿಸುತ್ತೇನೆ. ಹಂತ, ಹಂತವಾಗಿ ಕೆಲಸಗಳನ್ನು ಮಾಡುತ್ತೇನೆ. ಅಧಿಕಾರ ಅವಧಿಯಲ್ಲಿ ಎಲ್ಲಾ ಕಡೆ ನೀರು ತುಂಬಿ ಹರಿಯಬೇಕು. ಚನ್ನಪಟ್ಟಣ, ರಾಮನಗರ, ಮಾಗಡಿಗೆ ಅನೇಕ ಕಾರ್ಯಕ್ರಮಗಳನ್ನು ನೀಡಲಾಗಿದೆ. ಅಲ್ಲಿನ ಜನಕ್ಕೂ ನಾನು ಕೆಲಸ ಮಾಡಿಸುವುದಾಗಿ ಮಾತು ಕೊಟ್ಟಿದ್ದೇನೆ ಎಂದರು. ಮೇಕೆದಾಟು ಕಚೇರಿ ಪ್ರಾರಂಭ ಮಾಡಲಾಗಿದ್ದು. ಎಷ್ಟು ಜಮೀನು ಮುಳುಗಡೆಯಾಗುತ್ತದೆ ಎಂದು ಅಂದಾಜು ಮಾಡಲು ಕಂದಾಯ ಹಾಗೂ ಅರಣ್ಯ ಅಧಿಕಾರಿಗಳು ಕೆಲಸ ಪ್ರಾರಂಭ ಮಾಡಿದ್ದಾರೆ. ಕಾವೇರಿ ನದಿಯಿಂದ ನೀರನ್ನು ತಂದು ಜನರ ಬದುಕನ್ನು ಬದಲಾವಣೆ ಮಾಡುವ ದೊಡ್ಡ ಕೆಲಸ ನಡೆಯುತ್ತಿದೆ ಎಂದರು.**

ನಲ್ಲಳ್ಳಿ- ಮುಲ್ಲಳ್ಳಿ ಸಂಪರ್ಕ ಸೇತುವೆಗೆ ರೂ.11 ಕೋಟಿ, ಅರ್ಕಾವತಿಯಿಂದ ನೀರನ್ನು ಎತ್ತಿ ದೊಡ್ಡ ಆಲಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಿಗೆ ಸೂಕ್ಷ್ಮ ನೀರಾವರಿ ಕಲ್ಪಿಸಲು ರೂ. 70 ಕೋಟಿಯ ಕಾಮಗಾರಿ ನಡೆಸಲಾಗುತ್ತಿದೆ. ಇದರಿಂದ 8 ಗ್ರಾಮಗಳ 2 ಸಾವಿರ ಎಕರೆ ಭೂಮಿಗೆ ಉಪಯೋಗವಾಗಲಿದೆ. ಅರ್ಕಾವತಿ ನದಿಗೆ ಅಡ್ಡಲಾಗಿ ಕೊಕ್ಕರೆ ಹೊಸಹಳ್ಳಿ ಬಳಿ ಸಂಪರ್ಕ ಸೇತುವೆ ನಿರ್ಮಾಣಕ್ಕೆ ರೂ.10 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಒಬ್ಬ ವ್ಯಕ್ತಿಯ ಹಿಂದೆ ಎಷ್ಟು ಜನ ಇದ್ದಾರೆ ಎನ್ನುವುದಕ್ಕಿಂತ ಆತ ಎಷ್ಟು ಜನರ ಬದುಕನ್ನು ಬದಲಾವಣೆ ಮಾಡಿದ ಎನ್ನುವುದು ಮುಖ್ಯ. ಕೆರೆ ತುಂಬಿಸುವ ಯೋಜನೆಯಿಂದ ಸಾವಿರಾರು ರೈತರಿಗೆ ಉಪಯೋಗವಾಗುತ್ತದೆ. ಅಂತರ್ಜಲ ಹೆಚ್ಚುತ್ತದೆ, ಭೂಮಿ ಸದಾ ಹಸಿರಾಗಿ ಇರುತ್ತದೆ. ಕೆರೆ ತುಂಬಿಸುವ ಯೋಜನೆ ಅನುಷ್ಠಾನಕ್ಕೆ ಸಾಕಷ್ಟು ಕಷ್ಟ ಪಟ್ಟಿದ್ದೇವೆ. ಎಲ್ಲಿ ಶ್ರಮ ಇದೆಯೋ ಅಲ್ಲಿ ಫಲವಿದೆ ಎಂದರು. ಕ್ಷೇತ್ರ ಪುನರ್ ವಿಂಗಡಣೆ ವೇಳೆ ಎಸ್. ಎಂ.ಕೃಷ್ಣ ಅವರು ಹಾಗೂ ಕುಲದೀಪ್ ಸಿಂಗ್ ಅವರ ಪ್ರಯತ್ನದ ಫಲವಾಗಿ ಈ ಹೋಬಳಿ ಕನಕಪುರದಲ್ಲಿಯೇ ಉಳಿಯಿತು. ಕಾವೇರಿ ಸಂಗಮದಿಂದ ನೀರು ತಂದು ಈ ಭಾಗದ 21 ಕೆರೆಗಳಿಗೆ ತುಂಬಿಸುವ ಯೋಜನೆ ನನಗೆ ತೃಪ್ತಿ ನೀಡುತ್ತಿದೆ ಎಂದು ಹೇಳಿದರು.

### ಕನಕಪುರ ಜನರ ಸೇವೆಗೆ ಅವಕಾಶ

**ದೇವೆಗೌಡರು ಹಾಗೂ ಕುಮಾರಸ್ವಾಮಿ ಅವರು ಸಾತನೂರು ಹೋಬಳಿಯನ್ನು ರಾಮನಗರಕ್ಕೆ ಸೇರಿಸಲು ಹೊರಟಿದ್ದರು. ಕನಕಪುರದಲ್ಲಿಯೇ ಸಾತನೂರನ್ನು ಉಳಿಸಿಕೊಳ್ಳಬೇಕು ಎಂದು ಸ್ಥಳೀಯ ಮುಖಂಡರಿಂದ ದೊಡ್ಡ ಹೋರಾಟ ನಡೆದ ಕಾರಣಕ್ಕೆ ನನಗೆ ನಿಮ್ಮ ಸೇವೆ ಮಾಡುವ ಅವಕಾಶ ಸಿಕ್ಕಿದೆ**

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,771/Gram24ct ₹8,040/Gram22ct | ಬೆಳ್ಳಿ: ₹99.10/Gram



**ಸಿದ್ಧಸೂಕ್ತಿ**

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

## ಇನ್ನೊಬ್ಬರೊಂದಿಗೆ ಹೋಲಿಕೆ

ಅತ್ಯುತ್ತಮ ವಸ್ತು ವ್ಯಕ್ತಿಯನ್ನು ಕಂಡು ಅದರಂತೆ ಅವನಂತೆ ಅವಳಂತೆ ಇದು ಇವನು ಇವಳು ನಾನು ಆಗಬೇಕು ಎಂದು ಬಯಸುವೆವು, ತಪ್ಪಲ್ಲ. ಹಾಗಾಗಲು ಅದಕ್ಕನುಗುಣವಾದ ಪರಿಸರ ಪರಿಕರ ಸಾಧನೆಗಳು ಬೇಕೇಬೇಕು. ಒಂದೇ ತೆರನಾದ ಭೂಮಿಯಲ್ಲಿ ಬಿತ್ತಿದ ಒಂದೇ ತೆರನಾದ ಬೀಜಗಳು ಒಂದೇ ತೆರನಾದ ಪಸಲನ್ನು ನೀಡಲಾರವು. ರಸ್ತೆ ಬದಿಯ ಗಿಡ ಮರಗಳು ಆಗಾಗ ಪ್ರಾಣಿಗಳ ತುತ್ತಿಗೆ ಈಡಾಗುತ್ತಾ ಕೊಸರಿಕೊಂಡು ಬೆಳೆದು ಮೇಲೇಳಲು ನಿರಂತರ ಶ್ರಮಪಟ್ಟರೂ ಸುರಕ್ಷಿತ ಗಿಡಮರದಂತೆ ಬೆಳೆಯಲು ಸಾಧ್ಯವಾಗದಿರಬಹುದು. ನಿರಂತರ ನೀರು ಹರಿಯುವ ಶೆಗಣಿ ಗೊಬ್ಬರ ಬೀಳುವ ಜಾಗದಲ್ಲಿನ ಗಿಡ ಮರ ದಷ್ಟಪುಷ್ಟವಾಗಿ ಬೆಳೆದು ನಳನಳಿಸುವುದು. ಅದೇ ಬೀಜ ಕಲ್ಲು ಬಂಡೆಯ ಮೇಲೆ ಬಿದ್ದರೆ ಮೊಳಕೆಯೊಡೆಯದು. ಉತ್ತಮ ಭೂಮಿಯಲ್ಲಿ ಬಿದ್ದ ಜೊಳ್ಳು ಬೀಜವೂ ಮೊಳಕೆಯೊಡೆಯದು. ಬೀಜ ಕ್ಷೇತ್ರಗಳೆರಡೂ ಉತ್ತಮವಾಗಿದ್ದರೂ ನೀರು ಗೊಬ್ಬರ ಹದ ಹವಾಮಾನ ಸುರಕ್ಷೆಗಳಿಲ್ಲದಿದ್ದಲ್ಲಿ ಪೈರು ಫಲಿಸದು. ವಿದ್ಯೆ ಸಂಸ್ಕಾರ ಕೊಡದೇ ಶೂದ್ರ ಬ್ರಾಹ್ಮಣನಾಗದಂತೆ. ಎಲ್ಲ ಇದ್ದರೂ ಕೆಲವೊಮ್ಮೆ ನಿರೀಕ್ಷೆ ಈಡೇರದು. ಅದೃಷ್ಟ ಅವಕಾಶಗಳ ಕೊರತೆಯೂ ಕಾರಣ. ಅದೃಷ್ಟವಿಲ್ಲದ ಪ್ರತಿಭೆ ಬೀದಿಯಲ್ಲಿ ಬೆವರಿಳಿಸಬಹುದು, ಪ್ರತಿಭೆಯಿಲ್ಲದ ಅದೃಷ್ಟ ಸಿಂಹಾಸನದಲ್ಲಿ ವಿಜೃಂಭಿಸಬಹುದು. ಹೋಲಿಸಿ ಅಳೆಯುವುದು ತಪ್ಪಾಗಬಹುದು.

## ಬೆಂಗಳೂರಲ್ಲಿ ಅಂತರ್‌ಜಲ ಮಟ್ಟ ಕುಸಿತ; ನೀರಿನ ಬವಣೆ ನೀಗಿಸಲು ಜಲಮಂಡಳಿ ಸಜ್ಜು, ಟ್ಯಾಂಕರ್ ಮಾಲೀಕರೊಂದಿಗೆ ಒಪ್ಪಂದ

# ರಾಜಧಾನಿಯಲ್ಲಿ ಅಂತರ್ಜಲ ಮಟ್ಟ ಕುಸಿಯುವ ಆತಂಕ

• ಉದಯವಾಹಿನಿ, ಬೆಂಗಳೂರು

ರಾಜಧಾನಿಯಲ್ಲಿ ಅಂತರ್ಜಲ ಮಟ್ಟ ಕುಸಿಯುವ ಆತಂಕವಿರುವ 80 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಜಲಮಂಡಳಿಯು ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದೆ. ಇದಕ್ಕಾಗಿಯೇ 287 ಖಾಸಗಿ ಟ್ಯಾಂಕರ್‌ಗಳನ್ನು ಬಾಡಿಗೆಗೆ ಪಡೆಯಲು ತೀರ್ಮಾನಿಸಿದೆ. ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್ಸಿ) ನಗರದ ಹಲವೆಡೆ ಅಧ್ಯಯನ ನಡೆಸಿದ್ದು, ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳೂ ಸೇರಿದಂತೆ 80 ವಾರ್ಡ್‌ಗಳಲ್ಲಿ ಅಂತರ್ಜಲ ಮಟ್ಟ ಕುಸಿಯಲಿದೆ ಎಂದು ವರದಿ ಸಲ್ಲಿಸಿದೆ. ಹೀಗಾಗಿ, ಜಲಮಂಡಳಿಯು ಬೇಸಿಗೆಯಲ್ಲಿ ಕುಡಿಯುವ ನೀರಿಗೆ ತತ್ವಾರ ಉಂಟಾಗುವುದನ್ನು ತಪ್ಪಿಸಲು ಸಿಂಟೆಕ್ಸ್ ಟ್ಯಾಂಕ್‌ಗಳು ಹಾಗೂ ಖಾಸಗಿ ಟ್ಯಾಂಕರ್‌ಗಳ ಮೊರೆ ಹೋಗಿದೆ.

**ಸಾವಿರ ಲೀಟರ್‌ಗೆ 90 ರೂ.:** ಕಳೆದ ಬೇಸಿಗೆಯಲ್ಲಿ ನಗರದ ಹಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿತ್ತು. ಹೀಗಾಗಿ, 257 ಪ್ರದೇಶಗಳಲ್ಲಿ 700ಕ್ಕೂ ಅಧಿಕ ಸಿಂಟೆಕ್ಸ್‌ಗಳನ್ನು ಅಳವಡಿಸಿ, ಜನರ ದಾಹ ನೀಗಿಸಲಾಗಿತ್ತು. ಈ ಸಿಂಟೆಕ್ಸ್‌ಗಳನ್ನು ಮರುಬಳಕೆ ಮಾಡಲಾಗುತ್ತಿದೆ.

ಸಿಲಿಕಾನ್ ಸಿಟಿಯ 687 ಪ್ರದೇಶಗಳಲ್ಲಿ ಸಿಂಟೆಕ್ಸ್‌ಗಳನ್ನು ಅಳವಡಿಸಲು ನೀರು ಪೂರೈಸಲು ನಿರ್ಧರಿಸಲಾಗಿದೆ. ಈ ಸಿಂಟೆಕ್ಸ್‌ಗಳಿಗೆ ನೀರು ತುಂಬಿಸುವ ಸಲುವಾಗಿಯೇ 287 ಖಾಸಗಿ ಟ್ಯಾಂಕರ್‌ಗಳನ್ನು ಬಾಡಿಗೆಗೆ ಪಡೆದುಕೊಳ್ಳಲಾಗುತ್ತಿದೆ. ಇದಲ್ಲದೇ 55 ಕಡೆ ಕಾವೇರಿ ಸಂಪರ್ಕ ಕೇಂದ್ರಗಳನ್ನು ತೆರೆದಿದ್ದು, ಸಾವಿರ ಲೀಟರ್ ನೀರನ್ನು 90 ರೂ.ಗಳಿಗೆ ಒದಗಿಸಲಾಗುತ್ತಿದೆ. ಹಳೆಯ ಸಿಂಟೆಕ್ಸ್‌ಗಳನ್ನು ಶುಚಿಗೊಳಿಸಿ ಮರುಬಳಕೆ ಮಾಡಲಾಗುತ್ತಿದೆ. ನೀರಿನ ಬೇಡಿಕೆ ಆಧರಿಸಿ ಹೆಚ್ಚುವರಿ ಸಿಂಟೆಕ್ಸ್‌ಗಳನ್ನು ಕಾರ್ಯ ನಿರ್ವಾಹಕ ಎಂಜಿನಿಯರ್‌ಗಳ ಹಂತದಲ್ಲಿಯೇ ಖರೀದಿಸಿ ಅಳವಡಿಸಲು ತೀರ್ಮಾನಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

**ಟ್ಯಾಂಕರ್ ಮಾಲೀಕರೊಂದಿಗೆ ಒಪ್ಪಂದ:** ಸಿಂಟೆಕ್ಸ್ ಮತ್ತು ಕಾವೇರಿ ಸಂಪರ್ಕ ಕೇಂದ್ರಗಳಿಗೆ ನೀರು ಸರಬರಾಜು ಮಾಡಲು 287 ಖಾಸಗಿ ಟ್ಯಾಂಕರ್‌ಗಳನ್ನು ಬಾಡಿಗೆಗೆ ಪಡೆಯಲಾಗುತ್ತಿದೆ. ಈ ಸಂಬಂಧ ಟ್ಯಾಂಕರ್ ಮಾಲೀಕರಿಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ ಒಡಂಬಡಿಕೆ ಮಾಡಿಕೊಳ್ಳಲಾಗುತ್ತಿದೆ.



ಉದಯವಾಹಿನಿ ಚಿತ್ರ

**287 ಖಾಸಗಿ ಟ್ಯಾಂಕರ್‌ಗಳನ್ನು ಬಾಡಿಗೆಗೆ ಪಡೆಯಲು ತೀರ್ಮಾನ**

**ರಾಜಧಾನಿಯಲ್ಲಿ ಅಂತರ್ಜಲ ಮಟ್ಟ ಕುಸಿಯುವ ಆತಂಕವಿರುವ 80 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಜಲಮಂಡಳಿಯು ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದೆ. ಇದಕ್ಕಾಗಿಯೇ 287 ಖಾಸಗಿ ಟ್ಯಾಂಕರ್‌ಗಳನ್ನು ಬಾಡಿಗೆಗೆ ಪಡೆಯಲು ತೀರ್ಮಾನಿಸಿದೆ. ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್ಸಿ) ನಗರದ ಹಲವೆಡೆ ಅಧ್ಯಯನ ನಡೆಸಿದ್ದು, ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳೂ ಸೇರಿದಂತೆ 80 ವಾರ್ಡ್‌ಗಳಲ್ಲಿ ಅಂತರ್ಜಲ ಮಟ್ಟ ಕುಸಿಯಲಿದೆ ಎಂದು ವರದಿ ಸಲ್ಲಿಸಿದೆ. ಹೀಗಾಗಿ, ಜಲಮಂಡಳಿಯು ಬೇಸಿಗೆಯಲ್ಲಿ ಕುಡಿಯುವ ನೀರಿಗೆ ತತ್ವಾರ ಉಂಟಾಗುವುದನ್ನು ತಪ್ಪಿಸಲು ಸಿಂಟೆಕ್ಸ್ ಟ್ಯಾಂಕ್‌ಗಳು ಹಾಗೂ ಖಾಸಗಿ ಟ್ಯಾಂಕರ್‌ಗಳ ಮೊರೆ ಹೋಗಿದೆ.**

**ಬೇಸಿಗೆಯಲ್ಲಿ ಉಂಟಾಗಬಹುದಾದ ನೀರಿನ ಸಮಸ್ಯೆ ಪರಿಹರಿಸಲು ಪ್ರತ್ಯೇಕ ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ. ನೀರಿನ ಸಮಸ್ಯೆ ಪರಿಹರಿಸಲು ಎಲ್ಲಾ ರೀತಿಯಲ್ಲೂ ಸಜ್ಜಾಗಿದ್ದೇವೆ. ಅಂತರ್ಜಲ ಮಟ್ಟದ ಸುಸ್ಥಿರತೆಗೆ 21 ಕೆರೆಗಳಿಗೆ ಸಂಸ್ಕರಿಸಿದ ನೀರು ತುಂಬಿಸಲು ಯೋಜನೆ ರೂಪಿಸಲಾಗಿದೆ.**


– ಡಾ. ರಾಮಪ್ರಸಾತ್ ಮನೋಹರ್, ಅಧ್ಯಕ್ಷ, ಜಲಮಂಡಳಿ



ಜಲಮಂಡಳಿಯಲ್ಲಿರುವ 68 ಟ್ಯಾಂಕರ್‌ಗಳನ್ನು ಸಂಸ್ಕರಿಸಿದ ನೀರು ಪೂರೈಸಲು ಮಾತ್ರ ಬಳಸಲಿದೆ.

**ಅಂತರ್ಜಲ ಬಳಕೆ ತಗ್ಗಿಸಲು ಕ್ರಮ:** ಜಲಮಂಡಳಿ ಸುಪರ್ದಿಯಲ್ಲಿ 12 ಸಾವಿರ ಕೊಳವೆ ಬಾವಿಗಳಿದ್ದು, ಈ ಮೂಲದಿಂದ 800 ಎಂಎಲ್‌ಡಿಯಷ್ಟು ನೀರು ಪೂರೈಸುತ್ತಿದೆ. ಅಂತರ್ಜಲ ಸಂರಕ್ಷಣೆ ದೃಷ್ಟಿಯಿಂದ ತುರ್ತು ಸಂದರ್ಭದಲ್ಲಷ್ಟೇ ಕೊಳವೆಬಾವಿಗಳಿಂದ ನೀರು ಸರಬರಾಜು ಮಾಡಲು ನಿರ್ಧರಿಸಲಾಗಿದೆ. ಅಲ್ಲದೇ ಬಿಬಿಎಂಪಿ ಅಧೀನದಲ್ಲಿದ್ದ 3 ಸಾವಿರ ಬೋರ್‌ವೆಲ್‌ಗಳನ್ನು ಜಲಮಂಡಳಿಗೆ ಹಸ್ತಾಂತರಿಸಲಾಗಿದೆ.

**ಕಾವೇರಿ ಸಂಪರ್ಕಕ್ಕೆ ಹಿಂದೇಟು:** ಕಾವೇರಿ 5ನೇ ಹಂತದ ಯೋಜನೆಯಡಿ 5550 ಕೋಟಿ ರೂ. ವ್ಯಯಿಸಿ, 775 ಎಂಎಲ್‌ಡಿ ನೀರನ್ನು ನಗರಕ್ಕೆ ತರಲಾಗಿದೆ. ಮುಖ್ಯವಾಗಿ 110 ಹಳ್ಳಿಗಳಿಗೆ ಈ ನೀರು ಒದಗಿಸಲು ಉದ್ದೇಶಿಸಿದ್ದ ಜಲಮಂಡಳಿಯು, 4 ಲಕ್ಷ ಸಂಪರ್ಕದ ಗುರಿ ಹೊಂದಿತ್ತು. ಆದರೆ, 110 ಹಳ್ಳಿಗಳ ವ್ಯಾಪ್ತಿಯ ನಿವಾಸಿಗಳು ಕಾವೇರಿ ನೀರಿನ ಸಂಪರ್ಕ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ. ಈವರೆಗೆ 17 ಸಾವಿರ ಮಂದಿಯಷ್ಟೇ ಸಂಪರ್ಕ ಪಡೆದಿದ್ದು, 775 ಎಂಎಲ್‌ಡಿಯಲ್ಲಿ 180–200 ಎಂಎಲ್‌ಡಿಯಷ್ಟೇ ಬಳಕೆಯಾಗುತ್ತಿದೆ. ಹೀಗಾಗಿ, ಜಲಮಂಡಳಿಯು ಕಾವೇರಿ ನೀರಿನ ಸಂಪರ್ಕ ಪಡೆಯದ ಪ್ರದೇಶಗಳಲ್ಲಿ ಕೊಳವೆ ಬಾವಿ, ಖಾಸಗಿ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಬೇಕಾದ ಅನಿವಾರ್ಯತೆಗೆ ಸಿಲುಕಿದೆ.



## ಎ.4ರಿಂದ 14ರವರೆಗೆ ಬೆಂಗಳೂರು ಕರಗ 20 ಲಕ್ಷ ಜನ ಭಾಗಿ ನಿರೀಕ್ಷೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಎ.4ರಿಂದ ಎ.14ರವರೆಗೆ ಬೆಂಗಳೂರಿನ ಐತಿಹಾಸಿಕ ಕರಗ ಮಹೋತ್ಸವ ನಡೆಯಲಿದೆ. ಏಪ್ರಿಲ್ 12ರ ಚೈತ್ರ ಪೌರ್ಣಮಿಯಂದು ಕರಗ ಶಕ್ತ್ಯೋತ್ಸವ ನಡೆಯಲಿದ್ದು, ಈ ಬಾರಿಯೂ ಕರಗದ ಪೂಜಾರಿ ಎ. ಜ್ಞಾನೇಂದ್ರ, ಕರಗ ಹೊರಲಿದ್ದಾರೆ. ಸತತ 14 ವರ್ಷಗಳಿಂದ ಬೆಂಗಳೂರು ಕರಗ ಹೊರುತ್ತಿರುವ ಎ.ಜ್ಞಾನೇಂದ್ರ, ಈ ಸಲ 15ನೇ ಬಾರಿಗೆ ಕರಗ ಹೊರಲಿದ್ದಾರೆ. ಈ ಬಾರಿ ಕರಗದಲ್ಲಿ 20 ಲಕ್ಷ ಜನ ಭಾಗಿಯಾಗುವ ನಿರೀಕ್ಷೆಯಿದೆ. ಎ.4ರಂದು ರಥೋತ್ಸವ ಹಾಗೂ ಧ್ವಜಾರೋಹಣ ನಡೆಯಲಿದ್ದು, ಎ.5ರಿಂದ ಎ.8ರ ತನಕ ಪ್ರತಿದಿನ ವಿಶೇಷ ಪೂಜೆ ಮತ್ತು ಮಹಾಮಂಗಳಾರತಿ ನಡೆಯಲಿದೆ.

ಎ.9ರಂದು ಆರತಿ ದೀಪಗಳು, ಎ.10ರ ಗುರುವಾರ ಹಸೀ ಕರಗ, ಎ.11ರಂದು ಹೊಂಗಲು ಸೇವೆ, ಎ.12ರ ಶನಿವಾರದಂದು ಕರಗ ಶಕ್ತ್ಯೋತ್ಸವ ಹಾಗೂ ಧರ್ಮರಾಯಸ್ವಾಮಿ ರಥೋತ್ಸವ, ಎ.13ರಂದು ಪುರಾಣ ಪ್ರವಚನ ಮತ್ತು ದೇವಸ್ಥಾನದಲ್ಲಿ ಗಾವು ಶಾಂತಿ ಮತ್ತು ಎ.14ರ ಸೋಮವಾರ ವಸಂತೋತ್ಸವ ಧ್ವಜಾರೋಹಣ ನೆರವೇರಲಿದೆ.

## 3 ರಾಷ್ಟ್ರ ಮಟ್ಟದ ಪ್ರಶಸ್ತಿ ಮುಡಿಗೇರಿಸಿಕೊಂಡ ಕೆಎಸ್‌ಆರ್‌ಟಿಸಿ

• ಉದಯವಾಹಿನಿ, ಬೆಂಗಳೂರು

ಭಾರತದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಒಕ್ಕೂಟ ನೀಡುವ 2023–24ನೇ ಸಾಲಿನ 3 ರಾಷ್ಟ್ರೀಯ ಸಾರ್ವಜನಿಕ ಬಸ್ ಸಾರಿಗೆ ಪ್ರಶಸ್ತಿಗಳು ಕೆಎಸ್‌ಆರ್‌ಟಿಸಿಗೆ ಲಭಿಸಿವೆ. ಕೆಎಸ್‌ಆರ್‌ಟಿಸಿಗೆ ಅಶ್ವಮೇಧ ಬ್ರ್ಯಾಂಡಿಂಗ್ ಹಾಗೂ ವರ್ಚಸ್ಸು ಅಭಿವೃದ್ಧಿ, ಕಾರ್ಮಿಕರ ಕಲ್ಯಾಣಕ್ಕಾಗಿ ಕೈಗೊಂಡಿರುವ ವಿನೂತನ ಯೋಜನೆಗಳು ಹಾಗೂ ಗಣಕೀಕರಣ ಉಪಕ್ರಮಗಳಿಗಾಗಿ 3 ಪ್ರಶಸ್ತಿಗಳು ಲಭಿಸಿದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಒಕ್ಕೂಟದ ವತಿಯಿಂದ ನವದೆಹಲಿಯಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಡಾ.ಕಿರಣ್ ಬೇಡಿ ಅವರು ಪ್ರಶಸ್ತಿ ಪ್ರಧಾನ ಮಾಡಿದರು. ಉಪಮುಖ್ಯ ಸಂಚಾರ ವ್ಯವಸ್ಥಾಪಕ ಗುರುರಾಜ.ಹೆಚ್, ಕಲ್ಯಾಣಾಧಿಕಾರಿ ರಾಧ ಅವರು ಪ್ರಶಸ್ತಿಗಳನ್ನು ಸ್ವೀಕರಿಸಿದರು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಪ್ರಿಯಾಂಗ ಭಾಆಸೇ, ನಿರ್ವಾಹಕ ನಿರ್ದೇಶಕರಾದ ಸೂರ್ಯಕಿರಣ್ ಇದ್ದರು.

## ಬಲ್ಡೋಟ್ ಸ್ಟೀಲ್ ಆ್ಯಂಡ್ ಪವರ್ ಲಿಮಿಟೆಡ್ ಕಾರ್ಖಾನೆ ಸ್ಥಾಪನೆಯಿಂದ ಕಲ್ಯಾಣ ಕರ್ನಾಟಕದ ಪ್ರಗತಿಗೆ ಪೂರಕ: ದಲಿತ ಸಂಘಟನೆಗಳಿಂದ ಮುಖ್ಯಮಂತ್ರಿಗೆ ಮನವಿ

• ಉದಯವಾಹಿನಿ, ಬೆಂಗಳೂರು

ಕೊಪ್ಪಳದಲ್ಲಿ ಸ್ಥಾಪನೆಯಾಗುತ್ತಿರುವ ಬಲ್ಡೋಟ್ ಸ್ಟೀಲ್ ಆ್ಯಂಡ್ ಪವರ್ ಲಿಮಿಟೆಡ್ ಕಾರ್ಖಾನೆ ಸ್ಥಾಪನೆ ಸ್ಥಾಪನೆಗೆ ಬೆಂಬಲ ನೀಡುವಂತೆ ದಲಿತ ಸಂಘಟನಾ ಸಮಿತಿ, ಭೀಮ ಘರ್ಜನೆ ವತಿಯಿಂದ ಕೊಪ್ಪಳ ಜಿಲ್ಲಾಧಿಕಾರಿ ಶ್ರೀ.ನಳಿನಿ ಅತುಲ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ.

ಈ ಕುರಿತು ದಲಿತ ಸಂಘಟನಾ ಸಮಿತಿ, ಭೀಮ ಘರ್ಜನೆ ಸಂಘಟನೆ ಹೇಳಿಕೆ ಬಿಡುಗಡೆ ಮಾಡಿದ್ದು, ಕೊಪ್ಪಳ ಕಲ್ಯಾಣ ಕರ್ನಾಟಕದ ಒಂದು ಅವಿಭಾಜ್ಯ ಅಂಗವಾಗಿದೆ. ಈಗ ತಾನೇ ಅಭಿವೃದ್ಧಿ ಪಥದತ್ತ ಸಾಗುತ್ತಿದ್ದು, ಒಂದು ಪ್ರದೇಶವು ಸಮಗ್ರ ಅಭಿವೃದ್ಧಿ ಹೊಂದಬೇಕಾದರೆ ವಾಣಿಜ್ಯ ವ್ಯವಹಾರಗಳು ವೃದ್ಧಿಯಾಗಬೇಕು, ಈ ನಿಟ್ಟಿನಲ್ಲಿ ಕಾರ್ಖಾನೆಗಳು ಅತಿ ಮುಖ್ಯ ಪಾತ್ರ ವಹಿಸುತ್ತವೆ. ಇದರಿಂದ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಉದ್ಯೋಗವಕಾಶಗಳು ಹೆಚ್ಚುತ್ತವೆ.


ಹೀಗಾಗಿ ಕಾರ್ಖಾನೆ ಸ್ಥಾಪನೆಗೆ ಸರ್ಕಾರ ವಿಶೇಷ ಆಸಕ್ತಿ ವಹಿಸಬೇಕು. ಈಗಾಗಲೇ ಬಲ್ಡೋಟ್ ಅಂಗ ಸಂಸ್ಥೆಯಾದ ಎಂ.ಎಸ್.ಪಿ.ಎಲ್ ಕಂಪನಿಯು ಅಗತ್ಯವಿರುವ ಉನ್ನತ ಮಟ್ಟದ ಮಾಲಿನ್ಯ ಯಂತ್ರೋಪಕರಣಗಳನ್ನು ಅಳವಡಿಸಿ ಪರಿಸರ ಮಾಲಿನ್ಯ ಕಡಿತಗೊಳಿಸುವಲ್ಲಿ ವಿಶೇಷವಾಗಿ ಕರ್ತವ್ಯ ನಿರ್ವಹಿಸುತ್ತಿದೆ. ಗ್ರಾಮೀಣ ಭಾಗ ಅಭಿವೃದ್ಧಿಗೆ ಸಿ.ಎಸ್.ಆರ್ ಅನುದಾನದ ಅಡಿಯಲ್ಲಿ ಹೆಚ್ಚು ಹೆಚ್ಚು ಕೆಲಸ ಮಾಡುತ್ತಿದೆ ಎಂದು ತಿಳಿಸಿದೆ.

ಎಂ.ಎಸ್.ಪಿ.ಎಲ್ ಕಂಪನಿಯಿಂದ ಶುದ್ಧ ನೀರಿನ ಘಟಕ ಸ್ಥಾಪಿಸುವುದು, ಶಾಲಾ ಪೀಠೋಪಕರಣಗಳು ಹಾಗೂ ಸ್ಮಾರ್ಟ್ ಕ್ಲಾಸ್ ಗಳನ್ನು ಒದಗಿಸುವುದು, ಉಚಿತ ಹೊಲಿಗೆ ಯಂತ್ರ ತರಬೇತಿ, ಶೌಚಾಲಯ ವ್ಯವಸ್ಥೆ, ಜಾತ್ರೆಗಳಿಗೆ ಸಹಕಾರ, ವಿದ್ಯಾರ್ಥಿಗಳಿಗೆ ಉಚಿತ ಕಂಪ್ಯೂಟರ್ ತರಬೇತಿ, ಕೊಪ್ಪಳ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಸಸಿ ನೆಡುವ ಕಾರ್ಯಕ್ರಮ, ಉಚಿತ ಕಣ್ಣಿನ ಶಸ್ತ್ರಚಿಕಿತ್ಸೆ, ಕೃತಕ ಕೈಕಾಲು ಜೋಡಣೆ, ಸಲಕರಣೆ ಒದಗಿಸುವುದು ಸೇರಿದಂತೆ ಹತ್ತು ಹಲವು ಸಾಮಾಜಿಕ ಕಾರ್ಯಗಳನ್ನು ಮಾಡಿಕೊಂಡು ಬಂದಿದೆ.

ಈಗಾಗಲೇ ಬಸ್ಸಾಪುರ್, ಹಾಲವರ್ತಿ, ಕೊಪ್ಪಳ ರೈತರ ಜಮೀನುಗಳನ್ನು ಕೆಐಎಡಿಬಿಯು ಬಲ್ಡೋಟ್ ಕಂಪನಿಗೆ ಹಸ್ತಾಂತಸಿದೆ. ಸುಮಾರು 15 ವರ್ಷದಿಂದ ಜಮೀನು ಕಳೆದುಕೊಂಡ ರೈತರು ಕಂಪನಿ ಸ್ಥಾಪಿಸುವುದರಿಂದ ತಮಗೆ ಹಾಗೂ ತಮ್ಮ ಮಕ್ಕಳಿಗೆ ಉದ್ಯೋಗಾವಕಾಶಗಳು ಬರುವುದನ್ನೇ ಕಾಯುತ್ತಿದ್ದಾರೆ. ಕಂಪನಿ ಬರುವುದು ಬೇಡ ಎಂದು ಕೆಲವು ಹಿತಾಸಕ್ತಿಗಳು ಕಂಪನಿ ಸ್ಥಾಪಿಸುವುದನ್ನು ತಡೆಗಟ್ಟುತ್ತಿರುವುದು ಸರಿಯಲ್ಲ ಎಂದು ಮನವಿ ಪತ್ರ ದಲ್ಲಿ ತಿಳಿಸಿದೆ. ಜಮೀನು ಕಳೆದುಕೊಂಡ ರೈತರು ಉದ್ಯೋಗಾವಕಾಶದಿಂದ ವಂಚಿತರಾಗುತ್ತಿದ್ದಾರೆ.

ಯುವಕರಲ್ಲಿ ಗುಳೆ ಹೋಗುವ ಸಮಸ್ಯೆ ಹೆಚ್ಚಾಗುತ್ತದೆ. ಉದ್ಯೋಗದ ಆಶಾಭಾವನೆಯಲ್ಲಿದ್ದ ರೈತರಿಗೆ ನಿರಾಸೆ ಉಂಟಾಗುತ್ತಿದೆ. ಕೊಪ್ಪಳ ಹಾಗೂ ಸುತ್ತಮುತ್ತಲ ಜಿಲ್ಲೆಗಳ ವಿದ್ಯಾರ್ಥಿಗಳು ಅವಕಾಶ ವಂಚಿತರಾಗುತ್ತಾರೆ. ಇಂತಹ ಸಮಸ್ಯೆಗಳ ತಡೆಗಟ್ಟುವಲ್ಲಿ ಮತ್ತು ಜಿಲ್ಲೆಯ ಸಮಗ್ರ ಅಭಿವೃದ್ಧಿ ಹೊಂದುವಲ್ಲಿ ಕಾರ್ಖಾನೆಗಳು ಅನಿವಾರ್ಯವಾಗಿವೆ ಎಂದು ತಿಳಿಸಿದ್ದಾರೆ.

ಬಲ್ಡೋಟ ಸ್ಟೀಲ್ ಅಂಡ್ ಪವರ್ ಲಿಮಿಟೆಡ್ ಕಂಪನಿ ಸ್ಥಾಪಿಸುವುದರಿಂದ ಕೊಪ್ಪಳದ ಜನ ಜೀವನಮಟ್ಟ ಸುಧಾರಿಸುವುದಲ್ಲದೇ ಒಳ್ಳೆಯ ಉದ್ಯೋಗ ಅವಕಾಶಗಳನ್ನು ಕೂಡ ಬದಗಿಸಿದಂತಾಗುತ್ತದೆ. ಜಿಲ್ಲೆಯ ಸಮಗ್ರ ಅಭಿವೃದ್ಧಿ ಹೊಂದುವ ಆಶಾಭಾವನೆ ವ್ಯಕ್ತವಾಗುತ್ತದೆ, ಎಂಎಸ್‌ಪಿಎಲ್ ಕಂಪನಿ ಸ್ಥಾಪನೆಗೆ ಮುಖ್ಯಮಂತ್ರಿಗಳು ಅನುವು ಮಾಡಿಕೊಡಬೇಕೆಂದು ಮನವಿಯಲ್ಲಿ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

**ಸಾವಿರಾರು ಉದ್ಯೋಗಗಳು ಸೃಷ್ಟಿ**

**ಈಗಾಗಲೇ ಬಲ್ಡೋಟ್ ಸಂಸ್ಥೆಯು ಇನ್ವೆಸ್ಟ್ ಕರ್ನಾಟಕ 2025ರಲ್ಲಿ ಸುಮಾರು ರೂ. 54,000 ಕೋಟಿ ಬಂಡವಾಳ ಹೂಡಿಕೆ ಯೋಜನೆಯನ್ನು ಪ್ರಕಟಿಸಿದ್ದು, 15 ರಿಂದ 20 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ. ಅದಲ್ಲದೆ ಪರಿಸರ ಮಾಲಿನ್ಯ ನಿಯಂತ್ರಣಕ್ಕಾಗಿ ಉನ್ನತ ತಂತ್ರಜ್ಞಾನ ಬಳಸುವುದಾಗಿ ಹೇಳಿಕೊಂಡಿದೆ.**

## ನೃತ್ಯ ಕಲಾವಿದೆ ಉಷಾ ಬಸಪ್ಪಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪ್ರದಾನ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕರ್ನಾಟಕ ಸರ್ಕಾರದ ವತಿಯಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಯಂದು ನಗರದ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಕ್ಕಳ ಮತ್ತು ಮಹಿಳೆಯರ ಕಲ್ಯಾಣ ಅಭಿವೃದ್ಧಿ ಸಚಿವೆ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಅವರು ನೃತ್ಯ ಕಲಾವಿದೆ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯರೂ ಆದ ವಿದುಷಿ ಶ್ರೀಮತಿ ಉಷಾ ಬಸಪ್ಪ ಅವರಿಗೆ ಕಿತ್ತೂರು ರಾಣಿ ಚೆನ್ನಮ್ಮಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಿದರು.

**ಪ್ರಶಸ್ತಿ ಪುರಸ್ಕೃತರ ಕಿರುಪರಿಚಯ:** ಬೆಂಗಳೂರಿನ ಉಷಾ ಬಸಪ್ಪ ವ್ಯಾಸಂಗದಲ್ಲಿ ಬಿ.ಎ. ಪೂರೈಸಿ , ಭರತನಾಟ್ಯದಲ್ಲಿ ವಿದ್ವತ್ ಮಾಡಿದ್ದಾರೆ. ಪ್ರಶಸ್ತಿ–ಗೌರವಗಳು : ನಾಟ್ಯರತ್ನ ಪ್ರಶಸ್ತಿ, ಕಾಯಕಶ್ರೀ ಪ್ರಶಸ್ತಿ, ಸಿದ್ಧಗಂಗಾ ಪ್ರಶಸ್ತಿ, ಕೆಂಗಲ್ ಹನುಮಂತರಾಯ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಹೀಗೆ ಇನ್ನೂ ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ಉಷಾ ಈಗ ಕರ್ನಾಟಕ ಸರ್ಕಾರದಿಂದ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಉಷಾ ಬಸಪ್ಪ ಅವರು ಭರತನಾಟ್ಯ ಕಲಾವಿದೆ ಅಷ್ಟೇ ಅಲ್ಲದೆ ರಂಗಭೂಮಿ ಕಲಾವಿದರು ಸಹ ಆಗಿದ್ದಾರೆ. ಪದ್ಮಿನಿಪ್ರಿಯ ನೃತ್ಯ ಅಕಾಡೆಮಿಯನ್ನು 2011ರಲ್ಲಿ ಸ್ಥಾಪಿಸಿ, ಪ್ರತಿವರ್ಷ ಹೊಸ ಹೊಸ ಪ್ರತಿಭೆಗಳಿಗೆ ವೇದಿಕೆಯನ್ನು ಒದಗಿಸಿಕೊಟ್ಟು ಪ್ರೋತ್ಸಾಹಿಸುತ್ತಿದ್ದಾರೆ. ಉಷಾ ಬಸಪ್ಪ ಅವರು ಈವರೆಗೆ ಸುಮಾರು ಮುನ್ನೂರಕ್ಕೂ ಹೆಚ್ಚು ವೇದಿಕೆಗಳಲ್ಲಿ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮವನ್ನು ನೀಡಿದ್ದಾರೆ. ಪ್ರಸ್ತುತ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪಡೆದಿರುವ ಉಷಾ ಬಸಪ್ಪ ಅವರಿಗೆ ಶುಭ ಹಾರೈಸೋಣ.

## ಸಿಎಂ, ಡಿಸಿಎಂ ಸೇರಿದಂತೆ ಗಣ್ಯರಿಂದ ನವದಂಪತಿಗೆ ಶುಭಹಾರೈಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಸಂಸದ ತೇಜಸ್ವಿ ಸೂರ್ಯ, ಗಾಯಕಿ ಶಿವಶ್ರೀ ಸ್ಕಂದ ಪ್ರಸಾದ್ ಆರತಕ್ಷತೆ ಸಂಭ್ರಮದಲ್ಲಿದ್ದಾರೆ. ನವ ದಂಪತಿಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಸೇರಿ ಅನೇಕ ಗಣ್ಯರು ಶುಭಹಾರೈಸಿದ್ದಾರೆ.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಇಂದು ಸಂಸದ ತೇಜಸ್ವಿ ಸೂರ್ಯ ಹಾಗೂ ಶಿವಶ್ರೀ ಜೋಡಿಯ ಆರತಕ್ಷತೆ ಕಾರ್ಯಕ್ರಮ ನಡೆಯುತ್ತಿದೆ. ಈ ಸಂಭ್ರಮದಲ್ಲಿ ಸಿಎಂ, ಡಿಸಿಎಂ, ಸಚಿವರು, ರಾಜಕೀಯ ಪಕ್ಷಗಳ ನಾಯಕರು, ಮುಖಂಡರು, ಆಪ್ತರು, ಬಂಧುಗಳು ಆಗಮಿಸಿ ಜೋಡಿಯನ್ನು ಆಶೀರ್ವದಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ.ಪರಮೇಶ್ವರ್, ಸಚಿವ ಜಮೀರ್ ಅಹ್ಮದ್ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡು ನವದಂಪತಿಗೆ ವಿಶ್ ಮಾಡಿದರು.

## ನೇಣು ಬಿಗಿದುಕೊಂಡು ಯುವಕ ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು

ನೇಣು ಬಿಗಿದುಕೊಂಡು ಯುವಕ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಬೆಂಗಳೂರಿನ ಕೊತ್ತನೂರಿನ ಕೆ.ನಾರಾಯಣಪುರದಲ್ಲಿ ನಡೆದಿದೆ. ಸುನೀಲ್ (28) ಆತ್ಮಹತ್ಯೆ ಮಾಡಿಕೊಂಡ ಯುವಕ. ಮಾ.7ರಂದು ತಡರಾತ್ರಿ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಯಶವಂತಪುರ ನಿವಾಸಿಯಾಗಿದ್ದ ಸುನೀಲ್‌ಗೆ ಡ್ರಗ್ಸ್ ಜೊತೆಗೆ ಹುಡುಗಿಯರ ಶೋಕಿ ಕೂಡ ಇತ್ತು. ತನ್ನ ಚಟಕ್ಕಾಗಿ ಮನೆಯಲ್ಲಿಯೇ ಚಿನ್ನ, ಹಣ ಕಳ್ಳತನ ಮಾಡುತ್ತಿದ್ದ.

ಇದನ್ನು ಮನೆಯವರು ಪ್ರಶ್ನಿಸಿದರೇ ಸಾಯೋದಾಗಿ ಹೇಳುತ್ತಿದ್ದ. ನಂತರ ಮನೆಬಿಟ್ಟು ಕೊತ್ತನೂರು ಪಿಜಿ ಸೇರಿದ್ದ ಸುನೀಲ್, ಗ್ಯಾರೇಜ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ. ಮಾ.7ರಂದು ರಾತ್ರಿ ಮಾಲೀಕನಿಗೆ ಸಾಯೋದಾಗಿ ಮೆಸೆಜ್ ಮಾಡಿದ್ದ. ಬಳಿಕ ಪಿಜಿಯಲ್ಲಿ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಘಟನೆ ಸಂಬಂಧ ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಿಸಲಾಗಿದೆ.

## ಸರ್ಕಾರದಿಂದಲೇ 12 ಎಕರೆ ಜಮೀನು ಮಂಜೂರು

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ನಟಿ ರನ್ಯಾ, ಗೋಲ್ಡ್ ಸ್ಮಗ್ಲಿಂಗ್ ಕೇಸ್‌ಗೆ ಮತ್ತೊಂದು ತಿರುವು ಸಿಕ್ಕಿದೆ. ನಟಿಗೆ ದೊಡ್ಡ ದೊಡ್ಡ ರಾಜಕಾರಣಿಗಳ ನಂಟಿರುವ ಶಂಕೆ ವ್ಯಕ್ತವಾಗಿದೆ. ರನ್ಯಾ ರಾವ್‌ಗೂ ಕರ್ನಾಟಕ ರಾಜಕೀಯ ವ್ಯಕ್ತಿಗಳಿಗೂ ದೊಡ್ಡ ನಂಟಿರುವುದು ಗೊತ್ತಾಗಿದೆ. ರನ್ಯಾ ರಾವ್ ನಿರ್ದೇಶಕಿಯಾಗಿರುವ ಕಂಪನಿಗೆ ಕರ್ನಾಟಕ ಸರ್ಕಾರದಿಂದಲೇ 12 ಎಕರೆ ಜಮೀನು ಮಂಜೂರಾಗಿದೆ. ರನ್ಯಾ ಮತ್ತು ರಷಬ್ ಇಬ್ಬರು ಕೂಡ ಕಂಪನಿಯ ನಿರ್ದೇಶಕರು. ರನ್ಯಾ ksiroda India private limited ಎಂಬ ಕಂಪನಿಯ ನಿರ್ದೇಶಕಿಯಾಗಿದ್ದಾರೆ. ಈ ಕಂಪನಿಗೆ 2023 ರಲ್ಲಿ ಕೆಐಎಡಿಬಿಯಿಂದ ಬರೋಬ್ಬರಿ 12 ಎಕರೆ ಜಮೀನು ಮಂಜೂರು ಮಾಡಲಾಗಿದೆ.

ಸರ್ಕಾರ ಜಮೀನು ಮಂಜೂರು ಮಾಡಿರುವ ದಾಖಲೆಯಿದೆ. ಒಬ್ಬ ನಟಿ, ನಿರ್ದೇಶಕಿಯಾಗಿರುವ ಕಂಪನಿಗೆ 12 ಎಕರೆ ಜಮೀನು ಮಂಜೂರಾಗಿದ್ದು ಹೇಗೆ ಎಂಬ ಹತ್ತು ಹಲವು ಪ್ರಶ್ನೆಗಳು ಹುಟ್ಟಿಕೊಂಡಿವೆ. ರನ್ಯಾ ರಾವ್ ಕಂಪನಿಗೆ ಫಟಾಫಟ್ ಭೂಮಿ ಮಂಜೂರಾಗಿದೆಯೇ ಎಂಬ ಗುಮಾನಿಯು ಮೂಡಿದೆ. ರಾಜಕಾರಣಿಯೊಬ್ಬರ ಕೃಪಾಕಟಾಕ್ಷದಿಂದ ಬರೋಬ್ಬರಿ 12 ಎಕರೆ ಕೆಐಎಡಿಬಿ ಲ್ಯಾಂಡ್ ಮಂಜೂರಾಗಿದೆ.

ತುಮಕೂರಿನ ಶಿರಾದಲ್ಲಿ ಸ್ಟೀಲ್ ಕಂಪನಿಗೆ ಜಮೀನು ಮಂಜೂರಾಗಿದೆ. ಕಂಪನಿ ಸ್ಥಾಪನೆಯಾದ 9 ತಿಂಗಳಲ್ಲೇ ಸರ್ಕಾರ ಭೂಮಿ ಕೊಟ್ಟಿದೆ. 2022ರ ಏಪ್ರಿಲ್‌ನಲ್ಲಿ ಕಂಪನಿ ಸ್ಥಾಪನೆಯಾಯಿತು. 2023 ಜನವರಿಯಲ್ಲಿ ಭೂಮಿ ಮಂಜೂರು ಮಾಡಿ ಆದೇಶ ಹೊರಡಿಸಲಾಗಿದೆ.

ರನ್ಯಾ ರಾವ್‌ಗಾಗಿ ಫೈಲ್ ಸ್ಪೀಡ್ ಅಪ್ ಆಗಿದ್ಯಾ ರನ್ಯಾ ಹಿಂದಿರುವ ಆ ರಾಜಕಾರಣಿ ಯಾರು ಎಂಬ ಪ್ರಶ್ನೆ ಮೂಡಿದೆ.

## ಐಶ್ವರ್ಯಗೌಡ ವಂಚನೆ ಕೇಸ್‌ಗೆ ಟ್ವಿಸ್ಟ್ ವಿನಯ್ ಕುಲಕರ್ಣಿ ಕಾರು ಚಾಲಕನ ವಿಚಾರಣೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಐಶ್ವರ್ಯ ಗೌಡ ಚಿನ್ನ ವಂಚನೆ ಕೇಸ್‌ಗೆ ಬಿಗ್ ಟ್ವಿಸ್ಟ್ ಸಿಕ್ಕಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ವಿನಯ್ ಕುಲಕರ್ಣಿ ಕಾರು ಚಾಲಕನನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಎಸಿಪಿ ಭರತ್ ರೆಡ್ಡಿ ಅವರು ಚಾಲಕ ವಿರೇಶ್ ದಳವಾಯಿಯನ್ನು ವಿಚಾರಣೆ ಮಾಡಿದ್ದಾರೆ. ಐಶ್ವರ್ಯ ಗೌಡಗೆ ಸೇರಿದ ಕಾರು ವಿನಯ್ ಕುಲಕರ್ಣಿ ಮನೆಯಲ್ಲಿ ಪತ್ತೆಯಾಗಿತ್ತು. ಈ ಹಿನ್ನೆಲೆಯಲ್ಲಿ ಚಾಲಕನನ್ನು ಪೊಲೀಸರು ವಿಚಾರಣೆಗೆ ಕರೆದಿದ್ದರು. ವಿಚಾರಣೆ ವೇಳೆ ಬೆನ್ಜ್ ಕಾರಿನ ಬಗ್ಗೆ ಮಾಹಿತಿ ಲಭ್ಯವಾಗಿದೆ. ವಿನಯ್ ಕುಲಕರ್ಣಿಗೆ ಐಶ್ವರ್ಯ ಗೌಡ ಪರಿಚಯವಿತ್ತು. ಮಹಾರಾಷ್ಟ್ರಕ್ಕೆ ಹೋಗುವಾಗ ವಿನಯ್ ಕುಲಕರ್ಣಿ ಮನೆಗೆ ಐಶ್ವರ್ಯ ಗೌಡ ಬಂದಿದ್ದರು. ವಾಪಸ್ ಹೋಗುವಾಗ ಕಾರು ಬಿಟ್ಟು ವಿಮಾನದಲ್ಲಿ ಹೋಗಿದ್ದರು. ಹಾಗಾಗಿ, ಬೆನ್ಜ್ ಕಾರು ವಿನಯ್ ಕುಲಕರ್ಣಿ ಮನೆ ಬಳಿಯೇ ಇತ್ತು ಅನ್ನೋದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ. ವಂಚನೆ ಪ್ರಕರಣದ ತನಿಖೆ ಬಹುತೇಕ ಕೊನೆಯ ಹಂತಕ್ಕೆ ಬಂದಿದೆ. ಕೆಲವೇ ದಿನಗಳಲ್ಲಿ ಚಾರ್ಜ್‌ಶೀಟ್ ಸಲ್ಲಿಕೆ ಮಾಡಲು ಅಧಿಕಾರಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ.

# 19ನೇ ಬಜೆಟ್ ಕೂಡ ಸಿದ್ದರಾಮಯ್ಯ ಮಂಡಿಸಲಿದ್ದಾರೆ: ಯತೀಂದ್ರ

### 2026ರಲ್ಲಿಯೂ ಸೇರಿದಂತೆ 19 ಬಜೆಟ್ ಮಂಡಿಸುವುದು ನಿಶ್ಚಿತ। ಇದರಲ್ಲಿ ಯಾವ ಅನುಮಾನ ಇಲ್ಲ

• ಉದಯವಾಹಿನಿ, ಬೆಂಗಳೂರು:


ಉದಯವಾಹಿನಿ ಚಿತ್ರ

**ಎಲ್ಲಾರಿಗೂ ಮುಪ್ಪು ಬರುತ್ತದೆ**

ಕಾಂಗ್ರೆಸ್ ಹೈಕಮಾಂಡ್, ಶಾಸಕರು ಸಿದ್ದರಾಮಯ್ಯ ಅವರ ನಾಯಕತ್ವದ ಪರವಾಗಿರುವುದರಿಂದ ಸಿದ್ದರಾಮಯ್ಯ ಅವರು 19ನೇ ಬಜೆಟ್ ಕೂಡ ಮಂಡಿಸುತ್ತಾರೆ. ಇದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರು ಹೇಳಿದರು. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಮುಂದಿನ 2026ರಲ್ಲಿಯೂ ಸೇರಿದಂತೆ 19 ಬಜೆಟ್ ಮಂಡಿಸುವುದು ನಿಶ್ಚಿತ. ಇದರಲ್ಲಿ ಯಾವ ಅನುಮಾನ ಇಲ್ಲ ಎಂದು ಹೇಳಿದರು. ಯಾವ ತಪ್ಪು ಮಾಡದೇ ಇದ್ದರೂ ಸುಮ್ಮನೇ ಗೂಬೆ ಕೂರಿಸಿದ್ದರು. ನಮ್ಮ ತಂದೆಯನ್ನು ಪ್ರಕರಣದಲ್ಲಿ ಸಿಲುಕಿಸಿ ಆರೋಪಿ ಸ್ಥಾನದಲ್ಲಿ ನಿಲ್ಲಿಸಿದ್ದರು. ಈ ಕಾರಣಕ್ಕಾಗಿ ನಾವು 14 ನಿವೇಶನಗಳನ್ನು ವಾಪಸ್ ಕೊಟ್ಟಿದ್ದೆವು. ನ್ಯಾಯಯುತವಾಗಿ ನಮಗೆ ಆ ಸೈಟುಗಳು ಬರಬೇಕಿದೆ.

ತನಿಖಾ ಪ್ರಕ್ರಿಯೆ ಮುಗಿದ ಮೇಲೆ ಕೋರ್ಟ್ ಮೂಲಕವೇ ಅವುಗಳನ್ನು ವಾಪಸ್ ಪಡೆಯುವ ಬಗ್ಗೆ ನಮ್ಮ ತಾಯಿ ನಿರ್ಧಾರ ಮಾಡುತ್ತಾರೆ.

ವಿನಾಕಾರಣ ಟೀಕೆಗಳನ್ನು ನಿಲ್ಲಿಸಬೇಕಿತ್ತು. ಹೀಗಾಗಿ, ನಾವು ಸೈಟುಗಳನ್ನು ವಾಪಸ್ ಕೊಟ್ಟಿದ್ದೆವು. ಕಾನೂನಿನಲ್ಲಿ ನಮ್ಮದು ತಪ್ಪಿಲ್ಲ ಎಂದು ಬರುತ್ತಿದೆ. ಆದ್ದರಿಂದ ಸೈಟ್ ವಾಪಸ್ ಪಡೆಯುವ ಬಗ್ಗೆ ನಮ್ಮ ತಾಯಿ ತೀರ್ಮಾನ ಮಾಡುತ್ತಾರೆಂದು ಹೇಳಿದರು.

ಬಿಜೆಪಿ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ಎಲ್ಲಾರಿಗೂ ಮುಪ್ಪು ಬರುತ್ತದೆ. ವಯಸ್ಸಾಗುತ್ತದೆ. ಕಾಯಿಲೆ ಬರುವುದು, ಸಾವು ಬರುವುದು ಸಹಜ.

ಆಗ ಅದನ್ನೇ ಇಂತಹ ಕಾರಣಕ್ಕೆ ಬಂತು ಎಂದು ಟೀಕೆ ಮಾಡಿದರೆ ಅದರಲ್ಲಿ ಸಭ್ಯತೆ ಇರುವುದಿಲ್ಲ ಎಂದು ತಿರುಗೇಟು ನೀಡಿದರು.

**ಸಿಎಂ ಸ್ಥಾನದಿಂದ ಬದಲಾವಣೆ ಮಾಡುವ ಪ್ರಶ್ನೆಯೇ ಇಲ್ಲ**

**ಹೈಕಮಾಂಡ್ ಮತ್ತು ಶಾಸಕರು ಸಿದ್ದರಾಮಯ್ಯ ಪರವಿದ್ದಾರೆ. ಊಹಾಪೋಹಗಳಿಗೆ ತಲೆಕೆಡಿಸಿಕೊ ಳ್ಳುವ ಅಗತ್ಯವಿಲ್ಲ. ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಬದಲಾವಣೆ ಮಾಡುವ ಪ್ರಶ್ನೆಯೇ ಇಲ್ಲ ಎಂದು ತಿಳಿಸಿದರು. ಮುಡಾ ಹಗರಣ ಕುರಿತು ಮಾತನಾಡಿದ ಅವರು, ತಾಯಿ ಪಾರ್ವತಿ ಅವರಿಗೆ ಇ.ಡಿ ನೋಟಿಸ್‌ಗೆ ಹೈಕೋರ್ಟ್‌ನಿಂದ ರಿಲೀಫ್ ದೊರೆತಿದ್ದರಿಂದ ಸಂತಸವಾಗಿದೆ. ನಮ್ಮ ತಾಯಿ ಮಾನಸಿಕವಾಗಿ ನೊಂದಿದ್ದರು. ಹೈಕೋರ್ಟ್ ತೀರ್ಪಿನಿಂದ ಸಮಾಧಾನವಾಗಿದೆ ಎಂದರು.**

**ಬಜೆಟ್ ಬಗ್ಗೆ ಬಿಜೆಪಿ ನಾಯಕರು ಟೀಕಿಸುವುದರಲ್ಲಿ ಅರ್ಥವಿಲ್ಲ. ಬಿಜೆಪಿ ನಾಯಕರಿಗೆ ಹೇಳಲು ಏನು ಸಿಗದೆ ಟೀಕೆ ಮಾಡುತ್ತಿದ್ದಾರೆ. ಅಲ್ಪಸಂಖ್ಯಾತರನ್ನು ಓಲೈಕೆ ಮಾಡುತ್ತಿಲ್ಲ. ಅಲ್ಪಸಂಖ್ಯಾತರು ಅಂದರೆ ಬರೀ ಮುಸ್ಲಿಮರು ಮಾತ್ರವಲ್ಲ. ಅದಕ್ಕೆ ಬೇರೆ ಬೇರೆಯವರು ಬರುತ್ತಾರೆ. ಸರ್ಕಾರದ ಬಜೆಟ್ ಹಿಂದುಳಿದ ವರ್ಗಗಳು, ದಲಿತರು, ಅಲ್ಪಸಂಖ್ಯಾತರ ಸಬಲೀಕರಣದ ಮೇಲೆ ಕೇಂದ್ರೀಕರಿಸಿದೆ**

– ಯತೀಂದ್ರ ಸಿದ್ದರಾಮಯ್ಯ

## ಬೆಂ. ವಿವಿಗೆ ಮನಮೋಹನ್ ಸಿಂಗ್ ಹೆಸರಿಡಲು ಜೆಡಿಎಸ್ ವಿರೋಧ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ಹೆಸರಿಡಲು ಜೆಡಿಎಸ್ ವಿರೋಧ ವ್ಯಕ್ತಪಡಿಸಿದೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಹಾಕಿರುವ ಜೆಡಿಎಸ್, ಸಿಎಂ ಸಿದ್ದರಾಮಯ್ಯ ಅವರೇ, ಬೆಂಗಳೂರು ವಿಶ್ವವಿದ್ಯಾಲಯ ನಿಮ್ಮ ಮನೆತನದ ಆಸ್ತಿಯಲ್ಲ. ಕಾಂಗ್ರೆಸ್ ಪಕ್ಷದ ಆಸ್ತಿಯೂ ಅಲ್ಲ ಎಂದು ಟಾಂಗ್ ಕೊಟ್ಟಿದೆ.

**ಎಕ್ಸ್ ಪೋಸ್ಟ್‌ನಲ್ಲಿ ಏನಿದೆ?:** ಸಿಎಂ ಸಿದ್ದರಾಮಯ್ಯ ಅವರೇ ಬೆಂಗಳೂರು ವಿಶ್ವವಿದ್ಯಾಲಯ ನಿಮ್ಮ ಮನೆತನದ ಆಸ್ತಿಯಲ್ಲ. ಕಾಂಗ್ರೆಸ್ ಪಕ್ಷದ ಆಸ್ತಿಯೂ ಅಲ್ಲ. 'ಬೆಂಗಳೂರು' ಎಂಬುದು ಈ ನೆಲಮೂಲದ ಹೆಗ್ಗುರುತು. ಸಮಸ್ತ ಕನ್ನಡಿಗರ ಹೆಮ್ಮೆ. ಹಾಗೂ ಕನ್ನಡಿಗರ ಪ್ರತಿಧ್ವನಿ. ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿ ಪಡೆದ ನಗರ. ಬೆಂಗಳೂರು ಎಂಬುದೇ ಒಂದು ವಿಶ್ವಪ್ರಸಿದ್ಧ ಬ್ರ್ಯಾಂಡ್. ಅದೇ ಬೆಂಗಳೂರು ಹೆಸರಿಗೆ ಇರುವ ಶಕ್ತಿ. ನಮಗೆ ಡಾ.ಮನಮೋಹನ್ ಸಿಂಗ್ ಅವರ ಮೇಲೆ ಅಪಾರವಾದ ಗೌರವವಿದೆ. ಆದರೆ, 'ಬೆಂಗಳೂರು ನಗರ ವಿವಿ'ಗೆ ಪರ್ಯಾಯವಾಗಿ ಬೇರೆ ಯಾವುದೇ ಹೆಸರಿಡಲು ತೀವ್ರ ವಿರೋಧವಿದೆ. ಈ ವಿಚಾರದಲ್ಲಿ ಕರ್ನಾಟಕದ ಜನತೆಯೂ ಸಹ ಕಾಂಗ್ರೆಸ್ ಸರ್ಕಾರದ ಈ ನಿರ್ಧಾರವನ್ನು ಒಪ್ಪುವುದಿಲ್ಲ.

ರಾಜ್ಯದಲ್ಲಿ ಕನ್ನಡ ಭಾಷೆ, ನೆಲ, ಜಲ ನಾಡಿಗಾಗಿ ಹೋರಾಡಿದ ಸಾವಿರಾರು ಕನ್ನಡಿಗ ಸಾಧಕರು ಇದ್ದಾರೆ. ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಕರ್ನಾಟಕಕ್ಕೆ ಕೀರ್ತಿ ತಂದ ಮಹನೀಯರಿದ್ದಾರೆ. ಆ ಕನ್ನಡಿಗರು ಕಾಂಗ್ರೆಸ್ಸಿಗರ ಕಣ್ಣಿಗೆ ಬೀಳಲಿಲ್ಲವೇ? ಸಿದ್ದರಾಮಯ್ಯನವರೇ.. ಅಷ್ಟು ಅಭಿಮಾನ, ಗೌರವ ಇದ್ದರೆ ಮೈಸೂರಿನಲ್ಲಿ ನಿರ್ಮಿಸುತ್ತಿರುವ ನಿಮ್ಮ ಹೊಸ ಮನೆಗೆ ಮನಮೋಹನ್ ಸಿಂಗ್ ನಿವಾಸ ಎಂದು ಹೆಸರಿಟ್ಟುಕೊಳ್ಳಿ. ನಿಮ್ಮ ಸೊಸೆಯ ಒಡೆತನದಲ್ಲಿರುವ ಬಹುಕೋಟಿ ಮೌಲ್ಯದ ಐಶಾರಾಮಿ ಕ್ಲಬ್‌ಗೆ ಮರುನಾಮಕರಣ ಮಾಡಿಕೊಳ್ಳಿ.

ದೆಹಲಿಯ ಹೊಸದಾಗಿ ನಿರ್ಮಿಸಿದ ಕಾಂಗ್ರೆಸ್ ಕಚೇರಿಗೆ 'ಇಂದಿರಾ ಭವನ' ಎಂದು ಹೆಸರಿಟ್ಟಿರಿ. ಅದಕ್ಕೆ ಮನಮೋಹನ್ ಸಿಂಗ್ ಹೆಸರಿಡಲು ಇಟಲಿ ಕಾಂಗ್ರೆಸ್‌ನ ಆಪ್ತರ ಗುಂಪು ಒಪ್ಪಲಿಲ್ಲ ಎಂಬುದು ತಮಗೆ ತಿಳಿದಿರುವ ವಿಷಯ.

ಆದರೆ ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಆಡಳಿತವಿರುವ ಕಾರಣ 'ಗುಲಾಮಿ ಕಾಂಗ್ರೆಸ್' ನಾಯಕರು, ಬೆಂಗಳೂರಿನಲ್ಲಿ ಬೇಳೆ ಬೇಯಿಸಿಕೊಳ್ಳುತ್ತೀರಿ. ಕೆಲ ತಿಂಗಳ ಹಿಂದಷ್ಟೆ ಬೆಂಗಳೂರಿನಲ್ಲಿ ರಾಜೀವ್ ಗಾಂಧಿ ಕಂಚಿನ ಪ್ರತಿಮೆ ಅನಾವರಣಗೊಳಿಸಲಾಗಿತ್ತು. ಈಗ ಬೆಂಗಳೂರು ವಿವಿಗೆ ಮನಮೋಹನ್ ಸಿಂಗ್ ಹೆಸರು ನಾಮಕರಣ ಮಾಡುವುದಾಗಿ ಘೋಷಿಸಿದ್ದೀರಿ. ಹೈಕಮಾಂಡ್ ಗುಲಾಮಗಿರಿಗೆ ಸದಾ 'ಸಿದ್ಧ'ರಾಮಯ್ಯ ಎಂದು ಜೆಡಿಎಸ್ ಕಾಲೆಳೆದಿದೆ.

ಜಿಲ್ಲೆಯ ಕಾಂಗ್ರೇಸ್ ಪಕ್ಷದ ಜನಪ್ರತಿನಿಧಿಗಳ ನಿಯೋಗವು ಜಿಲ್ಲೆಯ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸಲಿದೆ

# ಬಜೆಟ್‌ನಲ್ಲಿ ಕೋಲಾರ ಜಿಲ್ಲೆಗೆ ಅಮೋಘ ಕೊಡುಗೆ:ನಸ್ಸೀರ್ ಅಹ್ಮದ್

• ಉದಯವಾಹಿನಿ ಕೋಲಾರ

ಕರ್ನಾಟಕ ರಾಜ್ಯ ಕಾಂಗ್ರೇಸ್ ಪಕ್ಷದ ಸಿಎಂ ಸಿದ್ದರಾಮಯ್ಯರ ಆಡಳಿತದಲ್ಲಿನ 16ನೇ ಬಜೆಟ್‌ನಲ್ಲಿ ಕೋಲಾರ ಜಿಲ್ಲೆಗೆ ಅಮೋಘವಾದ ಕೊಡುಗೆಗಳನ್ನು ನೀಡಲಾಗಿರುವುದು ಐತಿಹಾಸಿಕ ದಾಖಲೆಯಾಗಿರುವ ಹಿನ್ನಲೆಯಲ್ಲಿ ಜಿಲ್ಲೆಯ ಕಾಂಗ್ರೇಸ್ ಪಕ್ಷದ ಜನಪ್ರತಿನಿಧಿಗಳ ನಿಯೋಗವು ಜಿಲ್ಲೆಯ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸಲಿದೆ ಎಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ್ ಸದಸ್ಯ ನಸ್ಸೀರ್ ಅಹ್ಮದ್ ಬಣ್ಣಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೋಲಾರಕ್ಕೆ ನೀಡಿರುವ ಹಲವು ಕೊಡುಗೆಗಳ ಸಂಬಂಧವಾಗಿ ಸಾರ್ವಜನಿಕ ವಲಯದಲ್ಲಿನ ಅಭಿಪ್ರಾಯಗಳ ಕುರಿತು ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಚರ್ಚೆಗಳಾಗುತ್ತಿರುವುದು ಇದರಲ್ಲಿ ಬಹುತೇಕ ಉತ್ತಮ ಅಭಿಪ್ರಾಯಗಳು ವ್ಯಕ್ತವಾಗಿದೆ ಎಂದರು.

2025-26ನೇ ಸಾಲಿನ ಬಜೆಟ್ 4.09 ಲಕ್ಷ ಕೋಟಿ ರೂಗಳ ಬಜೆಟ್ ಆಗಿದೆ, ಕಳೆದ ಬಾರಿಯ ಬಜೆಟ್‌ಗಿಂತ ಹೆಚ್ಚುವರಿಯಾಗಿ 27 ಸಾವಿರ ಕೋಟಿ ರೂ. ಹೆಚ್ಚುವರಿ ಬಜೆಟ್ ಆಗಿದೆ, ಈ ಬಾರಿ ಕೃಷಿಗೆ 55 ಸಾವಿರ ಕೋಟಿ ರೂ ಮೀಸಲಿರಿಸಿದ್ದು, ಕಳೆದ ಬಜೆಟ್‌ಗಿಂತ ಶೇ.15ರಷ್ಟು ಹೆಚ್ಚುವರಿ ಮಾಡಿದೆ, ಎಸ್.ಟಿ.ಪಿ.ಟಿ.ಸಿ.ಎಲ್‌ಗೆ 42 ಸಾವಿರ ರೂ ಮಂಜೂರು ಮಾಡಿದ್ದು, ಕಳೆದ ಬಾರಿ 39 ಸಾವಿರ ಕೋಟಿ ಮಾತ್ರ ಇತ್ತು, ಗ್ಯಾರಂಟಿ ಯೋಜನೆಗಳಿಗೆ 52 ಸಾವಿರ ಕೋಟಿ ಮಂಜೂರಾತಿ ನೀಡಿದ್ದರೂ ಸಹ ಸಾರ್ವಜನಿಕ ವಲಯದ ಯಾವುದೇ ಅಭಿವೃದ್ಧಿ ಯೋಜನೆಗಳು ಹಾಗೂ ಸಹಾಯ ಧನಗಳನ್ನು ಕಡಿಮೆ ಮಾಡಿಲ್ಲ, ಸುಮಾರು 1 ಲಕ್ಷ ಕೋಟಿ ಫಲಾನುಭವಿಗಳ ಖಾತೆಗೆ ಜಮೆಯಾಗಲಿದೆ ಎಂದು ಹೇಳಿದರು.


☛ ಉದಯವಾಹಿನಿ ಚಿತ್ರ

## ಜಿಲ್ಲೆಗೆ ವೈದ್ಯಕೀಯ ಕಾಲೇಜು ಬಹುದಿನ ಕನಸು

**ಕೋಲಾರ ಜಿಲ್ಲೆಗೆ ವೈದ್ಯಕೀಯ ಕಾಲೇಜು ಬಹುದಿನ ಕನಸು ಆಗಿದ್ದ ಹಿನ್ನಲೆಯಲ್ಲಿ ನಾವೆಲ್ಲಾ ಮುಖ್ಯ ಮಂತ್ರಿಗಳ ಬಳಿ ಹೋಗಿ ಒತ್ತಡ ಹೇರಿದ ಹಿನ್ನಲೆಯಲ್ಲಿ ಮೆಡಿಕಲ್ ಕಾಲೇಜನ್ನು ಸಾರ್ವಜನಿಕ ಸಹಬಾಗಿತ್ವದಲ್ಲಿ ಮಂಜೂರು ಮಾಡಿದರು, ಇದೇ ಸಂದರ್ಭದಲ್ಲಿ 3190 ಕೋಟಿ ಮೊತ್ತದಲ್ಲಿ ದೇವನಹಳ್ಳಿ -ವಿಜಯಪುರ-ಹೆಚ್.ಕ್ರಾಸ್-ವೇಮಗಲ್-ಮಾಲೂರು-ತಮಿಳುನಾಡು ಸಂಪರ್ಕದ 4 ಪಥದ ರಸ್ತೆಯು ಕೋಲಾರವನ್ನು ಹಾದು ಹೋಗಲಿದೆ. ಸುಮಾರು 123 ಕೋಟಿ ರೂ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಂಡಿದ್ದು, ಪ್ರಸಕ್ತ ಸಾಲಿನಲ್ಲಿ 30 ಕಿ.ಮೀ ರಸ್ತೆಯನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.**

ಬಿಜೆಪಿ ಪಕ್ಷವು ಸಾಲ ಮಾಡಿ ಆಡಳಿತ ನಡೆಸುತ್ತಿದೆ ಎಂದು ಬೊಬ್ಬೆ ಹಾಕುತ್ತಿದೆ ಶೇ.3ಕ್ಕಿಂತ ಹೆಚ್ಚಾಗಿ ಸಾಲ ಮಾಡಬಾರದು ಎಂದಿದ್ದು, ರಾಜ್ಯ ಸರ್ಕಾರವು 2.9ರಷ್ಟು ಮಾತ್ರ ಮಾಡಿದೆ, ಜಿ.ಡಿ.ಪಿ 25 ಲಕ್ಷವವಾಗಿದ್ದು, 40 ಲಕ್ಷಕ್ಕಿಂತ ಕಡಿಮೆಯಾಗಿ ಶೇ.25ರಷ್ಟು ಉಳಿಸಿದೆ, ರಾಜ್ಯದ ಸಾಲ 7.64 ಲಕ್ಷ ಕೋಟಿ ರೂ. ಆಗಿದೆ, ಆದರೆ ಮನಮೋಹನ್ ಸಿಂಗ್ ಆಡಳಿತದಲ್ಲಿ ಕೇಂದ್ರದ ಸಾಲವು 54 ಲಕ್ಷ ಕೋಟಿ ರೂ. ಇದ್ದದ್ದು ಇಂದು ಮೋದಿ ಆಡಳಿತದಲ್ಲಿ 196 ಲಕ್ಷ ಕೋಟಿ ರೂ ಏರಿಕೆ ಮಾಡಿದೆ ಅಂದರೆ 4 ಪಟ್ಟು ಹೆಚ್ಚಳವಾಗಿದೆ, ಹಾಗಾಗಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದ ಬಗ್ಗೆ ಟೀಕಿಸುವಂತ ಯಾವೂದೇ ನೈತಿಕತೆ ಇಲ್ಲವೆಂದು ಪ್ರತಿಪಾದಿಸಿದರು. ಮಾಲಿನ್ಯವನ್ನು ನಿಯಂತ್ರಿಸುವ ಮಾಡುವ ನಿಟ್ಟಿನಲ್ಲಿ ಮಾಲೂರು ತಾಲ್ಲೂಕಿನ 1600 ಕೋಟಿ ರೂ ವೆಚ್ಚದಲ್ಲಿ ಶಿವಾರಪಟ್ಟಣದಲ್ಲಿ ಶೂನ್ಯ ಮಾಲಿನ್ಯ ಕೈಗಾರಿಕಾ ಪ್ರದೇಶವಾಗಿ ಪರಿವರ್ತಿಸುತ್ತಿರುವ ದಿಸೆಯಲ್ಲಿ ಪಿ.ಪಿ.ಪಿ ಮಾದರಿಯನ್ನಾಗಿ ಮಾಡುವ ಉದ್ದೇಶಿಸಿರುವುದರಿಂದ ಬಹುರಾಷ್ಟ್ರೀಯ ಕಂಪನಿಗಳು ಈಗಾ ಇರುವ ಕಂಪನಿಗಳಿಗಿಂತ 4 ಪಟ್ಟು ಹೆಚ್ಚುವರಿಯಾಗಿ ಬರಲಿದೆ. ಇದರಿಂದ ಜಿಲ್ಲೆಯಲ್ಲಿ ನಿರುದ್ಯೋಗದ ಸಮಸ್ಯೆಗಳು ಬಗೆಹರಿಸಲಿದೆ.

**ರಾಜ್ಯದ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ 232 ಕೋಟಿ ರೂ. ಮಂಜೂರು ಮಾಡಿ ನೇರವಾಗಿ ತಲುಪುವ ವ್ಯವಸ್ಥೆ ಮಾಡಿದೆ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಆರ್ಥಿಕ ಕೊರತೆ ಇಲ್ಲ ಜನರ ಜೀವನ ಶೈಲಿ ಆರ್ಥಿಕವಾಗಿ ಸುಧಾರಣೆಯಾಗಲಿದೆ, ಯೂನಿವರ್ಸಿಲ್ ಬೇಸಿಕ್ ಇನ್‌ಕಂ ಹೆಚ್ಚುವರಿಯಾಗಿ ಎಲ್ಲಾ ಸಮುದಾಯಗಳಿಗೂ ಸಮಾನತೆ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ದೃಷ್ಟಿಯನ್ನಿಟ್ಟುಕೊಂಡು ಬಜೆಟ್ ಮಂಡಿಸಲಾಗಿದೆ, ವಿವಿಧ ಇಲಾಖೆಯಿಂದ ಫಲಾನುಭವಿಗಳ ಖಾತೆಗೆ 1 ಲಕ್ಷ ಕೋಟಿ ರೂ ಜಮೆಯಾಗಿಲಿದೆ, ಆದಿವಾಸಿ, ಅಲೆಮಾರಿ, ಬುಡಕಟ್ಟು ಸಮುದಾಯಗಳು ಸೇರಿದಂತೆ ಪ್ರತಿಯೊಂದನ್ನು ಗುರುತಿಸಿದ್ದು, ಸರ್ಕಾರದ ಸೌಲಭ್ಯಗಳನ್ನು ತಲುಪುವ ವ್ಯವಸ್ಥೆ ಮಾಡಿರುವ ಬಜೆಟ್ ಆಗಿದೆ -ನಸ್ಸೀರ್ ಅಹ್ಮದ್**

## ಅನುದಾನ ಬಿಡುಗಡೆ

**ಕಳೆದ 2024-25ನೇ ಸಾಲಿನಲ್ಲಿ ಕ್ಯಾಪಿಟಲ್ ಎಕ್ಸಪೆನಸ್ 86 ಸಾವಿರ ಕೋಟಿ ರೂ ಇದ್ದದ್ದು ಶೇ.46ರಷ್ಟು ಹೆಚ್ಚಳ ಮಾಡಿದೆ, ಪ್ರತಿಯೊಂದು ಇಲಾಖೆಗಳಿಗೆ ಸಾರ್ವಜನಿಕರಿಗೆ ತಲುಪಿಸಬೇಕಾದ ಸೌಲಭ್ಯಗಳಿಗೆ ಯಾವುದೇ ಕೊರತೆಯಾಗದಂತೆ ಅನುದಾನ ಬಿಡುಗಡೆ ಮಾಡಿದೆ, ಇದರ ಜೊತೆಗೆ ನಿಗಮ, ಮಂಡಳಿಗಳು ಸೇರಿದೆ ಎಂದು ವಿವರಿಸಿದರು.**

ಬೆಂಗಳೂರಿಗೆ ಉದ್ಯೋಗವನ್ನು ಆರಿಸಿಕೊಂಡು ಹೋಗುವುದು ತಪ್ಪುವ ಜೊತೆಗೆ ಜಿಲ್ಲೆಯು ಹೆಚ್ಚು ಅಭಿವೃದ್ಧಿಯಾಗಲಿದೆ ಎಂದು ವಿವರಿಸಿದರು.

ಕೈಗಾರಿಕಾ ಪ್ರದೇಶಗಳಲ್ಲಿ ಉದ್ಯೋಗ ನಿರ್ವಹಿಸುತ್ತಿರುವ ಮಹಿಳೆಯರಿಗೆ ಸುರಕ್ಷ ಹಾಗೂ ವಸತಿ ಸೌಲಭ್ಯವನ್ನು ಕಲ್ಪಿಸುವ ದೆಸೆಯಲ್ಲಿ ನರಸಾಪುರದಲ್ಲಿ 173 ಕೋಟಿ ರೂ ವೆಚ್ಚದಲ್ಲಿ 6 ಸಾವಿರ ಮಹಿಳೆಯರಿಗೆ ವಸಲಿ ನಿಲಯ ನಿರ್ಮಿಸಲಾಗುವುದು.

ಇದು ರಾಜ್ಯದಲ್ಲಿ ಪ್ರಪ್ರಥಮವಾಗಿ ಕಾಂಗ್ರೇಸ್ ಸರ್ಕಾರ ಮಾಡಿದೆ. ಕೆ.ಜಿ.ಎಫ್ ಬಳಿ ಭಾರತೀಯ ಮೀಸಲು ಪೊಲೀಸ್ ಪಡೆ ಸ್ಥಾಪಿಸಲು 40 ಕೋಟಿ ರೂ ಅನುದಾನ ಒದಗಿಸಲಾಗುವುದು ರೈತರ ಆಧುನಿಕ ಮಾರುಕಟ್ಟೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು. ಕೋಲಾರದಲ್ಲಿ ಹೊಸ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲಾಗುವುದು ಎಂದು ತಿಳಿಸಿದರು.

## ಮಿನಿ ನ್ಯೂಸ್

### ಕಾರು-ಬಸ್ ಮುಖಾಮುಖಿ ಡಿಕ್ಕಿ ಇಬ್ಬರು ಸಜೀವ ದಹನ

• ಉದಯವಾಹಿನಿ ಚಿಕ್ಕಬಳ್ಳಾಪುರ

ಖಾಸಗಿ ಬಸ್ ಹಾಗೂ ಕಾರಿನ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಕಾರು ಹೊತ್ತಿ ಉರಿದ ಪರಿಣಾಮ ಇಬ್ಬರು ಸಜೀವವಾಗಿ ದಹನವಾಗಿರುವ ಘಟನೆ ಚಿಂತಾಮಣಿ ತಾಲ್ಲೂಕಿನ ಗೋಪಲ್ಲಿ ಗ್ರಾಮದ ಬಳಿ ನಡೆದಿದೆ. ಮೃತಪಟ್ಟವರ ಹೆಸರು, ವಿಳಾಸ ತಿಳಿದುಬಂದಿಲ್ಲ. ಮದನಪಲ್ಲಿ ಮಾರ್ಗದ ಗೋಪಲ್ಲಿ ಗ್ರಾಮದಲ್ಲಿಂದು ಬೆಳಗ್ಗೆ ಖಾಸಗಿ ಬಸ್ ಹಾಗೂ ಕಾರಿನ ನಡುವೆ ಅಪಘಾತ ಸಂಭವಿಸಿದ್ದು, ಈ ಘಟನೆಯಲ್ಲಿ ಕಾರು ಸಂಪೂರ್ಣವಾಗಿ ಸುಟ್ಟುಹೋಗಿದೆ.

ಕಾರಿನಲ್ಲಿದ್ದ ಐವರ ಪೈಕಿ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಉಳಿದ ಮೂವರಿಗೆ ಗಂಭೀರ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.ಬಸ್‌ನಲ್ಲಿದ್ದವರಿಗೂ ಕೂಡ ಸಣ್ಣಪುಟ್ಟ ಗಾಯಗಳಾಗಿವೆ ಎಂದು ತಿಳಿದುಬಂದಿದೆ.

### ಮಹಿಳೆಯರನ್ನು ಪ್ರತಿಯೊಬ್ಬರು ಗೌರವಿಸಿ

• ಉದಯವಾಹಿನಿ ಮುಳಬಾಗಿಲು

ಭಾರತ ಮಾತೆ ಸೇರಿದಂತೆ ಕೃಷ್ಣೆ, ಗಂಗಾ ನೇತ್ರಾವತಿ ಭದ್ರಾವತಿ ಕಾವೇರಿ ನದಿಗಳ ಹೆಸರುಗಳು ಹೆಣ್ಣು ಮಕ್ಕಳ ಹೆಸರುಗಳಾಗಿದ್ದು ಹೆಣ್ಣು ಸೃಷ್ಟಿ ಕರ್ತೆಯಾಗಿದ್ದು, ಪ್ರತಿಯೊಬ್ಬರು ಹೆಣ್ಣನ್ನು ಗೌರವಿಸಬೇಕೆಂದು ಶಾಸಕ ಸಮೃದ್ಧಿ ವಿ.ಮಂಜುನಾಥ್ ಕರೆ ನೀಡಿದರು. ತಾಲ್ಲೂಕಿನ ಕೆಜಿಎಫ್ ಮುಖ್ಯ ರಸ್ತೆಯ ಕಾಶಿಪುರದಲ್ಲಿ 16 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಬಾಲ ಸ್ನೇಹಿ ಅಂಗನವಾಡಿ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದರು. ವಿಶ್ವ ಮಹಿಳಾ ದಿನಾಚರಣೆ ದಿನದಂದೇ ಅಂಗನವಾಡಿ ಕೇಂದ್ರ ಕಟ್ಟಡವನ್ನು ಉದ್ಘಾಟಿಸಿರುವುದು ಸಂತಸ ತಂದಿದೆ ಎಂದರು.

ನಾನು ಜೆಡಿಎಸ್ ಶಾಸಕನಾಗಿರೋದ್ರಿಂದ ಕಾಂಗ್ರೆಸ್ ಸರ್ಕಾರ ಎಷ್ಟು ಕೊಟ್ರೆ ಅಷ್ಟು ಅನುದಾನ ತಂದು ತಾಲ್ಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ ಸದನದಲ್ಲಿ ಹೆಚ್ಚು ಹೆಚ್ಚಾಗಿ ಹೋರಾಟ ಮಾಡಿ ಅತಿ ಹೆಚ್ಚಿನ ಅನುದಾನ ತಂದು ತಾಲ್ಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು. ತಾಲ್ಲೂಕಿನಲ್ಲಿ ಈಗಾಗಲೇ 125 ರಸ್ತೆ ಕಾಮಗಾರಿ ನಡೆಸಲು ಟೆಂಡರ್ ಕರೆಯಲಾಗಿದೆ ನನ್ನ ಅವಧಿಯಲ್ಲಿ ಮಣ್ಣು ರಸ್ತೆ ಇಲ್ಲದಂತೆ ಎಲ್ಲಾ ಗ್ರಾಮಗಳಲ್ಲೂ ರಸ್ತೆ ಕಾಮಗಾರಿಗಳನ್ನು ನಡೆಸುತ್ತೇನೆ ಗ್ರಾಮಕ್ಕೆ ಶುದ್ಧ ಕುಡಿಯುವ ನೀರಿನ ಘಟಕ ಹೈ ಸಿಡಿಪಿಓ ಮಾಸ್ಟ್ ವಿದ್ಯುತ್ ದೀಪ ಅಂಬೇಡ್ಕರ್ ಸಮುದಾಯ ಭವನ ಅನುದಾನಿತ ಸರಸ್ವತಿ ವಿದ್ಯಾ ಸಂಸ್ಥೆಗೆ ಒಂದು ಕೊಠಡಿಯನ್ನು ನಿರ್ಮಿಸಿ ಕೊಡುವುದಾಗಿ ತಿಳಿಸಿದರು. ನನ್ನ ತಾಯಿ ಪ್ರತಿ ವರ್ಷ ತಮಿಳುನಾಡಿನ ಮೇಲ್ ಮರವತ್ತೂರು ಓಂಶಕ್ತಿ ದೇವಸ್ಥಾನಕ್ಕೆ ಹೋಗುತ್ತಿದ್ದರು ಈಗ ಅವರು ಇಲ್ಲದೇ ಇರೋದ್ರಿಂದ ಅವರ ನೆನಪಿನಲ್ಲಿ ಕಳೆದ ಏಳು ವರ್ಷಗಳಿಂದ ಕೊಟ್ಟ ಮಾತಿನಂತೆ ಯಾವುದೇ ರಾಜಕೀಯ ಉದ್ದೇಶ ಇಲ್ಲದೆ ತಾಲ್ಲೂಕಿನ ಮಹಿಳೆಯರನ್ನು ಓಂಶಕ್ತಿ ದೇವಸ್ಥಾನಕ್ಕೆ ಸ್ವಂತ ಖರ್ಚಿನಿಂದ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಕಳುಹಿಸಿ ಕೊಡುತ್ತಿದ್ದೇನೆ ಎಂದು ತಿಳಿಸಿದರು.

ಮುಖಂಡರು ಜಮಾಯಿಸಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ

# ತಾಲ್ಲೂಕಿಗೆ ನೂತನ ಆಸ್ಪತ್ರೆ ಮಂಜೂರು: ಸಂಭ್ರಮಾಚರಣೆ

• ಉದಯವಾಹಿನಿ ಮಾಲೂರು

ರಾಜ್ಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾಲ್ಲೂಕಿಗೆ ನೂತನ ಆಸ್ಪತ್ರೆ ಕಟ್ಟಡ ಮಂಜೂರು ಮಾಡಿರುವ ಹಿನ್ನೆಲೆಯಲ್ಲಿ ಪಟ್ಟಣದ ಮಾರಿಕಾಂಬ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಜಮಾಯಿಸಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ಆಚರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸಿ.ಲಕ್ಷ್ಮಿನಾರಾಯಣ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ 16ನೇ ಬಜೆಟ್ ಸರ್ವ ವ್ಯಾಪಿ ಸರ್ವರಿಗೂ ಸಮಾನವಾದ ಅವಕಾಶಗಳು ಹಾಗೂ ಬಡವರು ಮಧ್ಯಮ ವರ್ಗದವರು ಅಭಿವೃದ್ಧಿಗೆ ಬಜೆಟ್ ಮಂಡಿಸಿರುವುದು ಸ್ವಾಗತ ಬೆಳವಣಿಗೆಯಾಗಿದೆ.

ಮಾಲಿನ್ಯವನ್ನು ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಜಿಲ್ಲೆಯ ಶಿವಾರಪಟ್ಟಣದ ಬಳಿ ಮಲ್ಟಿ ಸ್ಕೂಟರ್ ನೆಟ್ ಜಿರೋ ಸಾಸ್ ನೇಬಲ್ಟಿ ಇಂಡಸ್ಟ್ರಿ ಪಾರ್ಕ್ ಮಾದರಿಯಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಶಾಸಕ ಕೆ.ವೈ.ನಂಜೇಗೌಡರು ಸೇರಿದಂತೆ ಜಿಲ್ಲೆಯ ಎಲ್ಲಾ ಶಾಸಕರ ಪರಿಶ್ರಮವಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ.ಡಿಕೆಶಿ, ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ , ಅವರಿಗೆ ಶಾಸಕ ಕೆ.ವೈ.ನಂಜೇಗೌಡರ ಪರವಾಗಿ ತಾಲ್ಲೂಕಿನ ಜನತೆ ಧನ್ಯವಾದಗಳನ್ನು ಸಲ್ಲಿಸುವುದಾಗಿ ತಿಳಿಸಿದರು.


☛ ಉದಯವಾಹಿನಿ ಚಿತ್ರ

ಮಾಸ್ತಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎಂ. ವಿಜಯನರಸಿಂಹ ಮಾತನಾಡಿ ಸರ್ಕಾರಿ ಆಸ್ಪತ್ರೆಯ ನೂತನ ಕಟ್ಟಡ ನಿರ್ಮಾಣ ಮಾಡಿ ಮೇಲ್ದರ್ಜೆಗೆ ಏರಿಸಲು ಅನುದಾನ ನಿಗದಿಪಡಿಸಿದ್ದಾರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಾಸಕರಿಗೆ ತಾಲೂಕಿನ ಜನತೆಯ ಪರವಾಗಿ ಕೃತಜ್ಞತೆ ಸಲ್ಲಿಸುವದಾಗಿ ಹೇಳಿದರು. ರಾಜ್ಯ ಯುವ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಸುನಿಲ್ ನಂಜೇಗೌಡ ಮಾತನಾಡಿ ಇಲ್ಲಿ ಸುಸಜ್ಜಿತವಾದ ಆಸ್ಪತ್ರೆಯ ಅಗತ್ಯವಾಗಿರುವ ಕಾರಣ 16ನೇ ಬಜೆಟ್‌ನಲ್ಲಿ ಪಟ್ಟಣದ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲು ಅನುಮೋದನೆ ನೀಡಿರುವುದು ತಾಲ್ಲೂಕಿನ ಜನತೆಗೆ ವಿಶೇಷ ಸೌಲಭ್ಯ ಕಲ್ಪಿಸಿದ್ದಾರೆ ಅವರಿಗೆ ತಾಲ್ಲೂಕಿನ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುವದಾಗಿ ಹೇಳಿದರು. ಪುರಸಭಾ ಅಧ್ಯಕ್ಷೆ ಕೋಮಲ, ಸ್ಥಾಯಿ ಸಮಿತಿ ಅಧ್ಯಕ್ಷ ಎ.ರಾಜಪ್ಪ, ಸದಸ್ಯರಾದ ವಿಜಯಲಕ್ಷ್ಮಿ, ಎನ್.ವಿ.ಮುರಳಿಧರ್, ಆರ್.ವೆಂಕಟೇಶ್, ಇಂಮ್ತಿಯಾಜ್, ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಎಂ.ತನ್ವೀರ್, ಡಿ.ಟಿ.ವಸಂತ್, ಎಂ.ವಿ.ಹನುಮಂತಪ್ಪ, ಪುರ ಅಂಬರೀಶ್, ವಾಸು ಸೇರಿದಂತೆ ಹಲವಾರು ಕಾರ್ಯಕರ್ತರು ಹಾಜರಿದ್ದರು.

**ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜಿ.ಮಧುಸೂಧನ್ ಮಾತನಾಡಿ ದೂರದೃಷ್ಟಿಯುಳ್ಳ ಸರ್ವವ್ಯಾಪಿ ಸಾಮಾಜಿಕ ಹಾಗೂ ಪ್ರಾದೇಶಿಕವಾಗಿ ಬಡವರು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಯಾವುದೇ ಭೇದಭಾವವಿಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಷದ ಬಜೆಟ್‌ಅನ್ನು ನೀಡಿದ್ದಾರೆ ಎಂದರು.**

# ಬಡವರ ಪರವಾದ ಸಿದ್ದರಾಮಯ್ಯ ಬಜೆಟ್

• ಉದಯವಾಹಿನಿ ಕೆಜಿಎಫ್

90 ನೇ ನೇ ವರ್ಷದ ಶ್ರೀ ಪ್ರಸನ್ನಲಕ್ಷ್ಮಿವೆಂಕಟರಮಣ ಸ್ವಾಮಿ ಜಾತ್ರ ಮಹೋತ್ಸವದ ಪ್ರಥಮ ದಿನ ನಡೆಯುವ ರೆಡ್ಡಿ ಜನ ಸಂಘದ ಶಿಭಿಕವಾಹನೋತ್ಸದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯ ಸಾರಿಗೆ ಹಾಗೂ ಮುಜುರಾಯಿ ಸಚಿವ ರಾಮಲಿಂಗರೆಡ್ಡಿ ಕರ್ನಾಟಕ ರಾಜ್ಯದ ಎಲ್ಲಾ 31 ಜಿಲ್ಲೆಗಳಿಗೂ 300 ರಿಂದ 400 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಘೊಷಿಸಿದ್ದಾರೆ ಯಾವುದೇ ಜಿಲ್ಲೆಗೂ ತಾರತಾಮ್ಯವನ್ನು ಮಾಡಿಲ್ಲ ಇದು ಜನಪರವಾದ ಬಜೆಟ್ ಆಗಿದೆ ಎಂದು ಹೇಳಿದರು.

ಕೋಲಾರ ಜಿಲ್ಲೆಗೂ ಸಹ ಮೆಡಿಕಲ್ ಕಾಲೇಜು ಘೊಷಣೆ ಮಾಡಿದ್ದು ಕೆಜಿಎಫ್ ವಿಧಾನಸಭೆ ಕ್ಷೇತ್ರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಎಪಿಎಂಸಿ ಮಾರುಕಟ್ಟೆ ಪ್ರಾರಂಭವಾಗಲಿದೆ ಎಂದು ಹೇಳಿ ಖಾಸಗಿ ಸಹಭಾಗಿತ್ವದ ಬಗ್ಗೆ ಬಜೆಟ್‌ನಲ್ಲಿ ಘೊಷಣೆ ಮಾಡಿದ್ದಾರೆ ಆದರೆ ಇನ್ನು ಕ್ಯಾಬಿನೆಟ್‌ಗೆ ಬಂದಿಲ್ಲ ಕ್ಯಾಬಿನೆಟ್‌ನಲ್ಲಿ ವಿಷಯ ಮಂಡನೆ ಮಾಡಿದ ಸಂದರ್ಭದಲ್ಲಿ ವಿಸ್ತೃತವಾಗಿ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳ ಲಾಗುವುದು ಎಂದು ಹೇಳಿದರು.

ಸಾರಿಗೆ ಇಲಾಖೆಗೆ ಪ್ರತಿ ವರ್ಷ ನಿಗದಿಯಾಗಿರುವಂತೆ ಅನುದಾನ ಬಿಡುಗಡೆಯಾಗಲಿದ್ದು ಸಾರಿಗೆ ಇಲಾಖೆಯ ನಿರ್ವಹಣೆಗೆ ಯಾವುದೇ ತೊಂದರೆ ಇಲ್ಲ ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳನ್ನು ರದ್ದು ಮಾಡುವುದಿಲ್ಲ ಎಂದು ಹೇಳಿದರು.


☛ ಉದಯವಾಹಿನಿ ಚಿತ್ರ

ಶಾಸಕಿ ರೂಪಕಲಾಶಶಿಧರ್ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರೆ ಕೋಲಾರಕ್ಕೆ ಘೊಷಣೆಯಾಗಿರುವ ಮೆಡಿಕಲ್ ಕಾಲೇಜು ಕೆಜಿಎಫ್ ನಗರಕ್ಕೆ ಬರಲಿದೆ ಎಂದು ತಿಳಿಸಿ ಶಾಸಕಿಗೂ ಒತ್ತಾಯಿಸುವಂತೆ ತಿಳಿಸಿದರು. ಇದೇ ವೇಳೆ ಶಾಸಕಿ ರೂಪಕಲಾಶಶಿಧರ್ ಮಾತನಾಡಿ ಎಪಿಎಂಸಿ ಯಾರ್ಡ್ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರಥಮ ಭಾರಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಇರುವಂತೆ ಎಪಿಎಂಸಿ ಮಾರುಕಟ್ಟೆ ನಿರ್ಮಾಣವಾಗಲಿದ್ದು ಆದ್ದರಿಂದ ಸರ್ಕಾರ ಪ್ರಥಮ ಬಾರಿ ಸಹಭಾಗಿತ್ವದಲ್ಲಿ ಎಪಿಎಂಸಿ ಯಾರ್ಡ್ ಪ್ರಾರಂಭಕ್ಕೆ ನೀರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದರು.

# ಮಹಿಳಾ ದಿನಾಚರಣೆ ಪ್ರಯುಕ್ತ ಕನ್ನಡ ಶಿಕ್ಷಕಿಗೆ ಗೌರವ ಸಲ್ಲಿಕೆ

• ಉದಯವಾಹಿನಿ ಚಾಮರಾಜನಗರ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಗಡಿ ಭಾಗ ಚಿಕ್ಕಹೊಳೆ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ತಮಿಳು ಶಾಲೆಯಲ್ಲಿ 14 ವರ್ಷಗಳ ನಿರಂತರವಾಗಿ ಕನ್ನಡ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ವೇತಾ ಅವರಿಗೆ ಡಾ.ಎಸ್.ಪಿ.ಬಾಲಸುಬ್ರಮಣ್ಯಂ ಗಾನಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ ಹಾಗೂ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ವತಿಯಿಂದ ಗಡಿನಾಡ ಕನ್ನಡ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ಚಿಕ್ಕಹೊಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ತಮಿಳು ಶಾಲೆಯಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ರೋಟರಿ ಸಂಸ್ಥೆ ಮಾಜಿ ಅಧ್ಯಕ್ಷ ಕೆಂಪನಪುರ ಮಹದೇವಸ್ವಾಮಿ ಮಾತನಾಡಿ, ಕ್ರಾಂತಿಕಾರಿ ಬಸವಣ್ಣ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಮಹಿಳೆಯರಿಗೆ ಸ್ಥಾನಮಾನ ಕಲ್ಪಿಸುವ ಮೂಲಕ ಸಮಾನತೆ ತಂದುಕೊಟ್ಟಿದ್ದಾರೆ, ಗಡಿ ಭಾಗದ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ವೇತ ಅವರನ್ನು ಸನ್ಮಾನಿಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಚಂದಕವಾಡಿ ಹೋಬಳಿ ಘಟಕದ ಅಧ್ಯಕ್ಷ ಮಂಜುನಾಥ್ ಮಾತನಾಡಿ, ತಮಿಳು ಶಾಲೆಯಲ್ಲಿ ನೂರಾರು ಮಕ್ಕಳಿಗೆ ಕನ್ನಡವನ್ನು ಹೇಳಿಕೊಡುತ್ತಿರುವ ಶಿಕ್ಷಕಿ ಶ್ವೇತ ಅವರನ್ನು ಜಿಲ್ಲಾಮಟ್ಟದ ಶಿಕ್ಷಕ ಪ್ರಶಸ್ತಿಗೆ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು.


☛ ಉದಯವಾಹಿನಿ ಚಿತ್ರ

# ವಿದ್ಯಾರ್ಥಿಗಳು ತಂತ್ರಜ್ಞಾನ, ಸಂಶೋಧನೆಗಳನ್ನು ಕೈಗೊಳ್ಳಬೇಕು

• ಉದಯವಾಹಿನಿ ಮಂಡ್ಯ

ಮಹಿಳಾ ಸರ್ಕಾರಿ ಕಾಲೇಜಿನ ಭೌತಶಾಸ್ತ್ರ ವಿಭಾಗವು ''ಭೌತಶಾಸ್ತ್ರದಲ್ಲಿ ಇತ್ತೀಚಿನ ಪ್ರಗತಿಗಳು'' ಎಂಬ ವಿಷಯದ ಮೇಲೆ ಒಂದು ದಿನದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ರೂಸಾ 2.0 ಅಡಿಯಲ್ಲಿ ಹಮ್ಮಿಕೊಳ್ಳಲಾಗಿತು. ಈ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಹಾರಾಣಿ ಮಹಿಳಾ ಕಾಲೇಜು ಮೈಸೂರಿನ ಭೌತಶಾಸ್ತ್ರ ಪ್ರಾಧ್ಯಾಪಕರಾದ ಡಾ. ಶಿವಲಿಂಗ ಸ್ವಾಮಿ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಜೇಮ್ಸ್ ವೆಬ್ ಬಾಹ್ಯಾಕಾಶ ದೂರದರ್ಶಕವು ಉತ್ತಮವಾದ ತಂತ್ರಜ್ಞಾನವನ್ನ ಒಳಗೊಂಡಿದೆ ಇದು ಬಾಹ್ಯಾಕಾಶದ ಗ್ರಹಗಳು ನಕ್ಷತ್ರಗಳ ಉಗಮ ಕಪ್ಪುಕುಳಿ ಕಪ್ಪು ದ್ರವ್ಯ ಕಪ್ಪು ಶಕ್ತಿಯ ಇರುವಿಕೆಯ ಬಗ್ಗೆ ಅಧ್ಯಯನ ನಡೆಸಲು ಸಹಕಾರಿ ಯಾಗಿದೆ ಎಂದು ತಿಳಿಸಿದರು. ಕ್ರಯೋಜನಿಕ ತಂತ್ರಜ್ಞಾನದ ಬಳಕೆಯು ಹಲವಾರು ಕ್ಷೇತ್ರಗಳಲ್ಲಿ ಪ್ರಯೋಜನಕಾರಿಯಾಗಿದ್ದು ಕ್ರಯೋಜನಿಕ ತಂತ್ರ ವನ್ನು ಖಗೋಳ ವಿಜ್ಞಾನದಲ್ಲಿ ವೈದ್ಯಕೀಯ ಚಿಕಿತ್ಸೆ, ಶಕ್ತಿ ಸಂರಕ್ಷಣಾ ವಿಜ್ಞಾನದಲ್ಲಿ ಹೇಗೆ ಬಳಸುತ್ತಾರೆ ಎಂದು ಪಾಲ್ಗೊಂಡ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆಯ ಮೂಲಕ ವಿವರಿಸಿದರು.

ವಿದ್ಯಾರ್ಥಿಗಳಾದವರು ಇಂತಹ ಉನ್ನತ ತಂತ್ರಜ್ಞಾನದ ಬಗ್ಗೆ ಹೆಚ್ಚಿನ ಆಸಕ್ತಿ ಮತ್ತು ಸಂಶೋಧನೆಯನ್ನು ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಪಾರಂಪರಿಕ ಕಟ್ಟಡ ಸಂರಕ್ಷಣೆಗೆ ಅನುದಾನ ನೀಡಿಲ್ಲ | ದಸರಾ ಪ್ರಾಧಿಕಾರವ ರಚನೆ ಬಗ್ಗೆ ಸೊಲ್ಲೆತ್ತಿಲ್ಲ

# ಬಜೆಟ್ ಖಂಡಿಸಿ ಬಿಜೆಪಿಯಿಂದ ಎತ್ತಿನಗಾಡಿ ಪ್ರತಿಭಟನೆ

• ಉದಯವಾಹಿನಿ ಮೈಸೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ರಾಜ್ಯ ಬಜೆಟ್ ಖಂಡಿಸಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಎತ್ತಿನ ಗಾಡಿ ಮೆರವಣಿಗೆ ನಡೆಸುವ ಮೂಲಕ ಪ್ರತಿಭಟನೆ ನಡೆಸಿದರು. ನಗರದ ರಾಮಸ್ವಾಮಿ ವೃತ್ತದಿಂದ ಜಿಲ್ಲಾ ಪಂಚಾಯತಿ ಕಚೇರಿ ಬಳಿಗೆ ಎತ್ತಿನ ಗಾಡಿಯಲ್ಲಿ ಸಾಗಿದ ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮತ್ತು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಅವರುಗಳು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಈ ವೇಳೆ ಹಲಾಲ್ ಬಜೆಟ್ ಎಂದು ಹೇಳುವ ಮೂಲಕ ಬಜೆಟ್ ಮಂಡನೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ರಾಜ್ಯ ಬಜೆಟ್ ಹಲಾಲ್ ಬಜೆಟ್ ಆಗಿದೆ. ತಮ್ಮ 16ನೇ ದಾಖಲೆಯ ಬಜೆಟ್‌ನಲ್ಲಿ ಮುಸ್ಲಿಮರನ್ನು ಅಪರಿಮಿತವಾಗಿ ಓಲೈಕೆ ಮಾಡಲಾಗಿದೆ. ಇದೊಂದು ರೀತಿಯ ಮುಸ್ಲಿಮರನ್ನು ತುಷ್ಟೀಕರಣಗೊಳಿಸುವ ಬಜೆಟ್ ಆಗಿದೆ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಮೈಸೂರಿನವರೇ ಆದ ಸಿದ್ದರಾಮಯ್ಯನವರು ರೇಷ್ಮೇ ಮಾರುಕಟ್ಟೆ, ಬಾಂಬ್ ಪತ್ತೆ ದಳ, ಅಗ್ನಿ ಶಾಮಕ ಠಾಣೆ ಸೇರಿದಂತೆ ಕೆಲವೊಂದು ಯೋಜನೆ ನೀಡಿದ್ದಾರೆ. ಇದು ಸ್ವಾಗತಾರ್ಹವಾದರೂ ಜಿಲ್ಲೆಯ ಜನರ ಹಲವು ವರ್ಷಗಳ ಬೇಡಿಕೆಯಾದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಮಹಿಳಾ ಡಿಪ್ಲೋಮಾ ಕಾಲೇಜು, ದಸರಾ ಪ್ರಾಧಿಕಾರದ ಬಗ್ಗೆ ಚಕಾರವನ್ನೇ ಎತ್ತಿಲ್ಲ. ಜತೆಗೆ ಶಾಸಕರಿಗೆ ಅನುದಾನ ಮೀಸಲಿಟ್ಟಿಲ್ಲ ಎಂದು ದೂರಿದರು.


☛ ಉದಯವಾಹಿನಿ ಚಿತ್ರ

ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಮಾತನಾಡಿ, ರಾಜ್ಯ ಸರ್ಕಾರ ಎಸ್ಸಿ-ಎಸ್ಟಿ ಸಮುದಾಯದ ಎಸ್ಸಿಪಿ ಮತ್ತು ಸಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುವುದನ್ನು ಮುಂದುವರಿಸಿದೆ. ಈ ಬಾರಿಯ ರಾಜ್ಯ ಬಜೆಟ್‌ನಲ್ಲಿ ಎಸ್ಸಿ, ಎಸ್ಟಿ ಸಮುದಾಯಕ್ಕೆ 42 ಸಾವಿರ ಕೋಟಿ ಅನುದಾನದ ಘೋಷಣೆ ಮಾಡಿದೆ. ಈ ಪೈಕಿ 13 ಸಾವಿರ ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಯಾವುದೇ ಕಾರಣಕ್ಕೂ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಮೀಸಲಿಡುವ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸಿಕೊಂಡರೆ ಬಿಜೆಪಿ ರಾಜ್ಯಾದ್ಯಂತ ಹೋರಾಟ ನಡೆಸಲಿದೆ ಎಂದರು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಮೈಸೂರಿನವರೇ ಆದ ಸಿದ್ದರಾಮಯ್ಯ ಅವರು ಬೆರಳೆಣಿಕೆಯಷ್ಟು ಯೋಜನೆಯನ್ನು ಮೈಸೂರಿಗೆ ನೀಡಿದ್ದಾರೆಯೇ ವಿನಹ ಪ್ರಮುಖ ಯೋಜನೆಗಳನ್ನು ಕೈಬಿಟ್ಟಿದ್ದಾರೆ. ಗ್ರೇಟರ್ ಮೈಸೂರು ಘೋಷಣೆ ಮಾಡಿಲ್ಲ,

ಪಾರಂಪರಿಕ ಕಟ್ಟಡ ಸಂರಕ್ಷಣೆಗೆ ಅನುದಾನ ನೀಡಿಲ್ಲ. ದಸರಾ ಪ್ರಾಧಿಕಾರವ ರಚನೆ ಬಗ್ಗೆ ಸೊಲ್ಲೆತ್ತಿಲ್ಲ. ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುವ ಬಜೆಟ್ ನೀಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

## ಅನುದಾನ ಬಿಡುಗಡೆ

**ಮೈಸೂರಿಗೆ ಬಾಂಬ್ ಪತ್ತೆ ಮತ್ತು ಬಾಂಬ್ ನಿಷ್ಕ್ರಿಯ ದಳದ ಅಗತ್ಯವೇ ಇರಲಿಲ್ಲ. ಇದರ ಬದಲಿಗೆ ಉದಯಗಿರಿಗೆ ಮತ್ತೊಂದು ಪೊಲೀಸ್ ಠಾಣೆ ಕೇಳಲಾಗಿತ್ತು. ಆದರೆ, ಅದನ್ನು ಕಡೆಗಣಿಸಲಾಗಿದೆ. ಒಟ್ಟಾರೆ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್ ಒಂದು ಸಮುದಾಯದ ಜನರನ್ನು ಓಲೈಕೆ ಮಾಡುವ ರೀತಿ ಇದ್ದು, ಜನ ವಿರೋಧಿಯಾಗಿದ ಎಂದು ಆಕ್ರೋಶ ವ್ಯಕ್ತಪಡಿಸಿದರು.**

ಕಾವೇರಿಯಲ್ಲಿ ನೀರು ಇಳಿಮುಖ - ದುಬಾರೆಯಲ್ಲಿ ರಿವರ್ ರ್‍ಯಾಪ್ಟಿಂಗ್ ರದ್ದು - ಪ್ರವಾಸಿಗರಿಗೆ ನಿರಾಸೆ

# ತುಂಬಿ ತುಳುಕುತ್ತಿದ್ದ ದುಬಾರೆಯೀಗ ಖಾಲಿ ಖಾಲಿ

• ಉದಯವಾಹಿನಿ ಕೊಡಗು

ಖ್ಯಾತ ಪ್ರವಾಸಿ ತಾಣವಾದ ದುಬಾರೆ ಪ್ರವಾಸಿ ಈಗ ಪ್ರವಾಸಿಗರಿಲ್ಲದೆ ಭಣಗುಟ್ಟುತ್ತಿದೆ. ಅದಕ್ಕೆ ಕಾರಣ ಈ ಬಾರಿಯ ಬೇಸಿಗೆ. ಸದಾಕಾಲ ಪ್ರವಾಸಿಗರಿಂದ ಸಾಹಸ ಕ್ರೀಡಾ ಪ್ರಿಯರಿಂದ ತುಂಬಿ ತುಳುಕುತ್ತಿದ್ದ ದುಬಾರೆಯೀಗ ಖಾಲಿ ಖಾಲಿ ಎನಿಸುತ್ತಿದೆ. ಇದೇ ವೇಳೆ, ಮೈಸೂರು ನಗರ ಪ್ರದೇಶದ ಜನತೆ, ಬೇಸಿಗೆಯ ಬಿಸಿಲಿನ ಝಳ ತಾಳಲಾರದೆ ನಗರದಲ್ಲಿರುವ ಸರ್ಕಾರಿ ಅಥವಾ ಖಾಸಗಿ ಸ್ವಿಮ್ಮಿಂಗ್ ಪೂಲ್ ಗಳತ್ತ ಮುಖ ಮಾಡುತ್ತಿದ್ದಾರೆ. ಅದರಿಂದ ಅಲ್ಲಿನ ಸ್ವಿಮ್ಮಿಂಗ್ ಪೂಲ್ ಗಳಲ್ಲಿ ಜನರು ತುಂಬಿ ತುಳುಕುತ್ತಿದ್ದಾರೆ.

ಈ ಬಾರಿಯ ಬೇಸಿಗೆಯ ಎಫೆಕ್ಟ್ ನಿಂದಾಗಿ ಅಲ್ಲಿ ಹರಿಯುವ ಕಾವೇರಿ ನದಿಯಲ್ಲಿ ನೀರಿನ ಮಟ್ಟ ಗಣನೀಯವಾಗಿ ಇಳಿಕೆಯಾಗಿದೆ. ದುಬಾರೆಯಲ್ಲಿ ವಾಟರ್ ಸ್ಪೋರ್ಟ್ಸ್ ಗಳದ್ದೇ ಕಾರುಬಾರು. ಅದೇ ಅಲ್ಲಿನ ಪ್ರಮುಖ ಆಕರ್ಷಣೆ. ಆದರೀಗ ಅಲ್ಲಿ ನೀರು ಇಲ್ಲದಿರುವುದಕ್ಕೆ ರಿವರ್ ರ್‍ಯಾಫ್ಟರ್ ಹಾಗೂ ಇನ್ನಿತರ ವಾಟರ್ ಸ್ಪೋರ್ಟ್ಸ್ ಬಂದ್ ಆಗಿವೆ.

ಇದು ತಿಳಿಯದೇ ಹಲವಾರು ಪ್ರವಾಸಿಗರು ಬಂದು, ವಾಟರ್ ಸ್ಪೋರ್ಟ್ಸ್ ಬಂದ್ ಆಗಿರುವುದನ್ನು ಗಮನಿಸಿ ನಿರಾಸೆಯಿಂದ ವಾಪಸ್ ತೆರಳಿದ್ದಾರೆ.

ಅಲ್ಲಿ ಸುಮಾರು 80 ಬೋಟ್ ಮ್ಯಾನ್ ಗಳಿದ್ದಾರೆ. 40 ಮಂದಿ ರ?ಯಾಫ್ಟಿಂಗ್ ಆಪರೇಟರ್ ಗಳಿದ್ದಾರೆ. ಹಣ್ಣು, ವಿವಿಧ ತಿನಿಸು ಹಾಗೂ ಕೂಲ್ ಡ್ರಿಂಕ್ಸ್ ಗಳನ್ನು ಮಾರುವ ಸುಮಾರು 60 ಕುಟುಂಬಗಳಿವೆ. ಇವರೆಲ್ಲರಿಗೆ ಈಗ ಆದಾಯ ತಪ್ಪಿದೆ. ಪ್ರತಿ ವರ್ಷ ಬೇಸಿಗೆ ಬಂದಾಗ ಹೀಗಾಗುತ್ತಿರಲಿಲ್ಲ.


☛ ಉದಯವಾಹಿನಿ ಚಿತ್ರ

## ಏಪ್ರಿಲ್, ಮೇನಲ್ಲಿ ಮಳೆಯಾಗದಿದ್ದರೆ ಕಷ್ಟ

**ಈ ಬಾರಿ ಮುಂಗಾರು ಮಳೆ ತಡವಾಗಿ ಆಗಮಿಸಿದ್ದಕ್ಕೆ ಈ ಬಾರಿ ದುಬಾರೆಯಲ್ಲಿ ಕಾವೇರಿ ನದಿಯಲ್ಲಿ ನೀರಿಲ್ಲದಂತಾಗಿದೆ. ಇದೇ ಏಪ್ರಿಲ್, ಮೇ ತಿಂಗಳಲ್ಲಿ ಮಳೆಯಾಗದಿದ್ದರೆ ಮತ್ತಷ್ಟು ಕಷ್ಟವಾಗುತ್ತದೆ. ದುಬಾರೆಯಲ್ಲಿ ಈಗಲೇ ನದಿಯಲ್ಲಿ ನೀರಿಲ್ಲದೆ, ನದಿಯಲ್ಲಿದ್ದ ಕಲ್ಲುಬಂಡೆಗಳು ಎದ್ದು ಕಾಣುತ್ತಿವೆ. ಮಳೆಯಾಗದಿದ್ದರೆ ಇದ್ದ ನೀರೂ ಮಾಯವಾಗಿ, ಕಾವೇರಿ ನದಿ ಪೂರ್ತಿ ಬರಿದಾಗುತ್ತದೆ. ಅದರಿಂದ, ನದಿ ನೀರನ್ನು ಅವಲಂಬಿಸಿರುವ ಈ ಪರಿಸರದ ಮೀನುಗಾರರಿಗೆ ತೊಂದರೆಯಾಗುತ್ತದೆ. ಸುತ್ತಲಿನ ಜನತೆಗೆ ಕುಡಿಯುವ ನೀರಿನ ತೊಂದರೆಯೂ ಆಗುತ್ತದೆ.**

## ವ್ಯಾಪಾರಸ್ಥರಿಗೆ ಆದಾಯ ಖೋತಾ

**ಕಾವೇರಿ ನದಿ ತುಂಬಿ ಹರಿಯುತ್ತಿದ್ದಾಗ ದುಬಾರಿಯ ಚೆಲುವನ್ನು ಬಣ್ಣಿಸಲು ಪದಗಳೇ ಸಾಲದು. ಆಗ ಅಲ್ಲಿ ವ್ಯಾಪಕವಾಗಿ ನಡೆಯುವ ಜಲಸಾಹಸ ಕ್ರೀಡೆಗಳಲ್ಲಿ ಭಾಗವಹಿಸಲು ಪ್ರವಾಸಿಗರು ಮುಗಿ ಬೀಳುತ್ತಿರುತ್ತಾರೆ. ಆದರೀಗ, ಅಲ್ಲಿ ಸಪ್ಪೆಯ ವಾತಾವರಣವಿದೆ. ಆದರೆ, ಇದರ ನೇರ ಪರಿಣಾಮ ಅಲ್ಲಿಗೆ ಬರುವ ಪ್ರವಾಸಿಗರನ್ನೇ ನೆಚ್ಚಿಕೊಂಡು ಜೀವನ ಸಾಗಿಸುತ್ತಿದ್ದ ಹಲವಾರು ಬಡಕುಟುಂಬಗಳಿಗೆ ತಟ್ಟಿದೆ.**

# ಸಕಾಲದಲ್ಲಿ ಖರೀದಿ ಕೇಂದ್ರ ತರೆದರೆ ಅನುಕೂಲ

• ಉದಯವಾಹಿನಿ ಕೆ.ಆರ್.ಪೇಟೆ

ಪಟ್ಟಣದ ಎಪಿಎಂಸಿ ಆವರಣದಲ್ಲಿ ರಾಜ್ಯ ಸಹಕಾರ ಮಹಾ ಮಂಡಳಿಯಿಂದ ನೂತನವಾಗಿ ಆರಂಭಿಸಲಾದ ಭತ್ತ ಮತ್ತು ರಾಗಿ ಖರೀದಿ ಕೇಂದ್ರವನ್ನು ಶಾಸಕ ಹೆಚ್.ಟಿ.ಮಂಜು ಧಾನ್ಯಗಳ ರಾಶಿಗೆ ಪೂಜೆ ಸಲ್ಲಿಸುವ ಮೂಲಕ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಶಾಸಕರು, ಸರ್ಕಾರ ಭತ್ತ ಮತ್ತು ರಾಗಿ ಖರೀದಿ ಕೇಂದ್ರವನ್ನು ಬೆಂಬಲ ಬೆಲೆಯಲ್ಲಿ ತೆರೆಯುತ್ತಿರುವುದು. ಶ್ಲಾಘನೀಯ. ಆದರೆ, ಸಕಾಲದಲ್ಲಿ ಖರೀದಿ ಕೇಂದ್ರ ತೆರೆದರೆ ರೈತರಿಗೆ ಹೆಚ್ಚು ಅನುಕೂಲವಾಗಲಿದೆ ಎಂದರು. ರೈತರು ಬೆಳೆ ಕಟಾವು ಮುಗಿದು ಎರಡು ಮೂರು ತಿಂಗಳ ಬಳಿಕ ಖರೀದಿ ಕೇಂದ್ರ ತೆರೆದರೆ ರೈತರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ.


☛ ಉದಯವಾಹಿನಿ ಚಿತ್ರ

ಕಟಾವು ಆಗುತ್ತಿದ್ದಂತೆ ದಲ್ಲಾಳಿಗಳು ರೈತರಿಂದ ಬೆಳೆ ಖರೀದಿಸಿ ಬೆಂಬಲ ಬೆಲೆ ಘೋಷಣೆಯಾಗುತ್ತಿದ್ದಂತೆ ಖರೀದಿ ಕೇಂದ್ರಗಳಿಗೆ ಮಾರಾಟ ಮಾಡಿ ಹೆಚ್ಚಿನ ಲಾಭಮಾಡಿಕೊಳ್ಳುತ್ತಾರೆ ಎಂದರು.ಸೇರಿದಂತೆ ಇತರರಿದ್ದರು.

# ಕ್ರೀಡೆಗಳಲ್ಲಿ ತೊಡಗಿಕೊಳ್ಳಲು ಮುರಳಿಧರ್ ಕರೆ

• ಉದಯವಾಹಿನಿ ವಿಜಯಪುರ

ಬದಲಾಗು ತ್ತಿರುವ ಕಾಲಮಾನದಲ್ಲಿ ಅನಾರೋಗ್ಯ ಎಂಬುದು ಎಲ್ಲಾ ವಯಸ್ಸಿನವರುಗಳಿಗೂ ಕಾಡುತ್ತಿದ್ದು, ಉತ್ತಮ ಆರೋಗ್ಯ, ದೇಹದಾರ್ಢ್ಯತೆಯನ್ನು ಉಳಿಸಿಕೊಳ್ಳಬೇಕೆಂದಲ್ಲಿ ಪ್ರತಿಯೊಬ್ಬರು ಯಾವುದಾದರೂ ಒಂದೊಂದು ಕ್ರೀಡೆಯಲ್ಲಿ ತೊಡಗಿಕೊಳ್ಳಬೇಕೆಂದು ದೇವನಹಳ್ಳಿಯ ದಾಸರ ಬೀದಿಯ ಮುರಳಿರವರು ತಿಳಿಸಿದರು.


☛ ಉದಯವಾಹಿನಿ ಚಿತ್ರ

ಅವರು ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆಟದ ಮೈದಾನದಲ್ಲಿ ಎರಡು ದಿನಗಳ ಕಾಲದ ಹದಿನಾರನೇ ವರ್ಷದ ರಾಯಲ್ ಕ್ರಿಕೆಟ್ ಕ್ಲಬ್ ವತಿಯಿಂದ ಏರ್ಪಡಿಸಿದ್ದ ಟೆನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟ್ ಅನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಮುಖ್ಯ ಅತಿಥಿ ಗಳಾಗಿ ಭಾಗವಹಿಸಿ ಮಾತನಾಡಿದ ದೇವನಹಳ್ಳಿ ಪುರಸಭೆ ಸದಸ್ಯರಾದ ಬಾಲರಾಜುರವರು ಕ್ರೀಡೆಯಲ್ಲಿ ತಂಡಗಳ ಸೋಲು ಗೆಲುವು ಎನ್ನುವುದಕ್ಕಿಂತ ಕ್ರೀಡೆ ಗೆಲ್ಲುವಂತಾಗಬೇಕೆಂದು ತಿಳಿಸಿದರು.

ಅಂತರಾಳದಿಂದ... EDITORIAL

# ಕಲಬೆರಕೆ ಆಹಾರಕ್ಕೆ ಬೇಕಿದೆ ಕಡಿವಾಣ

ಹೋಟೆಲ್, ಬೀದಿಬದಿಯ ತಿಂಡಿ ಅಂಗಡಿಗಳಲ್ಲಿ ಗ್ರಾಹಕರನ್ನು ಸೆಳೆಯಲು, ಕಲಬೆರಕೆ ನಡೆಯುತ್ತದೆ. ಅದು ಆರೋಗ್ಯಕ್ಕೆ ಮಾರಕ ಎಂಬುದನ್ನರಿತು ಎಚ್ಚೆತ್ತುಕೊಂಡ ಸರಕಾರಗಳು, ಕೆಲವು ನಿಷೇಧಿತ ಪದಾರ್ಥ ಬಳಸದಂತೆ ತಡೆಯಲು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯ ಜಾರಿಗೆ ಆದೇಶ ನೀಡಲಾಗಿದೆ. ಇಡ್ಲಿ, ಹಸಿರು ಬಟಾಣಿ, ಕಲ್ಲಂಗಡಿ ಬಳಿಕ ಇದೀಗ ಬೆಲ್ಲ ಹಾಗೂ ಟೊಮೆಟೋ ಸಾಸ್ ಕೂಡ ಸೇವನೆಗೆ ಅಸುರಕ್ಷಿತ ಎಂಬ ವರದಿ ಬಹಿರಂಗಗೊಂಡಿದೆ. ಇದು ಕಲಬೆರಕೆ ಮಾಫಿಯಾ ವಿಸ್ತರಣೆಯ ಕನ್ನಡಿಯಾಗಿದೆ. ಆಹಾರದಲ್ಲಿ ಕಲಬೆರಕೆ ಎಂಬುದು ಇತ್ತೀಚೆಗೆ ಸಾರ್ವತ್ರಿಕ ವಾಗಿದೆ. ಬಾಳೆ, ಮಾವು, ದ್ರಾಕ್ಷಿ, ಸೇಬು ಸೇರಿದಂತೆ ನಿತ್ಯವೂ ಜನರು ಬಳಸುವ ಹಣ್ಣುಗಳು ಬೇಗನೇ ಮಾಗಲಿ ಎಂದು



ಕ್ಯಾಲ್ಸಿಯಂ ಕಾರ್ಬೈಡ್ ರಾಸಾಯನಿಕವನ್ನು ಬಳಸುವುದು ಎಲ್ಲರಿಗೂ ಗೊತ್ತಿರುವ ವಿಷಯ.

ಇದರ ತಡೆಗೆ ಕ್ರಮ ಆಗದಿರುವುದು ಆರೋಗ್ಯಕ್ಕೆ ಮಾರಕ ವಾದ ದುಷ್ಕೃತ್ಯ ಅವ್ಯಾಹತವಾಗಿ ನಡೆಯಲು ಕಾರಣವಾಗಿದೆ. ಇನ್ನು ಆಹಾರ ಧಾನ್ಯಗಳಾದ ಅಕ್ಕಿ, ಬೇಳೆ, ಬೆಲ್ಲ, ರವೆ, ಅಡುಗೆ ಎಣ್ಣೆ, ಹಾಲು, ತುಪ್ಪ, ಮೊಸರು, ಮೊಟ್ಟೆ, ಮಾಂಸ, ಮೀನು, ಅಡಕೆ, ಮಸಾಲೆ ಮತ್ತಿತರ ಪದಾರ್ಥಗಳೂ ಪರಿ ಶುದ್ಧವಾಗಿಲ್ಲ. ರುಚಿ ಹೆಚ್ಚಳಕ್ಕೆ ಪೂರಕವಾದ, ವಿಷಕಾರಿ ಅಂಶಗಳಿರುವ, ನಿಷೇಧಿತ ಪದಾರ್ಥಗಳನ್ನು ಬೆರೆಸಿ ಮಾರಾಟ ಮಾಡುವುದು ಒಂದೆಡೆಯಾದರೆ, ಲಾಭಕೋರತನವನ್ನೇ ಗುರಿಯಾಗಿಸಿಕೊಂಡು ಶುದ್ಧವಾದ ಆಹಾರದ ಹದ ಕೆಡಿಸುತ್ತಿರುವ ಬಹುದೊಡ್ಡ ಮಾಫಿ ಯಾ ಸಕ್ರಿಯವಾಗಿದೆ. ಹೋಟೆಲ್, ಬೀದಿಬದಿಯ ತಿಂಡಿ ಅಂಗಡಿಗಳಲ್ಲಿ ಗ್ರಾಹಕರನ್ನು ಸೆಳೆಯಲು, ಕಲಬೆರಕೆ ನಡೆಯುತ್ತದೆ. ಅದು ಆರೋಗ್ಯಕ್ಕೆ ಮಾರಕ ಎಂಬುದನ್ನರಿತು ಎಚ್ಚೆತ್ತುಕೊಂಡ ಸರಕಾರಗಳು, ಕೆಲವು ನಿಷೇಧಿತ ಪದಾರ್ಥ ಬಳಸದಂತೆ ತಡೆಯಲು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯ ಜಾರಿಗೆ ಆದೇಶ ನೀಡಲಾಗಿದೆ. ಆದರೆ ಹೋಟೆಲ್‌ಗಳ ಮೇಲೆ ಅಧಿಕಾರಿಗಳು ನಿಗಾ ಇರಿಸಿ, ಕಾನೂನು ಕ್ರಮ ಕೈಗೊಂಡ ಉದಾಹರಣೆಗಳು ಬೆರಳಣಿಕೆಯಷ್ಟೇ ಇವೆ. ಇನ್ನು, ಪಡಿತರ ವ್ಯವಸ್ಥೆ ಅಡಿ ಫಲಾನುಭವಿಗಳಿಗೆ ಉಚಿತವಾಗಿ ಸಿಗುವ ಅಕ್ಕಿಯನ್ನು ಖರೀದಿಸಿ ಮರು ಮಾರಾಟ ಮಾಡುವ ದೊಡ್ಡ ಜಾಲವೇ ಸಕ್ರಿಯವಾಗಿದೆ. 10 ರಿಂದ 15 ರು.ಗೆ ಒಂದು ಕೆ.ಜಿ. ಅಕ್ಕಿ ಖರೀದಿಸಿ, ಪಾಲಿಶ್ ಮಾಡಿ ಅದನ್ನು ಪ್ಯಾಕ್ ಮಾಡಿ, ಸಾಗಿಸುವ ಜಾಲ ಬಹುತೇಕ ಎಲ್ಲಾ ನಗರಗಳಲ್ಲಿದೆ. ಇದೆಲ್ಲವೂ ಆಡಳಿತ ವ್ಯವಸ್ಥೆಗೆ ಗೊತ್ತಿರುವ ವಿಷಯವೇ. ಆದರೆ ಕ್ರಮ ಕೈಗೊಳ್ಳುವಲ್ಲಿ ನಿಷ್ಕ್ರಿಯವಾಗಿರುವುದರಿಂದ ಜನ ಸಾಮಾನ್ಯರು ಕಲಬೆರಕೆಯ ದುಷ್ಪರಿಣಾಮಕ್ಕೆ ಬಲಿಯಾಗಬೇಕಿದೆ.

## ಯಾವ ಹಣ್ಣು ಸೇವಿಸುವುದರಿಂದ ಅತೀ ಹೆಚ್ಚು ಪ್ರೋಟೀನ್ ಸಿಗುತ್ತೆ ಗೊತ್ತಾ?



ಪೇರಲವು ಪ್ರೋಟೀನ್ ಅಂಶದಲ್ಲಿ ಹೆಚ್ಚು. 100 ಗ್ರಾಂ ಪೇರಲದಲ್ಲಿ 2.6–3 ಗ್ರಾಂ ಪ್ರೋಟೀನ್ ಇದೆ. ಕಲ್ಲಂಗಡಿಯಲ್ಲಿ 0.6 ಗ್ರಾಂ ಮಾತ್ರ. ಹಣ್ಣುಗಳನ್ನು ಮೊಸರು, ಬೀಜಗಳೊಂದಿಗೆ ಸೇರಿಸಿ ಪ್ರೋಟೀನ್ ಹೆಚ್ಚಿಸಬಹುದು. ಹಣ್ಣುಗಳು ಸಾಮಾನ್ಯವಾಗಿ ವಿಟಮಿನ್‌ಗಳು ಮತ್ತು ಖನಿಜಗಳ ಉತ್ತಮ ಮೂಲವೆಂದು ಪರಿಗಣಿಸಲಾಗುತ್ತದೆ. ಆದರೆ, ಕೆಲವು ಹಣ್ಣುಗಳು ಪ್ರೋಟೀನ್ ಅನ್ನು ಸಹ ಒದಗಿಸುತ್ತವೆ ಎಂಬುದರ ಬಗ್ಗೆ ಬಹುತೇಕ ಜನರಿಗೆ ತಿಳಿದಿಲ್ಲ. ಪ್ರೋಟೀನ್ ಭರಿತ ಹಣ್ಣುಗಳನ್ನು ಪೋಷಕಾಂಶ-ದಟ್ಟವಾದ ಆಹಾರಗಳೊಂದಿಗೆ ಸೇರಿಸುವ ಮೂಲಕ, ನೀವು ದೈನಂದಿನ ಪೋಷಕಾಂಶ ಅವಶ್ಯಕತೆಗಳನ್ನು ಪೂರೈಸಬಹುದು. ಈ ಲೇಖನದಲ್ಲಿ, ಯಾವ ಹಣ್ಣಿನಲ್ಲಿ ಹೆಚ್ಚು ಪ್ರೋಟೀನ್ ಇದೆ ಮತ್ತು ಯಾವ ಹಣ್ಣಿನಲ್ಲಿ ಕಡಿಮೆ ಪ್ರೋಟೀನ್ ಇದೆ ಎಂಬುದನ್ನು ತಿಳಿಯೋಣ.

**ಹೆಚ್ಚು ಪ್ರೋಟೀನ್ ಇರುವ ಹಣ್ಣು ಯಾವುದು?:** ಚೆನ್ನೈನ ಶ್ರೀ ಬಾಲಾಜಿ ಮೆಡಿಕಲ್ ಸೆಂಟರ್‌ನ ನೋಂದಾಯಿತ ಆಹಾರ ತಜ್ಞೆ ದೀಪಾಲಕ್ಷ್ಮಿಯವರ ಮಾತುಗಳ ಪ್ರಕಾರ, ಪೇರಲ ಪ್ರೋಟೀನ್ ಅಂಶದಲ್ಲಿ ಅತಿ ಹೆಚ್ಚು ಇರುವ ಹಣ್ಣಾಗಿದೆ.

## ರಾಮಾಯಣ



ಅಯೋಧ್ಯಾ ಪಟ್ಟಣವನ್ನು ಅಲಂಕರಿಸಿದ್ದು

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ಆ ದೇವಿಯು ತನ್ನನ್ನು ಕಂಡು ಹೋಮಶಾಲೆಯಿಂದ ಹೊರಟುಬರಲು ರಾಮನು ಅತ್ಯಂತ ಭಯಭಕ್ತಿಯಿಂದ ಆಕೆಗೆ ಸಾಷ್ಟಾಂಗ ದಂಡಪ್ರಣಾಮವನ್ನು ಮಾಡಿದನು.

ಕೌಸಲ್ಯಾದೇವಿಯು ತನ್ನ ಮಗನನ್ನು ತಬ್ಬಿಕೊಂಡು ಶಿರಸ್ಸನ್ನಾಘ್ರಾಣಿಸಿ ಪುತ್ರವಾತ್ಸಲ್ಯದಿಂದ ಆತನನ್ನು ನೋಡಿ ಶ್ರೀರಾಮ ನಿನಗೆ ನಿನ್ನ ಪೂರ್ವದ ಅರಸರ ಮಹಿಮೆಯುಂಟಾಗಲಿ, ನೀನು ಸತ್ಯಸಂಧನಾಗು ಧರ್ಮಾತ್ಮನಾದ ದಶರಥರಾಯನನ್ನು ನೋಡು: ನಿನಗೆ ಪಟ್ಟಾಭಿಷೇಕವನ್ನು ಮಾಡುವನು ! ಈ ರತ್ನಪೀಠದ ಮೇಲೆ ಕುಳಿತುಕೊಂಡು ಭೋಜನವನ್ನು ಮಾಡು ಎಂದು ನುಡಿದಳು. ಆ ಮಾತನ್ನು ಕೇಳಿ ಶ್ರೀರಾಮನು ಲಜ್ಜೆಯಿಂದ ತಲೆಬಗ್ಗಿಸಿಕೊಂಡು ತನ್ನ ತಾಯಿಯನ್ನು ಗುರುಭಾವದಿಂದೆಣಿಸುತ್ತ ಕೈಮುಗಿದು ಅಮ್ಮ, ನೀನು ಇನ್ನೂ ಕೇಳಲಿಲ್ಲವೆ ಮಹತ್ತಾದ ಅಪತ್ತು ಪ್ರಾಪ್ತವಾಯಿತು. ಮಹಾರಾಜನು ನನ್ನನ್ನು ದಂಡಕಾರಣ್ಯಕ್ಕೆ ಹೋಗಿ ಅಲ್ಲಿ ಹದಿನಾಲ್ಕು ವರುಷಗಳು ಕಂದ ಮೂಲ ಫಲಾದಿಗಳನ್ನು ಆಹಾರಮಾಡಿಕೊಂಡು ನಾರುಬಟ್ಟೆಯನ್ನುಟ್ಟು ಜಡೆಗಳನ್ನು ಧರಿಸಿಕೊಂಡು ಮುನಿವೃತ್ತಿಯಿಂದ ತಪಸ್ವಿಯಾಗಿರಬೇಕೆಂದು ಆಜ್ಞಾಪಿಸಿದ್ದಾನೆ. ನಾನು ಹಾಗೆಯೇ ವನಕ್ಕೆ ಹೋಗಿ ನಿರ್ಜನ ಪ್ರದೇಶದಲ್ಲಿ ಹದಿನಾಲ್ಕು ವರುಷಗಳು ವಾಸ ಮಾಡುವೆನು. ಮಹಾರಾಜನು ಭರತನಿಗೆ ಪಟ್ಟಾಭಿಷೇಕವನ್ನು ಮಾಡಿ ಸಮಸ್ತವಾದ ರಾಜ್ಯ ಭಾರವನ್ನೂ ಆತನ ವಶಮಾಡಿ ಸುಖದಿಂದಿರಲಿ ಎಂದು ನುಡಿದನು..

ಆ ಮಾತನ್ನು ಕೇಳಿ ಕೌಸಲ್ಯಾದೇವಿಯು ಕಾದ ಅಲಗು ಎದೆಯಲ್ಲಿ ಹೂಡಿದಂತೆಯೂ ಕೊಡಲಿಯಿಂದ ತರಿದು ಬಿದ್ದ ಮರದಂತೆಯೂ ದೇವಲೋಕದಿಂದ ಭೂಮಿಯಲ್ಲಿ ಬಿದ್ದ ದೇವಯಂತೆಯೂ ಮೂರ್ಛಿತೆಯಾಗಿ ಬಿದ್ದಳು. ಶ್ರೀರಾಮನು ಅದನ್ನು ಕಂಡು ಬಿರುಗಾಳಿಯ ವೇಗದಿಂದ ಮುರಿದುಬಿದ್ದ ಬಾಳೆಯ ಮರದ ಹಾಗಿದ್ದ ಕೌಸಲ್ಯಾದೇವಿಯನ್ನು ಕೈ ಹಿಡಿದೆತ್ತಿ ಆಕೆಯು ಭೂಮಿಯಮೇಲೆ ಹೊರಳಿದ್ದರಿಂದ ಸರ್ವಾಂಗಗಳಲ್ಲಿದ್ದ ಧೂಳನ್ನು ತನ್ನ ಕೈಯಿಂದ ಒರಸಿ ಎಚ್ಚರಗೊಳಿಸಿ ಸಂತವಿಟ್ಟನು. ಕೌಸಲ್ಯಾದೇವಿಯು ಲಕ್ಷ್ಮಣನು ಕೇಳುವಂತೆ ಆ ಪುರುಷೋತ್ತಮನನ್ನು ಕುರಿತು ಶ್ರೀರಾಮ, ಇಂಥ ದುಃಖವನ್ನುಂಟುಮಾಡಲು ನೀನು ನನ್ನ ಉದರದಲ್ಲಿ ಜನಿಸದೆ ನಾನು ಬಂಜೆಯಾಗಿದ್ದಿದ್ದರೆ ದುಃಖಬರುತ್ತಿರಲಿಲ್ಲ. ಆಗ ನಾನು ಬಂಜೆಯಾಗಿದ್ದೇನೆ ಎಂಬ ದುಃಖವಲ್ಲದೆ ಮತ್ತೊಂದಿರುತ್ತಿರಲಿಲ್ಲ. ಇದುವರೆಗೆ ನನ್ನ ಪತಿಯಾದ ದಶರಥರಾಯನಿಂದ ಒಂದು ಸುಖವನ್ನಾದರೂ ಕಂಡವಳಲ್ಲ. ನೀನು ಜನಿಸಿದಮೇಲೆ ನೀನು ಪ್ರಬುದ್ಧನಾದರೆ ಸಂತೋಷದಿಂದ ಜೀವಿಸಿಕೊಂಡಿರುವೆನೆಂದಿದ್ದನು. ಇನ್ನು ನಾನು ನನ್ನ ಸವತಿಯರ ಕರ್ಣಕಠೋರವಾದ ಮಾತುಗಳನ್ನು ಹೇಗೆ ಕೇಳಲಿ ಮನೋವ್ಯಥೆಯಿಂದ ಶರೀರ ಕೃಶವಾಗಿ ಹೇಗೆ ಇದ್ದೇನು ? ಲೋಕದಲ್ಲಿ ಸ್ತ್ರೀಯರಿಗೆ ಸವತಿಯ ಏಳಿಗೆಯನ್ನು ಕಾಣುವುದಕ್ಕಿಂತಲೂ ಅಧಿಕವಾದ ದುಃಖವಿಲ್ಲ. ನೀನು ಸಮೀಪದಲ್ಲಿದ್ದೂ, ದಶರಥರಾಯನು ನನಗೆ ಅಗೌರವ ತೋರುತ್ತಿದ್ದನು. ಇನ್ನು ನೀನು ವನಕ್ಕೆ ಹೋದಮೇಲೆ ವೇಳುವುದೇನು! ಕಡೆಗೆ ನನಗೆ ಮರಣವೇ ಪ್ರಾಪ್ತಿಯಲ್ಲದೆ ಮತ್ತೊಂದು ಗತಿಯಿಲ್ಲ, ಕೈಕೇಯಾದೇವಿಯು ನನ್ನನ್ನು ನಿಗ್ರಹಿಸಿ ರಾಜನ ಮನಸ್ಸಿಗೆ ಜಾಡಿಗಳಿಂದ ಕೋಪವನ್ನು ಹುಟ್ಟಿಸಿ ನನ್ನನ್ನು ಹೊರಡಿಸುವಳಲ್ಲದೆ ಸುಮ್ಮನಿರಳು. ನಿನ್ನ ದಾಕ್ಷಿಣ್ಯದಿಂದ ನನಗೆ ಸೇವಾಸತ್ಕಾರಗಳನ್ನು ಮಾಡಿಕೊಂಡು ನನ್ನ ಮಾತಿಗೊಳಗಾಗಿರುವಂಥವರೂ ನೀನು ವನವಾಸಕ್ಕೆ ಹೋದಮೇಲೆ ನನ್ನೊಡನೆ ಮುಖಕೊಟ್ಟು ಮಾತನಾಡರು, ಸ್ವಭಾವದಿಂದ ಕೌಟಿಲ್ಯಗುಣವುಳ್ಳ ಕೈಕೇಯಿದೇವಿಯ ಹುಬ್ಬುಗಂಟಿನ ಮುಖವನ್ನು ಹೇಗೆ ನೋಡಲಿ ನಿನಗೆ ಉಪನಯನವಾಗಿ ಹದಿನೇಳು ವರುಷಗಳು ಕಳೆದವು. ಇನ್ನು ನೀನು ಪ್ರಬುದ್ಧನಾಗಿ ಪಟ್ಟಾಭಿಷಿಕ್ತನಾಗಿ ಸ್ವತಂತ್ರ ಬುದ್ಧಿಯಿಂದ ನಡೆದರೆ ನಿನ್ನಿಂದ ಸಮಸ್ಯೆ ದುಃಖಗಳನ್ನೂ ಕಳೆದುಕೊಳ್ಳುವೆನೆಂದು ಬಯಸಿದ್ದ ನಾನು ಎಂದೆಂದಿಗೂ ಅಪರಿಮಿತವಾದ ದುಃಖ ಕ್ಕೊಳಗಾದೆನು.

ಮುಂದುವರಿಯುವುದು...



ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

# ಮುದನೀಡಿದ ನಾಟ್ಯಶಂಕರನ ನೃತ್ಯ ಝೇಂಕಾರ

ನಾಟ್ಯಾಧಿಪತಿ ಶಂಕರನ ಸಪ್ತತಾಂಡವಗಳ ನೃತ್ಯವೈವಿಧ್ಯ ಎಂದೂ ಹೃದಯ ಸ್ಪರ್ಶಿ. ಶಿವನ ಸುತ್ತ ಹೆಣೆಯಲಾದ ಸಂಚಾರಿ ಕಥೆಗಳು ಕೌತಕಮಯವಾಗಿದ್ದು, ದೃಶ್ಯಪೂರ್ಣ ಸೌಂದರ್ಯದಿಂದ ಎಂದೂ ಮುದ ನೀಡುವಂಥದ್ದು. ಇಂಥದೊಂದು ಸ್ವಾರಸ್ಯಕರ ಕಥಾನಕದ ನೃತ್ಯರೂಪಕ 'ನಾಟ್ಯ ಶಂಕರ' ಇತ್ತೀಚೆಗೆ ಶಿವರಾತ್ರಿಯ ದಿನಗಳಲ್ಲಿ 'ನಯನ' ರಂಗಮಂದಿರದಲ್ಲಿ ಕಲಾರಸಿಕರಿಗೆ ನೀಡಿದ ರಸಾನುಭವ ಚಿರಸ್ಮರಣೀಯ. ಖ್ಯಾತ ಹಿರಿಯ ನೃತ್ಯಾಚಾರ್ಯ ಕೇಶವಮೂರ್ತಿ ನೇತೃತ್ವದ 'ಕೇಶವ ನೃತ್ಯಶಾಲೆ'- ಕನ್ನಡ ನೃತ್ಯರೂಪಕಗಳ ಅಸ್ಮಿತೆಯಿಂದ ಖ್ಯಾತಿ ಪಡೆದಿದೆ. ಈ ಪರಂಪರೆಯು ಅವರ ಪುತ್ರ ನೃತ್ಯಾಚಾರ್ಯ ಡಾ. ಬಿ.ಕೆ. ಶ್ಯಾಂ ಪ್ರಕಾಶರಿಂದ ಮುಂದುವರೆದು, ನೃತ್ಯ ಕಲಾವಿದ-ಗುರು ಕಲಾಯೋಗಿ ಎಸ್. ರಘು ನಂದನರ ನವಪ್ರಯೋಗಗಳಿಂದ ಹೊಸ ಆಯಾಮ ಪಡೆಯುತ್ತ ಸಾಗಿದೆ.

**ಶಿವಪುರಾಣ ಆಧರಿಸಿದ ಕಥಾರೂಪಕ**

ಹಿಂದೆ 'ಶಿವ ಶಕ್ತಿ' ಹೆಸರಿನಲ್ಲಿ ಯಶಸ್ವಿಯಾಗಿದ್ದ ನೃತ್ಯರೂಪಕವನ್ನು ಇವರು ಹೊಸದಾಗಿ ನಿರ್ಮಿಸಿ, ತಮ್ಮ ಪ್ರಯೋಗಶೀಲ ಪ್ರತಿಭಾ ಮೂಸೆಯಲ್ಲಿ ಅಣಿಗೊಳಿಸಿ, ಹೊಸ ಮಿನುಗಿನ ನೃತ್ಯ ಸಂಯೋಜನೆ, ನಿರ್ದೇಶನ - ಪರಿಕಲ್ಪನೆಯೊಂದಿಗೆ 'ಕೇಶವ ನೃತ್ಯಶಾಲೆ' ಮತ್ತು 'ಅಭಿವ್ಯಕ್ತಿ ಡ್ಯಾನ್ಸ್ ಸೆಂಟರ್'ನ ವತಿಯಿಂದ ನೀಡಿದ ಹೊಸಕೊಡುಗೆ ಎನ್ನಬಹುದು. ಪ್ರಮುಖವಾಗಿ ಶಿವಪುರಾಣವನ್ನು ಆಧರಿಸಿ ಹೆಣೆಯಲಾದ ನಾಟ್ಯ ಶಂಕರ ಭರತನಾಟ್ಯದ ಚೌಕಟ್ಟಿನಲ್ಲಿಯೇ ಒಡಮೂಡಿತ್ತು. ಆಕರ್ಷಕ ವೇಷಭೂಷಣ, ಜಾನಪದ ಮೆರುಗು- ಭರತನಾಟ್ಯದ ಸಾಂಪ್ರದಾಯಕ ಉಡುಗೆ-ತೊಡುಗೆಗಳೊಂದಿಗೆ ಹಿನ್ನಲೆಯ ಪರದೆಯ ಮೇಲೆ ಹೆಚ್ಚಿನ ಪರಿಣಾಮಕ್ಕಾಗಿ ಬಳಸಲಾದ ಪ್ರೊಜೆಕ್ಷನ್ ಪೂರಕ ಚಿತ್ರಗಳ ಮೂಲಕ ಸುಂದರವಾಗಿ ಮೂಡಿಬಂತು. ಎಂಟು ಅಂಕಗಳಲ್ಲಿ, ಸುಮಾರು ಎರಡು ಗಂಟೆಗಳ ಕಾಲ ದೃಶ್ಯವತ್ತಾಗಿ ಸಾಗಿದ 'ನೃತ್ಯ ನಾಟಕ' ಶಿವ-ಪಾರ್ವತಿಯಾಗಿ ರಘುನಂದನ್ ಮತ್ತು ಮಾನಸಿ ದಂಪತಿಗಳ ಅನುರೂಪ ಹೆಜ್ಜೆಗಳೊಡನೆ ಸುಮಾರು ಐವತ್ತು ಮಂದಿ ನೃತ್ಯ ಕಲಾವಿದರ ಸುಮನೋಹರ ನಾಟ್ಯವಲ್ಲರಿಯಿಂದ ಚೆಂದಗೊಂಡಿತು. ಶಿವನ ಪಂಚಕ್ರಿಯೆ ಮತ್ತು ಸಪ್ತತಾಂಡವಗಳ ಸಂಕ್ಷಿಪ್ತ ನೋಟ ಮತ್ತು ಓಂ ಶಿವಶಕ್ತಿಯ ಶಿವಗಣದ ಪ್ರಾರ್ಥನೆಯ ಸುಂದರ ಆಂಗಿಕಾಭಿನಯದ ಶಕ್ತಿಶಾಲಿಯಾದ ನರ್ತನ ಸಾಕ್ಷಾತ್ಕರಿಸಿತು. ಢಮರುಗ ಝೇಂಕರಿಸುತ್ತ ಸಶಕ್ತ ಹೆಜ್ಜೆಗಳನ್ನಿಡುತ್ತ ಲಯಾತ್ಮಕವಾಗಿ ರಂಗದ ತುಂಬಾ ಸಪ್ತ ತಾಂಡವದ ವೈವಿಧ್ಯ ಛಾಪು ಒತ್ತಿದ ಉಗ್ರ ಶಿವನ ರುದ್ರನರ್ತನ ನೋಡುಗರೆದೆಯಲ್ಲಿ ಅನುರಣಿಸಿತು. ಢಮರುಗವನ್ನು 14 ಬಾರಿ ನಿನದಿಸಿದ ಶಂಕರನು ಸೃಷ್ಟಿಸಿದ ಲೋಕದ ಚರಾಚರದ ಅವತರಣಿಕೆ, ಹಿನ್ನಲೆಯ ಪರದೆಯ ಮೇಲೆ ಸಾಂಕೇತಿಕವಾಗಿ ಧಗಧಗಿಸುವ ಅಗ್ನಿಯ ಜ್ವಲನ ದೃಶ್ಯವತ್ತಾಗಿ ಅರಳಿತು. ಜತಿಗಳಿಗೆ ಅನುಗುಣವಾಗಿ ರೋಮಾಂಚಕ ಹೆಜ್ಜೆಯಲ್ಲಿ ರಂಗಾಕ್ರಮಿಸಿ ನರ್ತಿಸಿದ ಸೃಷ್ಟಿ ಚೇತನ ಶಿವನ ಒಂದೊಂದು ಭಂಗಿಯೂ ಅನನ್ಯವಾಗಿತ್ತು. ನಯನ ಮನೋಹರ ಶಿವನ ನಾಟ್ಯವನ್ನೇ ಆಸಕ್ತಿಯಿಂದ ಮೈಮರೆತು ನೋಡುತ್ತಿದ್ದ ತಮ್ಮ ಪತ್ನಿಗಣವನ್ನು ಕಂಡ ಋಷಿಗಳು ಅಪಾರ್ಥ ಮಾಡಿಕೊಂಡು ಶಿವನನ್ನು ಸಂಹರಿಸಲು ಅವನ ಮೇಲೆ ಅನೇಕ ದುಷ್ಟಶಕ್ತಿಗಳನ್ನು ಪ್ರಯೋಗಿಸುವರು. ಮೇಲೆರಗಿ ಬಂದ ವ್ಯಾಘ್ರನ ಸಂಹರಿಸಿ ಶಿವನು ಅದರ ಚರ್ಮವನ್ನು ಧರಿಸಿ ಚರ್ಮಾಂಬರನಾಗುವನು. ಕೊಲ್ಲಲು ಬಂದ ಕಾಳ ಸರ್ಪ ಶರಣಾಗಿ ಶಿವನ ಕೊರಳಭೂಷಣನಾಗುವಲ್ಲಿ ಶಂಕರನ ವಿಜಯಪತಾಕೆ ಮೊಳಗುವುದು. ಕಥಾಸರಣಿ ಮುಂದುವರೆಯುತ್ತಾ, ಶಿವ- ಪಾರ್ವತಿಯರ ಪಾಣಿಗ್ರಹಣದ ರಮ್ಯ ಸಂಚಾರಿಯಲ್ಲಿ ಶಿವ-ಶಕ್ತಿಯರ ರಮಣೀಯ ನರ್ತನ, ಶಂಕರನ ಪ್ರದೋಷ ನಾಟ್ಯವು ಆಮೋದ-ಸಂಭ್ರಮದಿಂದ ನಡೆಯುತ್ತದೆ. ಇಂದ್ರಸಭೆಯಲ್ಲಿ ಬ್ರಹ್ಮ-ವಿಷ್ಣು ಈ ನಾಟ್ಯ ಸಂಭ್ರಮದಲ್ಲಿ ಭಾಗಿಯಾಗಿ, ಲಕ್ಷ್ಮೀ-ಸರಸ್ವತಿಯರು ವಾದ್ಯಗಳನ್ನು ನುಡಿಸುವಾಗ ಶಿವನಾಡುವ 'ಸಂಧ್ಯಾ ತಾಂಡವ' ಆನಂದದಲೆಯನ್ನು ಪಸರಿಸುತ್ತದೆ. ಪ್ರತಿ ದೃಶ್ಯವನ್ನು ಬೆಸೆಯುವ ಸರಪಳಿಗಳಂತೆ ನರ್ತಿಸುವ ಕಲಾವಿದೆಯರ ಸಾಮರಸ್ಯದ ಹೆಜ್ಜೆ- ಗೆಜ್ಜೆಗಳು ಸಂಭ್ರಮವನ್ನು ಹರಡಿದವು.



ಮುಂದೆ- ತ್ರಿಪುರಾಸುರರ ಅಟ್ಟಹಾಸವನ್ನು ಮೆಟ್ಟಿಕ್ಕಿದ ಶಿವನ ಚೇತೋಹಾರಿ ನಾಟ್ಯವಿಲಾಸ ಮನದುಂಬಿ ಶಿವನ ಔನ್ನತ್ಯದ ದರ್ಶನವಾಗುವುದು. ನೃತ್ಯರೂಪಕದ ಪ್ರತಿ ದೃಶ್ಯಗಳೂ ನಾಟ್ಯಶಂಕರನ ಸಮಗ್ರ ಚಿತ್ರಣವನ್ನು ವಿವಿಧ ಸಂಚಾರಿಗಳಲ್ಲಿ ಕಟ್ಟಿಕೊಡುತ್ತದೆ. ಲೀಲಾಜಾಲ ನರ್ತನದ ಸೌಂದರ್ಯ, ಸರಳ ಸಾಹಿತ್ಯ – ಸಂಗೀತದ ನಿನಾದಗಳಿಂದ ಮೆಚ್ಚುಗೆ ಪಡೆಯಿತು. ಈ ಶ್ಲಾಘನೀಯ ಪ್ರಯೋಗ ರಘುನಂದನರ ಕಿರೀಟಕ್ಕೆ ಹೊಸ ಗರಿಯಾಗಿ ಅವರ ಮುಂದಿನ ನಿರ್ಮಾಣಗಳ ಬಗ್ಗೆ ಭರವಸೆ ಮೂಡಿಸಿತು.

# ಅಗ್ನಿಹೋತ್ರ; ದಿನನಿತ್ಯದಲ್ಲಿ ಉಪಯುಕ್ತ

• ಶ್ರೀ. ವಿನೋದ್ ಕಾಮತ್

ತ್ರಿಕಾಲಜ್ಞಾನಿ ಸಂತರು, ಮುಂದೆ ಭೀಕರ ಆಪತ್ಕಾಲ ಬರಲಿದೆ ಮತ್ತು ಅದರಲ್ಲಿ ಜಗತ್ತಿನಲ್ಲಿನ ಬಹಳಷ್ಟು ಜನರು ನಾಶವಾಗುವವರಿದ್ದಾರೆ ಎಂದು ಹೇಳಿದ್ದಾರೆ. ಮುಂದೆ ಆಪತ್ಕಾಲ ಬರಲಿದೆ ಎಂದು ಹೇಳುವುದಕ್ಕಿಂತ ಈಗ ಆಪತ್ಕಾಲ ಪ್ರಾರಂಭವಾಗಿದೆ ಎನ್ನುವುದೇ ಸೂಕ್ತವಾಗಿದೆ. ಆಪತ್ಕಾಲದಲ್ಲಿ ಮೂರನೇ ಮಹಾಯುದ್ಧ ಪ್ರಾರಂಭವಾಗಬಹುದು. ಈ ಗ' ಜಗತ್ತಿನಲ್ಲಿನ ಎಲ್ಲಾ ರಾಷ್ಟ್ರಗಳ ಬಳಿ ಎರಡನೇ ಮಹಾಯುದ್ಧಕ್ಕಿಂತ ಮಹಾ ಸಂಹಾರಕ ಅಣ್ವಸ್ತ್ರಗಳಿವೆ. ಮುಂದೆ ಅವುಗಳನ್ನು ಒಬ್ಬರ ಮೇಲೊಬ್ಬರು ಉಪಯೋಗಿಸಬಹುದು.



ಈ ಯುದ್ಧದಲ್ಲಿ ಬದುಕಬೇಕಾದರೆ, ಅಣ್ವಸ್ತ್ರಗಳನ್ನು ನಿಷ್ಕ್ರಿಯಗೊಳಿಸಲು ಪ್ರಭಾವಿ ಉಪಾಯಗಳು ಬೇಕು; ಹಾಗೆಯೇ ಈ ಅಣ್ವಸ್ತ್ರಗಳಿಂದ ಹೊರಸೂಸುವ ವಿಕಿರಣಗಳ ಹರಡುವಿಕೆಯನ್ನು ನಾಶಗೊಳಿಸುವ ಉಪಾಯಗಳೂ ಬೇಕು. ಇದಕ್ಕೆ ಸ್ಥೂಲದಲ್ಲಿನ ಉಪಾಯಗಳು ಉಪಯೋಗಕ್ಕೆ ಬರಲಾರವು, ಏಕೆಂದರೆ ಅಣುಬಾಂಬು ಸಾಮಾನ್ಯ ಬಾಂಬಿಗಿಂತ ಸೂಕ್ಷ್ಮವಾಗಿದೆ. ಸ್ಥೂಲ (ಉದಾ. ಬಾಣವನ್ನು ಬಿಟ್ಟು ಶತ್ರುವನ್ನು ನಾಶ ಮಾಡುವುದು), ಸ್ಥೂಲ ಅಧಿಕ ಸೂಕ್ಷ್ಮ (ಉದಾ. ಮಂತ್ರವನ್ನು ಹೇಳಿ ಬಾಣವನ್ನು ಬಿಡುವುದು), ಸೂಕ್ಷ್ಮತರ (ಉದಾ. ಕೇವಲ ಮಂತ್ರವನ್ನು ಹೇಳುವುದು) ಮತ್ತು ಸೂಕ್ಷ್ಮತಮ (ಉದಾ. ಸಂತರ ಸಂಕಲ್ಪ) ಹೀಗೆ ಮುಂದುಮುಂದಿನ ಪ್ರಭಾವಶಾಲಿ ಹಂತಗಳಿವೆ. ಸ್ಥೂಲಕ್ಕಿಂತ ಸೂಕ್ಷ್ಮವು ಅನೇಕ ಪಟ್ಟು ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ. ಆದುದರಿಂದ ಅಣುಬಾಂಬಿನಂತಹ ಪ್ರಭಾವಿ ಸಂಹಾರಕ ವಿಕಿರಣಗಳ ಹರಡುವಿಕೆಯನ್ನು ತಡೆಗಟ್ಟಲು ಸೂಕ್ಷ್ಮದಲ್ಲಿಯೇ ಏನಾದರೂ ಮಾಡಬೇಕಾಗುತ್ತದೆ. ಇದಕ್ಕೆ ಋಷಿಮುನಿಗಳು ಯಜ್ಞದ ಪ್ರಥಮಾವತಾರವಾಗಿರುವ ಅಗ್ನಿಹೋತ್ರವನ್ನು ಮಾಡಲು ಹೇಳಿದ್ದಾರೆ. ಅಗ್ನಿಹೋತ್ರವು ಮಾಡಲು ಅತ್ಯಂತ ಸುಲಭ, ಅತ್ಯಂತ ಕಡಿಮೆ ಕಾಲಾವಧಿಯಲ್ಲಿ ಆಗುವ ಮತ್ತು ಸೂಕ್ಷ್ಮದಲ್ಲಿ ಪ್ರಭಾವಿ ಪರಿಣಾಮವನ್ನು ಬೀರುವ ಉಪಾಯವಾಗಿದೆ. ಇದರಿಂದ ವಾತಾವರಣವು ಚೈತನ್ಯಮಯ ವಾಗುತ್ತದೆ ಮತ್ತು ರಕವಚವೂ ನಿರ್ಮಾಣವಾಗುತ್ತದೆ. ಪ್ರತಿದಿನ ಅಗ್ನಿಹೋತ್ರ ಮಾಡುವುದು ಕೇವಲ ಆಪತ್ಕಾಲದ ದೃಷ್ಟಿಯಿಂದ ಮಾತ್ರವಲ್ಲದೇ, ನಿತ್ಯವೂ ಉಪಯುಕ್ತವಾಗಿದೆ. ಈ ಲೇಖನದಿಂದ ವಾಚಕರಿಗೆ ಅಗ್ನಿಹೋತ್ರದ ಪರಿಚಯವಾಗುವುದು. ಸಂತ-ಮಹಾತ್ಮರು, ಜ್ಯೋತಿಷಿಗಳು ಮುಂತಾದವರು ಹೇಳಿದಂತೆ ಮುಂಬರುವ ಕಾಲವು ಭೀಕರ ಆಪತ್ಕಾಲ ವಾಗಿದ್ದು ಈ ಕಾಲದಲ್ಲಿ ಸಮಾಜವು ಅನೇಕ ಆಪತ್ತುಗಳನ್ನು ಎದುರಿಸಬೇಕಾಗಬಹುದು. ಇಂತಹ ಆಪತ್ಕಾಲದಲ್ಲಿ ತನ್ನೊಂದಿಗೆ ಕುಟುಂಬದವರ ಆರೋಗ್ಯವನ್ನು ರಕ್ಷಿಸುವುದು ದೊಡ್ಡ ಸವಾಲಾಗಿರುತ್ತದೆ. ಆಪತ್ಕಾಲದಲ್ಲಿ ಸಾರಿಗೆಯ ಸಾಧನಗಳು ಇಲ್ಲದಿರುವುದರಿಂದ ರೋಗಿಗಳನ್ನು ಆಸ್ಪತ್ರೆಗೆ ಕೊಂಡೊಯ್ಯುವುದು, ಡಾಕ್ಟರ್ ಅಥವಾ ವೈದ್ಯರನ್ನು ಸಂಪರ್ಕಿಸುವುದು ಮತ್ತು ಮಾರುಕಟ್ಟೆಯಲ್ಲಿ ಔಷಧಿಗಳು ದೊರೆಯುವುದು ಕಠಿಣವಾಗುವುದು.

ಅಗ್ನಿಹೋತ್ರವೆಂದರೆ ಅಗ್ನ ಯಂತರ್ಯಾಮಿ (ಅಗ್ನಿಯಲ್ಲಿ) ಆಹುತಿಯನ್ನು ಅರ್ಪಿಸಿ ಮಾಡಲಾಗುವ ಈಶ್ವರನ ಉಪಾಸನೆ. ಇದರಿಂದ ನಿರ್ಮಾಣವಾಗುವ ಅಗ್ನಿಯು ರಜ-ತಮ ಕಣಗಳನ್ನು ವಿಘಟನೆ ಮಾಡುತ್ತದೆ ಮತ್ತು ವಾಯುಮಂಡಲದಲ್ಲಿ ದೀರ್ಘ ಕಾಲ ಉಳಿದುಕೊಳ್ಳುತ್ತದೆ, ಆದುದರಿಂದ ಅಗ್ನಿಹೋತ್ರವನ್ನು ಸತತವಾಗಿ ಮಾಡಿದರೆ ಅದು ಮಾನವನ ಸುತ್ತಲೂ 10 ಅಡಿ ದೂರದಲ್ಲಿ ರಕ್ಷಾ ಕವಚವನ್ನು ನಿರ್ಮಾಣ ಮಾಡುತ್ತದೆ. ಈ ಕವಚವು ಬಾಂಬ್‌ನಲ್ಲಿನ ಆಘಾತ ಮಾಡುವ ವಿಘಾತಕ ಸ್ವರೂಪದಲ್ಲಿ ಹೊರಸೂಸುವ ಶಕ್ತಿಯ ವಲಯಗಳು ಮೊದಲೇ ನಾಶವಾಗುವುದರಿಂದ ವಿಕಿರಣಗಳನ್ನು ಹೊರಸೂಸುವ ದೃಷ್ಟಿಯಿಂದ ಬಾಂಬ್ ನಿಷ್ಕ್ರೀಯವಾಗುತ್ತದೆ. ಆದು ದರಿಂದ ಅದನ್ನು ಹಾಕಿದರೂ ಮುಂದೆ ಆಗುವ ಮನುಷ್ಯಹಾನಿಯು ಕೆಲವು ಪ್ರಮಾಣದಲ್ಲಿಯಾದರೂ ತಡೆಗಟ್ಟಲ್ಪಡುತ್ತದೆ.

ನಿಯಮಿತವಾಗಿ ಅಗ್ನಿಹೋತ್ರವನ್ನು ಮಾಡುವ ವಿವಿಧ ಸ್ತರದಲ್ಲಿನ ಸ್ತ್ರೀ-ಪುರುಷರಲ್ಲಿ ಮತ್ತು ಬಾಲ-ವೃದ್ಧರಲ್ಲಿ ಒಂದುರೀತಿಯ ಹೆಚ್ಚಿನ ಸಮಾಧಾನ, ಜೀವನದ ಕಡೆಗೆ ನೋಡುವ ಸಕಾರಾತ್ಮಕ ದೃಷ್ಟಿಕೋನ, ಮನಃಶಾಂತಿ, ಆತ್ಮವಿಶ್ವಾಸ, ಕಾರ್ಯದ ಕಡೆಗೆ ಹೆಚ್ಚು ಒಲವು ಇಂತಹ ಗುಣಗಳು ನಿರ್ಮಾಣವಾಗಿ ಹೆಚ್ಚಳವಾಗುತ್ತಿರುವುದು ಅನುಭವಕ್ಕೆ ಬಂದಿರುತ್ತದೆ. ಸಾರಾಯಿ, ಇತರ ಹಾನಿಕರ ಮಾದಕದ್ರವ್ಯಗಳ ವ್ಯಸನಾಧೀನ ವ್ಯಕ್ತಿಗಳು ಅಗ್ನಿಹೋತ್ರದ ವಾತಾವರಣದಲ್ಲಿ ಆ ವ್ಯಸನಗಳಿಂದ ಮುಕ್ತರಾಗಬಲ್ಲರು; ಏಕೆಂದರೆ ಅವರಲ್ಲಿ ಪ್ರಬಲ ಇಚ್ಛಾಶಕ್ತಿ ನಿರ್ಮಾಣವಾಗುತ್ತದೆ, ಎಂಬುದು ಗಮನಕ್ಕೆ ಬಂದಿದೆ.

ಅಗ್ನಿಹೋತ್ರದ ಜ್ವಾಲೆಯಿಂದ ಹೊರ ಬರುವ ಹೊಗೆಯು ಮೆದುಳು ಮತ್ತು ನರವ್ಯೂಹದ ಮೇಲೆ ಪ್ರಭಾವೀ ಪರಿಣಾಮವನ್ನು ಬೀರುತ್ತದೆ. ಅಗ್ನಿಹೋತ್ರದ ಔಷಧಿಯುಕ್ತ ವಾತಾವರಣದಿಂದಾಗಿ ರೋಗಕಾರಿ ಜಂತುಗಳ ಬೆಳವಣಿಗೆಯ ಮೇಲೆ ಪ್ರತಿಬಂಧ ಬರುತ್ತದೆ ಎಂದು ಕೆಲವು ಸಂಶೋಧಕರಿಗೆ ತಿಳಿದುಬಂದಿದೆ.

**ಅಗ್ನಿಹೋತ್ರದಿಂದ ಹೆಚ್ಚು ಸತ್ವಯುತ, ಸ್ವಾದಿಷ್ಟ ಆಹಾರಧಾನ್ಯಗಳು ಬೆಳೆಯುತ್ತವೆ**

**ಅಗ್ನಿಹೋತ್ರದಿಂದ ವನಸ್ಪತಿಗಳಿಗೆ ವಾತಾವರಣದಿಂದ ಪೋಷಕದ್ರವ್ಯಗಳು ಸಿಗುತ್ತವೆ ಮತ್ತು ಅವು ಒಳ್ಳೆಯ ರೀತಿಯಲ್ಲಿ ಬೆಳೆಯುತ್ತವೆ. ಅಗ್ನಿಹೋತ್ರದ ಭಸ್ಮದಿಂದ ಗದ್ದೆ ಮತ್ತು ವನಸ್ಪತಿಗಳ ಬೆಳವಣಿಗೆಯ ಮೇಲೆ ಉತ್ತಮ ಪರಿಣಾಮವಾಗುತ್ತದೆ. ಇದರ ಪರಿಣಾಮದಿಂದ ಹೆಚ್ಚು ಸತ್ವಯುತ ಮತ್ತು ಸ್ವಾದಿಷ್ಟ ದವಸಧಾನ್ಯ, ಹಣ್ಣು, ಹೂವು ಮತ್ತು ಕಾಯಿಪಲ್ಲೆಗಳು ಬೆಳೆಯುತ್ತವೆ. ಅಗ್ನಿಹೋತ್ರದ ವಾತಾವರಣದಿಂದ ಮಕ್ಕಳ ಮೇಲೆ ಒಳ್ಳೆಯ ಪರಿಣಾಮಗಳು ಆಗುತ್ತವೆ. ಮಕ್ಕಳ ಮೇಲೆ ಒಳ್ಳೆಯ ಪರಿಣಾಮಗಳಾಗಿ ಅವರ ಮೇಲೆ ಒಳ್ಳೆಯ ಸಂಸ್ಕಾರಗಳಾಗುತ್ತವೆ. ಸಿಡಿಮಿಡಿಗೊಳ್ಳುವ ಮತ್ತು ಹಠ ಮಾಡುವ ಮಕ್ಕಳು ಶಾಂತ ಮತ್ತು ಬುದ್ಧಿವಂತರಾಗುತ್ತಾರೆ. ಅಧ್ಯಯನದಲ್ಲಿ ಮಕ್ಕಳಿಗೆ ಏಕಾಗ್ರತೆ ಬರುತ್ತದೆ. ಮಂದಬುದ್ಧಿಯ ಮಕ್ಕಳು ಅವರ ಮೇಲೆ ಮಾಡಲಾಗುವ ಚಿಕಿತ್ಸೆಗೆ ಒಳ್ಳೆಯ ರೀತಿಯಲ್ಲಿ ಸ್ಪಂದಿಸುತ್ತಾರೆ. ಅಗ್ನಿಹೋತ್ರದಿಂದ ಪ್ರಬಲ ಇಚ್ಛಾಶಕ್ತಿ ನಿರ್ಮಾಣವಾಗಿ ಮನೋ ರೋಗಗಳು ಗುಣವಾಗುವವು ಮತ್ತು ಮಾನಸಿಕ ಬಲ ಪ್ರಾಪ್ತವಾಗುವುದು.**

# ಕೂದಲಿಗೆ ಪ್ರತೀದಿನ ಶ್ಯಾಂಪೂ ಹಾಕಿ ಸ್ನಾನ ಮಾಡಿದ್ರೆ ಒಳ್ಳೇದಾ?

ಶ್ಯಾಂಪೂ ಕೂದಲಿಗೆ ಬಳಸುವ ರೀತಿಯು ಕೂದಲಿನ ಪ್ರಕಾರ ಮತ್ತು ಜೀವನಶೈಲಿಯಂತಹ ವೈಯಕ್ತಿಕ ಅಂಶಗಳನ್ನು ಅವಲಂಬಿಸಿರುತ್ತವೆ. ದಿನನಿತ್ಯ ಕೂದಲಿಗೆ ಸ್ನಾನ ಮಾಡುವುದರಿಂದ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡಬಹುದು. ಆದರೆ ಇದರಿಂದ ಅನುಕೂಲ ಅನಾನುಕೂಲಗಳೆರಡೂ ಇವೆ. ವಾರಕ್ಕೊಮ್ಮೆ ತೊಳೆಯುವುದರಿಂದ ಇದು ತೇವಾಂಶವನ್ನು ಉಳಿಸಿಕೊಳ್ಳುತ್ತದೆ ಆದರೆ ಕೊಳೆಯು ಸಂಗ್ರಹವಾಗಬಹುದು. ಆದ್ದರಿಂದ, ಸರಿಯಾದ ಸಮತೋಲನವನ್ನು ಕಾಯ್ದುಕೊಳ್ಳುವುದು, ಆಯಾ ಕೂದಲಿಗೆ ಸೂಕ್ತವಾದ ಶ್ಯಾಂಪೂವನ್ನು ಆಯ್ಕೆ ಮಾಡುವುದು ಆರೋಗ್ಯಕರ ಕೂದಲನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಕೂದಲಿನ ಪೋಷಣೆಯ ವಿಷಯಕ್ಕೆ ಬಂದಲ್ಲಿ ಶ್ಯಾಂಪೂವನ್ನು ಹೇಗೆ ಬಳಸುವುದು ಅಥವಾ ದಿನಾ ಬಳಸಬಹುದೇ ಅಥವಾ ವಾರದಲ್ಲಿ ಎಷ್ಟು ಬಾರಿ ಬಳಸಿದರೆ ಉತ್ತಮ ಇತ್ಯಾದಿ ಪ್ರಶ್ನೆಗಳು ನಮ್ಮನ್ನು ಕಾಡುವುದು ಸಹಜ. ಕೆಲವರು ಪ್ರತಿದಿನ ತಲೆಗೆ ಸ್ನಾನ ಮಾಡುವ ಅಭ್ಯಾಸವನ್ನು ಹೊಂದಿದ್ದರೆ, ಇನ್ನು ಕೆಲವರು ವಾರಕ್ಕೊಮ್ಮೆ ಶ್ಯಾಂಪೂ ಬಳಸಿ ತಲೆಗೆ ಸ್ನಾನ ಮಾಡುವ ಅಭ್ಯಾಸ ಹೊಂದಿರುತ್ತಾರೆಈ ಅಭ್ಯಾಸಗಳು ನೆತ್ತಿಯ ಆರೋಗ್ಯಕ್ಕೆ ಹೇಗೆ ಪರಿಣಾಮಕಾರಿಯಾಗಬಲ್ಲದು?. ನಿಮ್ಮ ಕೂದಲಿಗೆ ಶ್ಯಾಂಪೂ ಬಳಸುವುದು ವಾರಕ್ಕೊಮ್ಮೆ ಉತ್ತಮವೆ ಅಥವಾ ಪ್ರತಿದಿನ ಒಳ್ಳೆಯದೆ ಎನ್ನುವ ಬಗ್ಗೆ ಮತ್ತಷ್ಟು ಇಲ್ಲಿ ತಿಳಿಯೋಣ.

**ದೈನಂದಿನ ಶಾಂಪೂ ಬಳಕೆ ಬಗ್ಗೆ ಮಾಹಿತಿ:** ಅನೇಕರು ವಿಶೇಷವಾಗಿ ಸಕ್ರೀಯ ಜೀವನ ಶೈಲಿಯನ್ನು ಹೊಂದಿರುವವರು ಅಥವಾ ಆರ್ದ್ರ ವಾತಾವರಣದಲ್ಲಿ ವಾಸಿಸುವವರು ತಮ್ಮ ಕೂದಲನ್ನು ಪ್ರತೀದಿನ ತೊಳೆಯುವ ಅಗತ್ಯವನ್ನು ಹೊಂದುತ್ತಾರೆ. ದೈನಂದಿನ ಶ್ಯಾಂಪೂ ಮಾಡುವುದರಿಂದ ಬೆವರು, ಕೊಳಕು ಮತ್ತು ಹೆಚ್ಚುವರಿ ಜಿಡ್ಡಿನಾಂಶವನ್ನು ಇದು ತೆಗೆದು ಹಾಕಲು ಸಹಾಯ ಮಾಡುವುದರ ಜೊತೆಗೆ ಕೂದಲನ್ನು ತಾಜಾವಾಗಿ ಮತ್ತು ಅಹಿತಕರ ವಾಸನೆಯಿಂದ ಮುಕ್ತವಾಗಿರಿಸುತ್ತದೆ.

**ಹೆಚ್ಚುವರಿ ಎಣ್ಣೆ, ಕೊಳೆಯನ್ನು ತೆಗೆದು ಹಾಕುತ್ತದೆ:** ನಮ್ಮ ನೆತ್ತಿಯು ಕೂದಲನ್ನು ತೇವಾಂಶದಿಂದ ಇಡುವ ನೈಸರ್ಗಿಕ ಎಣ್ಣೆಯಾದ ಸೆಬಮ್ ಅನ್ನು ಉತ್ಪಾದಿಸುತ್ತದೆ. ಹೆಚ್ಚುವರಿ ಸೆಬಮ್ ಜಿಡ್ಡಿನ ಅಂಶವನ್ನು ಕಡಿಮೆ ಮಾಡುತ್ತದೆ. ಪ್ರತಿದಿನ ತೊಳೆಯುವುದು, ವಿಶೇಷವಾಗಿ ನೈಸರ್ಗಿಕವಾಗಿ ಎಣ್ಣೆಯುಕ್ತ ಕೂದಲನ್ನು ಹೊಂದಿರುವವರಿಗೆ, ಎಣ್ಣೆಯ ಸಂಗ್ರಹವನ್ನು ನಿಯಂತ್ರಿಸುತ್ತದೆ.

**ನೆತ್ತಿಯ ಸಮಸ್ಯೆಗಳನ್ನು ತಡೆಯುತ್ತದೆ:** ಆಗಾಗ್ಗೆ ತಲೆಯನ್ನು ತೊಳೆಯುವುದರಿಂದ ಇದು ನೆತ್ತಿಯನ್ನು ಸ್ವಚ್ಛ ಮತ್ತು ನೆತ್ತಿಯಲ್ಲುಂಟಾಗುವ ತಲೆಹೊಟ್ಟು, ತುರಿಕೆ ಮತ್ತು ಹೆಚ್ಚು ಬೆವರಿನಿಂದಾಗಿ ಸಂಗ್ರಹವಾಗುವ ಫಂಗಲ್ ನಂತಹ ಸೋಂಕುಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ಕೂದಲಿಗೆ ವಾರಕ್ಕೊಮ್ಮೆ ಶ್ಯಾಂಪೂ ಬಳಸುವುದರ ಬಗ್ಗೆ ಮಾಹಿತಿ:** ಕೆಲವರು ಪ್ರತೀದಿನ ತಲೆಗೆ ಸ್ನಾನ ಮಾಡಿದರೆ ಇನ್ನು ಕೆಲವರು ಗುಂಗುರು ಕೂದಲು , ಅಥವಾ ವಿಶೇಷ ರಚನೆಯ ಕೂದಲನ್ನು ಹೊಂದಿರುವವರು, ವಾರಕ್ಕೊಮ್ಮೆ ಮಾತ್ರ ಶಾಂಪೂ ಮಾಡಲು ಬಯಸುತ್ತಾರೆ. ಈ ವಿಧಾನವು ನೆತ್ತಿಯ ನೈಸರ್ಗಿಕ ಎಣ್ಣೆಗಳು ಕೂದಲನ್ನು ಪೋಷಿಸಲು ಮತ್ತು ರಕ್ಷಿಸಲು ಅನುವು ಮಾಡಿಕೊಡುತ್ತದೆ.



# ಪರೀಕ್ಷೆಯನ್ನು ಶಾಂತ ಚಿತ್ತದಿಂದ ಎದುರಿಸುವುದು ಹೇಗೆ?

ವಿದ್ಯಾರ್ಥಿಗಳಿಗೆ ಈಗ ವಾರ್ಷಿಕ ಪರೀಕ್ಷೆ ಸಮಯ. ಇತ್ತೀಚಿನ ದಿನಗಳಲ್ಲಿ ಒತ್ತಡದೊಂದಿಗೆ ಮಕ್ಕಳು ಪರೀಕ್ಷೆ ಎದುರಿಸಬೇಕಾಗಿದೆ. ಹಲವು ಸವಾಲುಗಳ ಮಧ್ಯೆ ಪರೀಕ್ಷಾ ಸಿದ್ಧತೆಯನ್ನು ಹೇಗೆ ನಿಭಾಯಿಸಬೇಕೆಂದು ಮಕ್ಕಳು ಸರಿಯಾಗಿ ಯೋಜನೆ ರೂಪಿಸಬೇಕು. ಪರೀಕ್ಷೆಗಳಿಗೆ ಪರಿಣಾಮಕಾರಿ ಸಿದ್ಧತೆಯ ಕೀಲಿಯು ಬೇಗನೆ ಪ್ರಾರಂಭಿಸುವುದು ಮತ್ತು ಕಾರ್ಯಕ್ಷಮತೆಯನ್ನು ಉತ್ತಮಗೊಳಿಸುವಾಗ ಒತ್ತಡವನ್ನು ಕಡಿಮೆ ಮಾಡಲು ಪ್ರಾಯೋಗಿಕ, ನಿರ್ವಹಿಸಬಹುದಾದ ತಂತ್ರಗಳನ್ನು ಅಳವಡಿಸಿಕೊಳ್ಳುವುದು ಮುಖ್ಯವಾಗಿರುತ್ತದೆ.

**ಜೀವನಶೈಲಿ ಅಂಶಗಳು:** ಅನೇಕ ವಿದ್ಯಾರ್ಥಿಗಳು ತಮ್ಮ ಅರಿವಿನ ಕಾರ್ಯ ಮತ್ತು ಒಟ್ಟಾರೆ ಯೋಗಕ್ಷೇಮದ ಮೇಲೆ ಜೀವನಶೈಲಿ ಅಂಶಗಳ ಪ್ರಭಾವವನ್ನು ಅಂದಾಜು ಮಾಡಲು ಸಾಧ್ಯವಾಗುವುದಿಲ್ಲ. ಪರೀಕ್ಷೆಗಳಲ್ಲಿ ಚೆನ್ನಾಗಿ ಅಂಕ ಗಳಿಸಲು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುವ ಮೂಲಭೂತ ದಿನಚರಿಯನ್ನು ರೂಢಿಸಿಕೊಳ್ಳುವುದು ಮುಖ್ಯವಾಗುತ್ತದೆ.

**ವ್ಯಾಯಾಮ ಮತ್ತು ಚಲನೆ:** ವಿದ್ಯಾರ್ಥಿಗಳಲ್ಲಿ ಓದಿನ ಮೇಲೆ ಏಕಾಗ್ರತೆಯನ್ನು ಹೆಚ್ಚಿಸಲು ಮತ್ತು ಒತ್ತಡವನ್ನು ನಿವಾರಿಸಲು ಪ್ರತಿದಿನ ಕನಿಷ್ಠ 30 ನಿಮಿಷಗಳ ದೈಹಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಿ

**ಹೈಡ್ರೇಶನ್ ಮತ್ತು ಪೋಷಣೆ:** ಹೈಡ್ರೇಟೆಡ್ ಆಗಿರುವಾಗ ಪ್ರೋಟೀನ್‌ಗಳು, ಆರೋಗ್ಯಕರ ಕೊಬ್ಬುಗಳು ಮತ್ತು ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳಲ್ಲಿ ಸಮೃದ್ಧವಾಗಿರುವ ಸಮತೋಲಿತ ಊಟವನ್ನು ಸೇವಿಸಿ.

**ಔಷಧಿ, ವಿಟಮಿನ್‌ಗಳು:** ವೈದ್ಯರು ಸೂಚಿಸುವ ಔಷಧಿಗಳನ್ನು ನಿರಂತರವಾಗಿ ತೆಗೆದು ಕೊಳ್ಳಿ, ಆರೋಗ್ಯ ಕಾಳಜಿಗಳನ್ನು ನೋಡಿಕೊಳ್ಳಿ.




**ನಿದ್ರೆ:** ಪ್ರತಿ ರಾತ್ರಿ 7ರಿಂದ 9 ಗಂಟೆಗಳ ನಿದ್ರೆಯ ಗುರಿಯನ್ನು ಹೊಂದಿರಿ, ಸ್ಥಿರವಾದ ಮಲಗುವ ಸಮಯ ಮತ್ತು ದಿನಚರಿಯನ್ನು ಕಾಪಾಡಿಕೊಳ್ಳಿ. ಅಧ್ಯಯನ ವೇಳಾಪಟ್ಟಿಯನ್ನು ಯೋಜಿಸುವುದು ಪರಿಣಾಮಕಾರಿ ಪರೀಕ್ಷಾ ತಯಾರಿಗೆ ಉತ್ತಮವಾಗಿ ರಚನಾತ್ಮಕ ಅಧ್ಯಯನ ಯೋಜನೆ ನಿರ್ಣಾಯಕವಾಗಿದೆ.

**ವಿಶುವಲ್ ಕ್ಯಾಲೆಂಡರ್ ರಚಿಸಿ:** ಸರಿಯಾಗಿ ಕಾಣುವ ಸ್ಥಳದಲ್ಲಿ ಇರಿಸಲಾದ ದೊಡ್ಡ ಕ್ಯಾಲೆಂಡರ್‌ನಲ್ಲಿ ನಿಮ್ಮ ಪರೀಕ್ಷೆಯ ದಿನಾಂಕಗಳು ಮತ್ತು ನಿಯೋಜನೆಯ ಗಡುವನ್ನು ವಿವರಿಸಿ.

**ವಾಸ್ತವಿಕ ಗುರಿಗಳನ್ನು ಹೊಂದಿಸಿ:** ಆಯಾ ವಿಷಯದ ಕಷ್ಟದ ಮಟ್ಟ ಮತ್ತು ಪಠ್ಯಕ್ರಮದ ತೂಕವನ್ನು ಆಧರಿಸಿ ಪ್ರತಿ ವಿಷಯದ ಅಧ್ಯಯನಕ್ಕೆ ನಿರ್ದಿಷ್ಟ ಗಂಟೆಗಳನ್ನು ನಿಗದಿಪಡಿಸಿ.


**ಅಧ್ಯಯನದ ಸಮಯ ವಿಂಗಡಿಸಿ:** ಅತಿಯಾಗಿ ಹೊರೆಯಾಗುವುದನ್ನು ತಪ್ಪಿಸಲು ನಿಮ್ಮ ಅಧ್ಯಯನ ಅವಧಿಗಳನ್ನು ಸಣ್ಣ ವಿಷಯಗಳು ಅಥವಾ ಅಧ್ಯಾಯಗಳಾಗಿ ವಿಂಗಡಿಸಿ.

**ಮೊದಲು ಕಷ್ಟಕರವಾದ ವಿಷಯಗಳಿಗೆ ಆದ್ಯತೆ ನೀಡಿ:** ನಿಮ್ಮ ಮನಸ್ಸು ಆಹ್ಲಾದಕರವಾಗಿರುವಾಗ, ಶಾಂತವಾಗಿರುವಾಗ, ಚೆನ್ನಾಗಿ ನಿದ್ದೆ ಮಾಡಿ ಎದ್ದಾಗ ಅತ್ಯಂತ ಸವಾಲಿನ ವಿಷಯಗಳನ್ನು ಕಲಿಯಿರಿ.

**ಪೋಷಕರು ಮತ್ತು ಶಿಕ್ಷಕರಿಂದ ಬೆಂಬಲ**

**ವಿದ್ಯಾರ್ಥಿಗಳು ಪರೀಕ್ಷೆಯ ಒತ್ತಡವನ್ನು ನಿಭಾಯಿಸಲು ಸಹಾಯ ಮಾಡುವಲ್ಲಿ ಪೋಷಕರು, ಶಿಕ್ಷಕರು ನಿರ್ಣಾಯಕ ಪಾತ್ರ ವಹಿಸುತ್ತಾರೆ. ನೀವು ಎಂದಾದರೂ ಅತಿಯಾದ ಭಾವನೆ ಹೊಂದಿದ್ದರೆ, ನೀವು ಒಬ್ಬಂಟಿಯಾಗಿಲ್ಲ ಎಂದು ನೆನಪಿಡಿ – ಕಾಳಜಿ ವಹಿಸುವ, ನಿಮ್ಮನ್ನು ಬೆಂಬಲಿಸಲು ಬಯಸುವ ಜನರಿದ್ದಾರೆ. ಸಹಾಯಕ್ಕಾಗಿ ಅವರ ಬಳಿ ಹೇಳಲು ಮರೆಯಬೇಡಿ.**

**ಪೊಮೊಡೊರೊ ವಿಧಾನವನ್ನು ಬಳಸಿ:** ಈ ವೈಜ್ಞಾನಿಕವಾಗಿ ಸಾಬೀತಾಗಿರುವ ತಂತ್ರವು 25 ನಿಮಿಷಗಳ ಕಾಲ ಸರಿಯಾಗಿ ಅಧ್ಯಯನ ಮಾಡುವುದನ್ನು ಒಳಗೊಂಡಿರುತ್ತದೆ, ನಂತರ 5 ನಿಮಿಷಗಳ ವಿರಾಮವನ್ನು ಒಳಗೊಂಡಿರುತ್ತದೆ. ನಾಲ್ಕು ಸಲದ ನಂತರ 15 ರಿಂದ 30 ನಿಮಿಷಗಳ ದೀರ್ಘ ವಿರಾಮವನ್ನು ತೆಗೆದುಕೊಳ್ಳಿ.



**ಪೋಷಕರಿಗೆ ಕಿವಿಮಾತು:** ಮಕ್ಕಳಿಗೆ ಸಕಾರಾತ್ಮಕ ಮತ್ತು ಬೆಂಬಲ ನೀಡುವ ವಾತಾವರಣ ಇರಲಿ. ಮಕ್ಕಳ ನಿರೀಕ್ಷೆಗಳನ್ನು ಹೊಂದಿಸಲು ಸಹಾಯ ಮಾಡಿ ಮತ್ತು ಅನಗತ್ಯ ಒತ್ತಡವನ್ನು ಹಾಕಬೇಡಿ. ನಿಮ್ಮ ಮಗು ವಿರಾಮಗಳು, ಮನರಂಜನಾ ಚಟುವಟಿಕೆಗಳನ್ನು ಒಳಗೊಂಡಂತೆ ಸಮತೋಲಿತ ದಿನಚರಿಯನ್ನು ನಿರ್ವಹಿಸುತ್ತಿದೆಯೆ ಎಂದು ಖಚಿತಪಡಿಸಿಕೊಳ್ಳಿ. ಅಗತ್ಯವಿದ್ದಾಗ ಕಾಳಜಿಗಳನ್ನು ಚರ್ಚಿಸಲು ಮತ್ತು ಭಾವನಾತ್ಮಕ ಬೆಂಬಲವನ್ನು ನೀಡಲು ಅವಕಾಶ ನೀಡಿ. ವಿದ್ಯಾರ್ಥಿಗಳ ಒತ್ತಡದ ಚಿಹ್ನೆಗಳನ್ನು ಗುರುತಿಸಿ ಮತ್ತು ಪ್ರೋತ್ಸಾಹವನ್ನು ನೀಡಿ.

ಮಹಿಳೆಯರನ್ನು ಸ್ವಾವಲಂಬಿ ಮತ್ತು ಸ್ವಾಭಿಮಾನಿಗಳಾಗಿ ಮಾಡುವುದೇ ನಮ್ಮ ಸರ್ಕಾರದ ಮುಖ್ಯ ಗುರಿ

# ಹೆಣ್ಣನ್ನು ದೇವರು ಎಂದು ಪೂಜಿಸುವ ದೇಶ ನಮ್ಮದು: ಖಂಡ್ರೆ

• **ಉದಯವಾಹಿನಿ, ಬೀದರ**

ಮಹಿಳೆಯರನ್ನು ಸ್ವಾವಲಂಬಿ ಮತ್ತು ಸ್ವಾಭಿಮಾನಿಗಳಾಗಿ ಮಾಡುವುದೇ ನಮ್ಮ ಸರ್ಕಾರದ ಮುಖ್ಯ ಗುರಿಯಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು. ಅವರು ಶನಿವಾರದಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೀದರ ಅವರ ಸಂಯುಕ್ತಾಶ್ರಯದಲ್ಲಿ ನಗರದ ಪ್ರತಾಪ ನಗರದ ರಾಜ್ಯ ಸರಕಾರಿ ನೌಕರರ ಭವನದಲ್ಲಿ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆಯನ್ನು ಗುರುತಿಸಿ ಅವರಿಗೆ ಗೌರವ ಸಲ್ಲಿಸಲು ಪ್ರತಿ ವರ್ಷ ಮಾರ್ಚ್.8 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರಪಂಚದಾದ್ಯಂತ ಆಚರಿಸಲಾಗುತ್ತದೆ. ಮಹಿಳೆಯರ ಹಕ್ಕುಗಳು, ಸಮಾನತೆ ಮತ್ತು ಸಾಧನೆಗಳನ್ನು ತಿಳಿಸಲು 1975 ರಲ್ಲಿ ವಿಶ್ವಸಂಸ್ಥೆಯು ಮಾರ್ಚ್.8 ನ್ನು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಎಂದು ಘೋಷಿಸಿತು. ಹೆಣ್ಣನ್ನು ದೇವರು ಎಂದು ಪೂಜಿಸುವ ದೇಶ ನಮ್ಮದು. ನಮ್ಮ ದೇಶ ಕೂಡ ತಾಯಿ ರೂಪದಲ್ಲಿ ಕಾಣುತ್ತೇವೆ, ಅದಕ್ಕೆ ಭಾರತಮಾತೆ ಎಂದು ಕರೆಯುತ್ತೇವೆ. ನಮ್ಮ ದೇಶದಲ್ಲಿ ಹರಿಯುವ ನದಿಗಳಿಗೂ ಕೂಡ ಹೆಣ್ಣಿನ ಹೆಸರಿನಿಂದ ಕರೆಯುತ್ತೇವೆ. ಹೆಣ್ಣಿಗೆ ಉನ್ನತ ಸ್ಥಾನಮಾನ ನೀಡುವ ದೇಶ ನಮ್ಮದಾಗಿದೆ.

ನಾನು ಕೂಡ ಶಾಸಕನಾಗಿ, ಸಚಿವನಾಗಿ ಮತ್ತು ರಾಜಕೀಯವಾಗಿ ಬೆಳೆಯಲು ನನ್ನ ತಾಯಿಯ ಕೊಡುಗೆ ದೊಡ್ಡದಾಗಿದೆ ಎಂದರು. ಸಮಾನತೆಯ ಜೊತೆಗೆ ಒಗ್ಗಟ್ಟಿನಲ್ಲಿ ಸಹ ಮಹಿಳೆಯರು ಸದಾ ಮುಂದಿರುವುದು ದೇಶದ ಆರ್ಥಿಕ ಅಭಿವೃದ್ಧಿಗೆ ಸಾಕಷ್ಟು ಅನುಕೂಲವಾಗಲಿದೆ. ಪ್ರತಿ ವರ್ಷ ಮಾರ್ಚ್ 8ರಂದು ಅಂತರರಾಷ್ಟ್ರೀಯ ಮಹಿಳೆಯರ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ. ಮಹಿಳೆಯರ ಸಾಧನೆಗೆ ಮನಃ ಪೂರ್ವಕ ಗೌರವ ಸೂಚಿಸುವ ದಿನ ಇದಾಗಿದೆ. ಕೇಂದ್ರ ಸರ್ಕಾರದಿಂದ ದೊರೆಯುವ ಸುಕನ್ಯಾ ಸಮೃದ್ಧಿ ಯೋಜನೆ, ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆ, ಪ್ರಧಾನ ಮಂತ್ರಿ ಮಾತೃ ವಂದನ ಸೇರಿದಂತೆ ವಿವಿಧ ಯೋಜನೆಗಳನ್ನು ಜಾರಿಗೆ ತಂದು ದೇಶದ ಯುವತಿಯರಿಗೆ, ಮಹಿಳೆಯರಿಗೆ ಪ್ರೋತ್ಸಾಹಿಸಲಾಗುತ್ತಿದೆ ಎಲ್ಲರೂ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಮಾತನಾಡಿ, ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬನೆಯಾಗಿರಬೇಕು, ಪ್ರತಿ ಹಂತದಲ್ಲೂ ಮಹಿಳೆ ಪುರುಷನಷ್ಟೆ ಸಮಾನಳಾಗಿದ್ದಾಳೆ. ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ಸಾಧನೆ ಮಾಡಿದ್ದಾರೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ 2024-25 ನೇ ಸಾಲಿನ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಅಸಾಧಾರಣ ಪ್ರತಿಭೆಯುಳ್ಳ ಮಕ್ಕಳಿಗೆ ಜಿಲ್ಲಾ ಮಟ್ಟದ ಪ್ರಶಸ್ತಿಯನ್ನು ನೀಡಲಾಯಿತು. ಅದೇ ರೀತಿ ಉತ್ತಮ ಅಂಗನವಾಡಿ ಕಾರ್ಯಕರ್ತೆ ಪ್ರಶಸ್ತಿ ಮತ್ತು ಹೊಸದಾಗಿ ಆಯ್ಕೆಯಾದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಹುದ್ದೆಗೆ ನೇಮಕವಾಗಿರುವರಿಗೆ ನೇಮಕಾತಿ ಆಯ್ಕೆ ಪತ್ರವನ್ನು ನೀಡಲಾಯಿತು.


ಉದಯವಾಹಿನಿ ಚಿತ್ರ

**ನಮ್ಮ ಸರ್ಕಾರ ಈ ವರ್ಷ ಪಂಚ ಗ್ಯಾರಂಟಿಗಾಗಿ 51000 ಕೋಟಿ ರೂ. ನೀಡಲಾಗಿದೆ. ಮಹಿಳೆಯರನ್ನು ಆರ್ಥಿಕ ಸಬಲೀಕರಣವನ್ನು ಹೆಚ್ಚಿಸಲು ಕುಟುಂಬದ ಯಜಮಾನಿ ಮಹಿಳೆಗೆ ಪ್ರತಿ ತಿಂಗಳು 2000 ರೂ. ಗಳನ್ನು ನೀಡುವ ಗೃಹಲಕ್ಷ್ಮೀ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಮಹಿಳೆಯರನ್ನು ಉಚಿತವಾಗಿ ಸಂಚಾರಿಸಲು ಶಕ್ತಿ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಮಹಿಳೆಯರನ್ನು ಸ್ವಾವಲಂಬಿ ಮತ್ತು ಸ್ವಾಭಿಮಾನಿಗಳಾಗಿ ಜೀವನ ನಡೆಸಲು ನಮ್ಮ ಸರ್ಕಾರ ಯೋಜನೆಗಳು ಮತ್ತು ಕಾರ್ಯಕ್ರಮಗಳು ಹಮ್ಮಿಕೊಂಡಿದೆ. ನಿನ್ನೆ ಮಂಡಿಸಿದ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಗೌರವಧನವನ್ನು 1000 ರೂ. ಹಾಗೂ ಸಹಾಯಕಿಯರ ಗೌರವಧನವನ್ನು 750 ರೂ. ಹೆಚ್ಚಿಸಲಾಗಿದೆ** -ಈಶ್ವರ ಖಂಡ್ರೆ, ಸಚಿವ

**ಜಗತ್ತಿನಲ್ಲಿ ಬಹುತೇಕ ವಿಚಾರಗಳಿಗೆ ಒಂದೊಂದು ದಿನ ಮೀಸಲಿಟ್ಟಿರುವಂತೆ ಮಹಿಳೆಯರಿಗೂ ಕೂಡ ಒಂದು ವಿಶೇಷ ದಿನವನ್ನು ನಿಗದಿಪಡಿಸಲಾಗಿದೆ. ಅದೇ ವಿಶ್ವದಾದ್ಯಂತ ಆಚರಣೆ ಮಾಡುವ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ. ಒಬ್ಬ ವ್ಯಕ್ತಿಯ ಜೀವನದಲ್ಲಿ ಮಹಿಳೆಯ ಪಾತ್ರ ತುಂಬಾ ದೊಡ್ಡದಿರುತ್ತದೆ. ಆಕೆ ತಾಯಿಯಾಗಿ, ಸೋದರಿಯಾಗಿ, ಪತ್ನಿಯಾಗಿ ಬಾಳಿಗೆ ಬೆಳಕಾಗುತ್ತಾಳೆ. ವೈಯಕ್ತಿಕವಾಗಿ ಮನೆಯ ಅರ್ಧ ಜವಾಬ್ದಾರಿಯನ್ನು ಹೊರುವ ಜೊತೆಗೆ ಒಬ್ಬ ಶಿಕ್ಷಕಿಯಾಗಿ, ಇಂಜಿನಿಯರ್ ಆಗಿ, ಪೈಲೆಟ್ ಆಗಿ ಕೂಡ ತನ್ನ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಾಳೆ. ಸಮಾಜದ ಕಟ್ಟುಪಾಡುಗಳ ಹೊರತಾಗಿಯೂ ಕೂಡ ಈಗಿನ ಆಧುನಿಕ ದಿನಗಳಲ್ಲಿ ಆಕೆ ಸಾಧನೆಯ ಶಿಖರವನ್ನು ಮುಟ್ಟುತ್ತಿದ್ದಾಳೆ. ಹಾಗಾಗಿ ವಿಶ್ವದಾದ್ಯಂತ ಮಹಿಳೆಯರಿಗಾಗಿ ಗೌರವಾನ್ವಿತವಾಗಿ ಈ ಒಂದು ದಿನವನ್ನು ''ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ'' ಯನ್ನಾಗಿ ಆಚರಿಸುವ ಮೂಲಕ ಮೀಸಲಿಡಲಾಗಿದೆ**

-ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಬೀದರ ದಕ್ಷಿಣ ಶಾಸಕ

## ಮಿನಿ ನ್ಯೂಸ್

### ವಿಶೇಷಚೇತನರಿಗೆ ಸಲಕರಣೆ ವಿತರಣೆ

• **ಉದಯವಾಹಿನಿ, ಚನ್ನಮ್ಮನ ಕಿತ್ತೂರು**

ಸಮೀಪದ ಹಿರೇಮುನವಳ್ಳಿ ಗ್ರಾಪಂ ಕಾರ್ಯಾಲಯದಲ್ಲಿ ಅಧ್ಯಕ್ಷ ಗೀತಾ ತೋರೋಜಿ ಮತ್ತು ಪ್ರಭಾರಿ ಅಭಿವೃದ್ಧಿ ಅಧಿಕಾರಿ ಬಿ.ಬಿ.ಅಮ್ಮಿನಭಾವಿ ಹಾಗೂ ಸರ್ವಸದಸ್ಯರು ಸೇರಿ 15ನೇ ಹಣಕಾಸಿನ ಯೋಜನೆಯಡಿ ವಿಶೇಷಚೇತನರಿಗೆ ವೀಲ್ಚೇರ್, ಸ್ಟಿಕ್, ಶ್ರವಣ ಯಂತ್ರ, ತ್ರಿಚಕ್ರ ಸೈಕಲ್, ಸೇರಿದಂತೆ ವಿವಿಧ ಸಲಕರಣೆಗಳನ್ನು ವಿತರಿಸಿದರು. ನಂತರ ಅಭಿವೃದ್ಧಿ ಅಧಿಕಾರಿ ಮಾತನಾಡಿ ವಿಶೇಷಚೇತನರು ಅಬಲರಲ್ಲ ಅವರು ಸಬಲರು ಅವರನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದೆ, ಇದರ ಲಾಭ ಪಡೆದುಕೊಂಡು ವಿಶೇಷಚೇತನರು ಯಾರ ಮೇಲೆಯೂ ಅವಲಂಬಿತರಾಗದೆ ಸ್ವತಃ ಜೀವನ ಸಾಗಿಸಬೇಕೆಂದರು.

ಈ ವೇಳೆ ಉಪಾಧ್ಯಕ್ಷ ಗೋಪಾಲ ತಾವರೆ, ಸದಸ್ಯರುಗಳಾದ ದೀಪಾ ಪಾಟೀಲ, ಮಂಜುನಾಥ ಅಳಓಣಿ, ಭಾರತಿ ತಳವಾರ, ರಾಜೇಶ್ವರಿ ಕರ್ಕಿ, ಕಾವೇರಿ ಚೌಗ್ಲಾ, ನಾಗಯ್ಯ ಪೂಜಾರ, ಸುರೈಯಾಬೇಗಂ ಘಳಗಿ, ವಿಆರ್‌ಡಬ್ಲೂ ಬಸವಾರಾಜ ಪಾಟೀಲ, ಕಾರ್ಯದರ್ಶಿ ವೀರೇಶ ರೇವಡಿ, ಸರ್ವಗ್ರಾಪಂ ಸಿಬ್ಬಂದಿ ಸಾರ್ವಜನಿಕರಿದ್ದರು.

### ವೀರಭದ್ರೇಶ್ವರ ಸ್ವಾಮಿ ರಥೋತ್ಸವ

• **ಉದಯವಾಹಿನಿ, ಹಾಸನ**

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕೇರಳಾಪುರ ಗ್ರಾಮದಲ್ಲಿಂದು ಚೋಳರ ಕಾಲದ ಇತಿಹಾಸ ಪ್ರಸಿದ್ಧ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವ ಸಡಗರ ಸಂಭ್ರಮದಿಂದ ನಡೆಯಿತು.


ಉದಯವಾಹಿನಿ ಚಿತ್ರ

ಬೆಳಗ್ಗೆ ದೇವಾಲಯದಲ್ಲಿ ಗಣಪತಿ, ಪೂಜೆ, ಅಂಕುರಾರ್ಪಣೆ, ನವಮಿ ಉತ್ಸವ, ನವಗ್ರಹ ಪೂಜೆ ಸಲ್ಲಿಸಲಾಯಿತು.

ಮೂಲ ದೇವರಿಗೆ ವಿಶೇಷ ಪೂಜೆ, ಯಾತ್ರಾದಾನೋತ್ಸವ ಸೇವೆ ಪೂರೈಸಲಾಯಿತು.

ಬಳಿಕ ದೇವರ ಉತ್ಸವ ಮೂರ್ತಿಯನ್ನು ಹೊರತಂದು ಪ್ರದಕ್ಷಿಣೆ ಹಾಕಿದ ಬಳಿಕ ದೇವಸ್ಥಾನ ಎದುರಿದ್ದ ಅಲಂಕೃತ ರಥದ ಮೇಲೆ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು. ನಂತರ ಭಕ್ತರು ಹರ್ಷೋದ್ಗಾರದಿಂದ ತೇರು ಎಳೆದರು. ರಥ ಬೀದಿಯಲ್ಲಿ ತೇರು ಮುಂದೆ ಚಲಿಸುವಾಗಿ ಭಕ್ತರು ಹಣ್ಣು ಧವನ ಎಸೆದರು.

## ತ್ರೈಮಾಸಿಕ ಕಾರ್ಯನಿರ್ವಹಣೆ
### ವಿವಿಧ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ

• **ಉದಯವಾಹಿನಿ, ಕಾರಟಗಿ**

110/11 KVA ಶ್ರೀ ಶ್ರೀರಾಮನಗರ ವಿದ್ಯುತ್ ಉಪ-ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿರ್ವಾಹಣೆ ಕೈಗೊಳ್ಳುವ ನಿಮಿತ್ಯ ಮಾರ್ಚ್ 11.ಮಂಗಳವಾರ ಬೆಳ್ಳಿಗ್ಗೆ 09:00 ರಿಂದ ಸಂಜೆ 05:00 ಗಂಟೆವರೆಗೆ ವಿದ್ಯುತ್ ಸರಬರಾಜುನಲ್ಲಿ ವ್ಯತ್ಯಯವಾಗಲಿದೆ.

ಕಾರಣ ಶ್ರೀರಾಮನಗರ ಶಾಖೆ ಸೇರಿದಂತೆ ವ್ಯಾಪ್ತಿಯಲ್ಲಿ ಬರುವಂತಹ ಸುತ್ತಮುತ್ತಲಿನ ಗ್ರಾಮಗಳಾದ ಕೃಷ್ಣಾಪೂರ, ಸಿದ್ದಾಪೂರ, ಗುಂಡೂರು, ಕೆ.ಜಿ ಕ್ಯಾಂಪ್, ಲಕ್ಷ್ಮಿಕ್ಯಾಂಪ್, ಗುಂಡೂರು ಕ್ಯಾಂಪ್, ಸಿಂಗನಾಳ, ಸಿಂಗನಾಳ ಕ್ಯಾಂಪ್, ಬರಗೂರು, ಮುಸ್ಟೂರು, ಕುಂಟೋಜಿ, ಕೊಟ್ಟೆಕಲ್, ಜೈಕಿಸಾನ್ ತಾಂಡ, ಅಂಜೂರಿ ಕ್ಯಾಂಪ್,ಹಾಗೂ ಇನ್ನಿತರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಿದ್ಯುತ್ ವ್ಯತ್ಯಯವಾಗುತ್ತದೆ. ಕಾರಣ ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ




**ಸೂಚನೆ:-** ಈ ಮೂಲಕ ಸಾರ್ವಜನಿಕರಿಗೆ ಸೂಚಿಸುವುದೇನೆಂದರೆ, ಸದರಿ ಮೇಲಿನ ಕೆಲಸವು ಬೇಗನೆ ಮುಕ್ತಾಯಗೊಂಡಲ್ಲಿ ಯಾವುದೇ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು ಆದ್ದರಿಂದ ಸಾರ್ವಜನಿಕರು ಯಾವುದೇ ತರಹದ ವಿದ್ಯುತ್ ದುರಸ್ಥಿ ಕೆಲಸ ಕಾರ್ಯಗಳನ್ನು ಮಾಡಬಾರದೆಂದು ಈ ಮೂಲಕ ಕೋರಲಾಗಿದೆ. ಒಂದು ವೇಳೆ ವಿದ್ಯುತ್ ಅಘಘಾತ ಸಂಭವಿಸಿದಲ್ಲಿ ನಮ್ಮ ಕಂಪನಿಯು ಜವಬ್ದಾರಿಯಾಗಿರುವುದಿಲ್ಲ.ಎಂದು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನ ಉಪ-ವಿಭಾಗ, ಗು.ವಿ.ಸ.ಕಂ.ನಿ.ನಿ. ಕಾರಟಗಿ, ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಧನೆಗೆ ಶಿಕ್ಷಣದ ಜೊತೆಗೆ ಆತ್ಮಸ್ಥೈರ್ಯವೂ ಕೂಡ ತುಂಬಾ ಮುಖ್ಯ

## ಮಹಿಳೆಯರು ಆರ್ಥಿಕವಾಗಿ ಸದೃಢರಾಗಿ: ಉಪಳಾಂಕರ

• **ಉದಯವಾಹಿನಿ, ಕಲಬುರಗಿ**

ಪ್ರತಿಯೊಬ್ಬ ಮಹಿಳೆಯರು ಆರ್ಥಿಕವಾಗಿ ಸದೃಢರಾಗಬೇಕು ಎಂದು ಖ್ಯಾತ ಉದ್ಯಮಿ ಜ್ಯೋತಿ ಉಪಳಾಂಕರ ಹೇಳಿದರು.

ನಗರ ಗೋದುತಾಯಿ ದೊಡ್ಡಪ್ಪ ಅಪ್ಪ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಮಹಿಳಾ ಮಹಾವಿದ್ಯಾಲಯ ಮತ್ತು ಗೋದುತಾಯಿ ಬಿ.ಈಡ್ ಮಹಿಳಾ ಮಹಾವಿದ್ಯಾಲಯ ಸಂಯುಕ್ತಾಶ್ರಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಪ್ರತಿ ಮಹಿಳೆಯು ಸಹ ಸ್ವಉದ್ಯಮವನ್ನು ಪ್ರಾರಂಭಿಸಬೇಕು. ಇವತ್ತಿಗೆ ಎಷ್ಟೋ ಕೃಷಿ ಮಹಿಳಾ ಸಾಧಕರು ನಮ್ಮ ಮುಂದೆ ಇದ್ದಾರೆ. ಸಾಧನೆಗೆ ಶಿಕ್ಷಣದ ಜೊತೆಗೆ ಆತ್ಮಸ್ಥೈರ್ಯವೂ ಕೂಡ ತುಂಬಾ ಮುಖ್ಯವಾಗಿದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಕಾರ್ಯಕ್ರಮದ ಇನ್ನೋರ್ವ ಮುಖ್ಯ ಅತಿಥಿ ಶರಣಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಸಿ.ಎ.ಫೌಂಡೇಶನ ನಿರ್ದೇಶಕರಾದ ಡಾ.ಇಂದಿರಾ ಶೇಟಕಾರ ಮಾತನಾಡಿ, ಇಂದು ಮಹಿಳೆಯರು ಸಬಲೀಕರಣಗೊಳ್ಳುತ್ತಿದ್ದಾರೆ. ಅವರಿಗೆ ಸಮಾನ ಗೌರವವನ್ನು ನೀಡಲಾಗುತ್ತಿದೆ. ಹಿಂದೆ, ಮಹಿಳೆಯರನ್ನು ಮನೆಗಳಲ್ಲಿ ನಿರ್ಬಂಧಿಸಲಾಗಿತ್ತು ಮತ್ತು ಕೆಲಸಕ್ಕಾಗಿ ಮನೆಯಿಂದ ಹೊರಗೆ ಹೋಗಲು ಅನುಮತಿ ಇರಲಿಲ್ಲ. ಈಗ ಮಹಿಳೆಯರಿಗೆ ಕೆಲಸದಲ್ಲಿ ಸಮಾನ ಅವಕಾಶ ನೀಡಲಾಗುತ್ತಿದೆ ಮತ್ತು ಅನೇಕ ಕ್ಷೇತ್ರಗಳಲ್ಲಿ ಪುರುಷರ ನಡುವೆ ಮತ್ತು ಕೆಲವೊಮ್ಮೆ ಪುರುಷರಿಗಿಂತ ಮುಂದೆ ನಿಲ್ಲಲು ಅವಕಾಶ ನೀಡಲಾಗಿದೆ. ಇಂದು ಮಹಿಳೆಯರು ತಮ್ಮ ಸಾಮರ್ಥ್ಯ ಮತ್ತು ಸಾಮರ್ಥ್ಯಗಳನ್ನು ಅರಿತುಕೊಳ್ಳಲು ಪ್ರಾರಂಭಿಸಿದ್ದಾರೆ, ಇದು ಅವರ ಮನೆ ಮತ್ತು ಇಡೀ ಸಮಾಜದ ಯಶಸ್ಸಿಗೆ ಕೊಡುಗೆ ನೀಡುತ್ತದೆ.

**ಮಹಿಳೆಯರು ನಿಜಕ್ಕೂ ಜಗತ್ತನ್ನು ತಮ್ಮ ಕಡೆಗೆ ತಿರುಗಿಸುತ್ತಿದ್ದಾರೆ. ಅವರು ಪ್ರತಿಯೊಂದು ಕ್ಷೇತ್ರಕ್ಕೂ ಪ್ರವೇಶಿಸುತ್ತಿದ್ದಾರೆ ಮತ್ತು ಎಲ್ಲದರಲ್ಲೂ ಯಶಸ್ಸನ್ನು ಸಾಧಿಸುತ್ತಿದ್ದಾರೆ, ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುತ್ತಿದ್ದಾರೆ**

-ಡಾ.ಇಂದಿರಾ ಶೇಟಕಾರ

• **ಉದಯವಾಹಿನಿ ಕಾರಟಗಿ**

## ಸಚಿವ ಶಿವರಾಜ ತಂಗಡಗಿಯಿಂದ
### ತಾಲ್ಲೂಕು 3ನೇ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ

ಸಿದ್ದಾಪುರದಲ್ಲಿ ಮಾ. 22 ಮತ್ತು 23ರಂದು ಜರುಗಲಿರುವ ಕಾರಟಗಿ ತಾಲ್ಲೂಕು ಮೂರನೇ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಬಿಡುಗಡೆಗೊಳಿಸಿದರು.

ಈ ವೇಳೆ ಮಾತನಾಡಿದ ಸಚಿವರು ಸಿದ್ದಾಪುರ ಚಾರಿತ್ರಿಕ ಮತ್ತು ಐತಿಹಾಸಿಕ ಮಹತ್ವವನ್ನು ಹೊಂದಿರುವ ಸಿದ್ದಾಪುರ ಗ್ರಾಮದಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದಕ್ಕೆ ಅತ್ಯಂತ ಹರ್ಷದಾಯಕ ಸಂಗತಿ ಎಂದರು.

ಬಳಿಕ ಕಸಾಪ ತಾಲ್ಲೂಕಾಧ್ಯಕ್ಷ ಶರಣಪ್ಪ ಕೋಟ್ಯಾಳ ಮಾತನಾಡಿ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ಸಿಗೆ ಸಿದ್ದಾಪುರದ ಗ್ರಾಮಸ್ಥರು ಒಂದು ಶಕ್ತಿಯಾಗಬೇಕು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿಯವರ ಸಹಕಾರ ಪ್ರಮುಖವಾಗಿದೆ ಎಂದರು.


ಉದಯವಾಹಿನಿ ಚಿತ್ರ

ಇದಕ್ಕೂ ಮುನ್ನ ಎಪಿಎಂಸಿ ಆವರಣದಲ್ಲಿನ ಸಮ್ಮೇಳನ ಕಚೇರಿಯಲ್ಲಿ ಊರಿನ ಪ್ರಮುಖರು, ಯುವ ಮುಖಂಡರು, ಸಾಹಿತ್ಯ ಅಭಿಮಾನಿಗಳು ವಿವಿಧ ಸಂಘ-ಸಂಸ್ಥೆ ಪ್ರತಿನಿಧಿಗಳು ಸೇರಿ ಇತರರು ಇದ್ದರು.

## ಕ್ಯಾನ್ಸರ್ ತಪಾಸಣಾ ಶಿಬಿರ

• **ಉದಯವಾಹಿನಿ, ಬಾಗಲಕೋಟೆ,**


ಉದಯವಾಹಿನಿ ಚಿತ್ರ

ಈಗಿನ ಆಧುನಿಕ ವೈದ್ಯಕೀಯ ಕ್ಷೇತ್ರದಲ್ಲಿ ಕ್ಯಾನ್ಸರ್ ಕಾಯಿಲೆ ಒಂದು ಭಯಾನಕ ಕಾಯಿಲೆಯಾಗಿ ಉಳಿದಿಲ್ಲ. ಅತ್ಯಾಧುನಿಕ ಹೊಸ ಆವಿಷ್ಕಾರಗಳೊಂದಿಗೆ ಕ್ಯಾನ್ಸರ್ ಕಾಯಿಲೆಯನ್ನು ಪ್ರಾಥಮಿಕ ಹಂತದಲ್ಲಿಯೇ ಪತ್ತೆ ಹಚ್ಚಿ ಅದನ್ನು ಸಂಪೂರ್ಣ ಗುಣಪಡಿಸಬಹುದಾಗಿದೆ' ಎಂದು ಬಿ.ವಿ.ವಿ ಸಂಘದ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಅಶೋಕ ಎಮ್. ಸಜ್ಜನ (ಬೇವೂರ) ಅವರು ಹೇಳಿದರು.

ಅವರು ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆ, ಪಿ.ಎಮ್.ಎನ್.ಎಮ್ ಡೆಂಟಲ್ ಕಾಲೇಜು ಮತ್ತು ಹುಬ್ಬಳ್ಳಿಯ ಹೆಲ್ತ್‌ಕೇರ್ ಗ್ಲೋಬಲ್ ಎಂಟರ್ಪ್ರೈಜೆಸ್ (ಎಚ್.ಸಿ.ಜಿ) ಸಹಯೋಗದಲ್ಲಿ ವಿಶ್ವ ಮಹಿಳಾ ದಿನಾಚರಣೆ' ಅಂಗವಾಗಿ ಆಯೋಜಿಸಲಾದ ಒಂದು ದಿನದ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

## ಎಲ್ಲಾ ಕ್ಷೇತ್ರಗಳ ಬೆಳವಣಿಗೆಗೆ ಬಂಪರ್ ಕೊಡುಗೆ: ಸಂಗಾವಿ

• **ಉದಯವಾಹಿನಿ, ಸೇಡಂ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ತಮ್ಮ 16ನೇ ಬಜೆಟ್‌ನಲ್ಲಿ ಕೃಷಿ, ಶಿಕ್ಷಣ, ಆರೋಗ್ಯ, ರಸ್ತೆ ಸಂಪರ್ಕ ಸೇರಿದಂತೆ ಎಲ್ಲಾ ಕ್ಷೇತ್ರಗಳ ಬೆಳವಣಿಗೆಗೆ ಬಂಪರ್ ಕೊಡುಗೆ ನೀಡಿದ್ದಾರೆ ಎಂದು ಮಾಜಿ ಕಾಡಾ ಅಧ್ಯಕ್ಷ ಮಹಾಂತಪ್ಪ ಕೆ ಸಂಗಾವಿ ಅವರು ಹೇಳಿದ್ದಾರೆ.



ಸೇಡಂ ತಾಲ್ಲೂಕಿನಲ್ಲಿರುವ ಸರ್ಕಾರಿ ಐಟಿಐಯನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಉನ್ನತಿಕರಿಸಲು 25 ಕೋಟಿ ರೂ ಮೀಸಲಿಡಲಾಗಿದೆ. ಇದರಿಂದ ನಮ್ಮ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಅಂತಾರಾಷ್ಟ್ರೀಯ ಮಟ್ಟದ ತರಬೇತಿ ಸಿಗಲಿದೆ ಹಾಗೂ ಸೇಡಂ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯನ್ನು 150 ಹಾಸಿಗೆಯ ವಿಭಾಗಿಯ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ಅನುದಾನ ಒದಗಿಸಿ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದಾರೆ.ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಮತ್ತು ಕಲಬುರಗಿ ಜಿಲ್ಲೆ ಹಾಗೂ ಸೇಡಂಗೆ ಹೆಚ್ಚು ಆಯವ್ಯಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ್ದಾರೆ.

ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಸಚಿವ ಡಾ.ಶರಣಪ್ರಕಾಶ ಪಾಟೀಲ ಊಡಗಿ ಅವರಿಗೆ ಜನರಪರವಾಗಿ ಹೃತ್ಪೂರ್ವಕ ಅಭಿನಂದನೆಗಳು ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

## ವಿದ್ಯಾರ್ಥಿನಿಯರೊಂದಿಗೆ ಅಸಭ್ಯ ವರ್ತನೆ ಇಬ್ಬರು ಶಿಕ್ಷಕರ ಅಮಾನತು

• **ಉದಯವಾಹಿನಿ, ವಿಜಯಪುರ**

ವಿದ್ಯಾರ್ಥಿನಿಯರೊಂದಿಗೆ ಅಸಭ್ಯವಾಗಿ ವರ್ತಿಸಿದ ಇಬ್ಬರು ಶಿಕ್ಷಕರನ್ನು ವಿಜಯಪುರ ನಗರ ವಲಯ ಬಿಇಒ ಬಸವರಾಜ ತಳವಾರ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ. ಸಹ ಶಿಕ್ಷಕ ಎಂ.ಕೆ ಪಾಟೀಲ ಹಾಗೂ ಮುಖ್ಯ ಗುರು ಜಗದೀಶ ಅಕ್ಕಿ ಅಮಾನತುಗೊಂಡವರು.

ನಗರದ ಕೆಬಿಎಸ್ ನಂಬರ್ 4 ರ ಶಾಲಾ ವಿದ್ಯಾರ್ಥಿನಿಯರೊಂದಿಗೆ ಅಸಭ್ಯ ವರ್ತನೆ ಹಾಗೂ ಬ್ಯಾಡ್ ಟಚ್ ಆರೋಪದ ಹಿನ್ನೆಲೆ ಬಿಇಒ ಬಸವರಾಜ ತಳವಾರ, ಇಲಾಖಾ ವಿಚಾರಣೆ ಕಾಯ್ದಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಆದೇಶ ನೀಡಿ ಅಮಾನತುಗೊಳಿಸಿದ್ದಾರೆ.

## ಕೈ ಸಮಾವೇಶದಲ್ಲಿ ಮೃತಪಟ್ಟ ಕಾರ್ಯಕರ್ತನಿಗೆ 5 ಲಕ್ಷ ಪರಿಹಾರ ವಿತರಣೆ

• **ಉದಯವಾಹಿನಿ, ಹಾವೇರಿ**

ಕಾಂಗ್ರೆಸ್ ಪಕ್ಷ ಬೆಳಗಾವಿಯಲ್ಲಿ ಆಯೋಜನೆ ಮಾಡಿದ್ದ ಗಾಂಧಿ ಭಾರತ ಸಮಾವೇಶದಲ್ಲಿ ಭಾಗಿಯಾಗಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತನಿಗೆ ಕೆಪಿಸಿಸಿ ವತಿಯಿಂದ 5 ಲಕ್ಷ ರೂ. ಪರಿಹಾರ ಚೆಕ್ ವಿತರಿಸಲಾಯಿತು.


ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕಿನ ನದಿಹರಳಹಳ್ಳಿ ಗ್ರಾಮದ ಬಸಪ್ಪ ಕೆಂಚಪ್ಪ ಪಾಮೇನಹಳ್ಳಿ ಎಂಬ ಕಾರ್ಯಕರ್ತ ಸಮಾವೇಶದಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದರು. ಮೃತರ ಕುಟುಂಬಸ್ಥರು ಪರಿಹಾರ ನೀಡುವಂತೆ ಶಾಸಕ ಪ್ರಕಾಶ್ ಕೋಳಿವಾಡಗೆ ಮನವಿ ಮಾಡಿದ್ದರು. ಶಾಸಕ ಪ್ರಕಾಶ್ ಕೋಳಿವಾಡ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಗಮನಕ್ಕೆ ತಂದು 5 ಲಕ್ಷ ರೂ. ಪರಿಹಾರ ನೀಡುವಲ್ಲಿ ಯಶಸ್ವಿಯಾಗಿದರು.

## ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿ ಮೇಲೆ ಆನೆ ದಾಳಿ: ಮಹಿಳೆಗೆ ಗಂಭೀರ ಗಾಯ

• **ಉದಯವಾಹಿನಿ, ಹಾಸನ**

ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿ ಮೇ ಲೆ ಕಾಡಾನೆ ದಾಳಿ ನಡೆಸಿದ ಘಟನೆ ಬೇಲೂರು ತಾಲ್ಲೂಕಿನ, ಚಿಕ್ಕಸಾಲಾವಾರ ಗ್ರಾಮದ ಬಳಿ ನಡೆದಿದೆ.

ಆನೆ ದಾಳಿ ಯಿಂದ ಬೈಕ್‌ನಲ್ಲಿದ್ದ ಮಹಿಳೆಗೆ ಗಂಭೀರ ಗಾಯವಾಗಿದೆ.


ಉದಯವಾಹಿನಿ ಚಿತ್ರ

ಭಾನುವಾರ ಬೆಳಗ್ಗೆ ಉಮೇಶ್ ಹಾಗೂ ರೇವತಿ (50) ದಂಪತಿ ಕೂಲಿ ಕೆಲಸಕ್ಕೆ ಬೈಕ್‌ನಲ್ಲಿ ಹೋಗುತ್ತಿದ್ದರು. ಈ ವೇಳೆ ಕಾಡಾನೆ ಏಕಾಏಕಿ ದಾಳಿ ನಡೆಸಿದೆ.

ಪರಿಣಾಮ ರೇವತಿಯವರ ತಲೆ ಮತ್ತು ಸೊಂಟದ ಭಾಗಕ್ಕೆ ಗಂಭೀರ ಗಾಯಗಳಾಗಿವೆ. ಅದೃಷ್ಟವಶಾತ್ ದಂಪತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗಾಯಾಳುಗಳಿಗೆ ಅರೇಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಹಾಸನ ಜಿಲ್ಲಾಸ್ಪತ್ರೆಗೆ ರವಾನೆ ಮಾಡಲಾಗಿದೆ.

ಗುಂಪು, ಪಂಗಡಗಳನ್ನು ಕಟ್ಟಿಕೊಂಡರೆ ಸಮುದಾಯದ ಅಭಿವೃದ್ಧಿ ಖಂಡಿತ ಅಸಾಧ್ಯ

# ಸಮಾಜದ ಅಭಿವೃದ್ಧಿಗೆ ಒಗ್ಗಟ್ಟಿನ ಶಕ್ತಿ ಅಗತ್ಯ: ಸತೀಶ್ ಗುತ್ತೇದಾರ್

• **ಉದಯವಾಹಿನಿ, ಕಲಬುರಗಿ**

ಈಡಿಗ ಬಿಲ್ಲವ ಸೇರಿದಂತೆ 26 ಪಂಗಡಗಳ ಒಗ್ಗಟ್ಟಿನ ಬಲ ಪ್ರದರ್ಶನದಿಂದ ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯ ಮತ್ತು ಸಮಾಜಕ್ಕೆ ಶಕ್ತಿ ಬರುತ್ತದೆ ಎಂದು ಕಲ್ಯಾಣ ಕರ್ನಾಟಕ ಹೋರಾಟ ಆರ್ಯ ಹೋರಾಟ ಸಮಿತಿಯ ಅಧ್ಯಕ್ಷರಾದ ಸತೀಶ್ ವಿ. ಗುತ್ತೇದಾರ್ ಹೇಳಿದರು.

**ಒಗ್ಗಟ್ಟಿನ ಬಲ ಪ್ರದರ್ಶನ**

ಬೆಂಗಳೂರಿನ ಗಾರ್ಡೇನಿಯ ಅರಮನೆ ಮೈದಾನದಲ್ಲಿ ಮಾರ್ಚ್ 8 ರಂದು ನಡೆದ ಈಡಿಗ ಬಿಲ್ಲವ ಸೇರಿದಂತೆ 26 ಪಂಗಡಗಳ ಚಿಂತನ ಮಂಥನ ಸಭೆಯಲ್ಲಿ ಮಾತನಾಡುತ್ತ ರಾಜ್ಯದಲ್ಲಿರುವ ಈಡಿಗರು ಬಿಲ್ಲವರು ನಾಮಧಾರಿಗಳು ಸೇರಿದಂತೆ ಎಲ್ಲರೂ ಒಂದೇ ಎಂದು ತಿಳಿದು ಸಂಘಟಿತರಾಗಿ ಬಿ.ಕೆ ಹರಿಪ್ರಸಾದ್ ಅವರಂತಹ ನಾಯಕರ ನೇತೃತ್ವದಲ್ಲಿ ಒಗ್ಗೂಡಿ ಅವರ ನಿರ್ದೇಶನದಂತೆ ಮುನ್ನಡೆಯಬೇಕಾಗಿದೆ.

ಜೊತೆಗೆ ಮುಂದಿನ ದಿನಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೂಡ ಈ ರೀತಿಯ ಸಭೆಗಳನ್ನು ನಡೆಸಿ ಸಮುದಾಯದ ಅಭಿವೃದ್ಧಿಗೆ ಎಲ್ಲರೂ ಒಟ್ಟಿಗೆ ಶ್ರಮಿಸೋಣ. ಡಾ. ಪ್ರಣವಾನಂದ ಶ್ರೀಗಳ ನೇತೃತ್ವದ ಪಾದಯಾತ್ರೆ ಮತ್ತು ಹೋರಾಟಗಳಿಂದ ಸರಕಾರ ಕಣ್ಣು ತೆರೆಸಿ ನಿಗಮವನ್ನು ಘೋಷಣೆ ಮಾಡಿದ್ದರೂ ಅನುದಾನದ ಬಿಡುಗಡೆ ಇಲ್ಲದೆ ಸೊರಗುವಂತಾಗಿದೆ.

ಈ ಬಗ್ಗೆ ಬಿ. ಕೆ ಹರಿಪ್ರಸಾದ್ ಅವರ ನಾಯಕತ್ವದಲ್ಲಿ ತಕ್ಷಣ ನಿಗಮಕ್ಕೆ ಅನುದಾನ ಹಾಗೂ ಸಮುದಾಯದ ಇತರ ಬೇಡಿಕೆಗಳಿಗೆ ಸ್ಪಂದಿಸುವಂತೆ ಕೋರಿ ಮುಖ್ಯಮಂತ್ರಿಗಳನ್ನು ಭೇಟಿ ಯಾಗುವುದು ಅತ್ಯಂತ ಅಗತ್ಯದ ಕೆಲಸ ಎಂದು ಹೇಳಿದರು.


ಉದಯವಾಹಿನಿ ಚಿತ್ರ

**26 ಪಂಗಡಗಳ ಸುಮಾರು 5 ಲಕ್ಷ ಜನರ ಸಮಾವೇಶ**

**ದಕ್ಷಿಣ ಭಾರತದಲ್ಲಿರುವ ಸಮುದಾಯದ 26 ಪಂಗಡಗಳ ಸುಮಾರು ಐದು ಲಕ್ಷ ಜನರನ್ನು ಸೇರಿಸಿ ನಾಗಪುರ, ಹೈದರಾಬಾದ್ ಅಥವಾ ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ಮಾಡಲಾಗುವುದು ಜೊತೆಗೆ ಈಡಿಗ ನಿಗಮಕ್ಕೆ ಅನುದಾನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶೀಘ್ರದಲ್ಲಿ ಭೇಟಿ ಮಾಡಲಾಗುವುದು ಎಂದು ವಿಧಾನ ಪರಿಷತ್ ಸದಸ್ಯರಾದ ಬಿ.ಕೆ ಹರಿಪ್ರಸಾದ್ ತಿಳಿಸಿದರು.**

**ಎಲ್ಲರೂ ಒಂದೇ ಮನಸ್ಸಿನಿಂದ ಸಮುದಾಯದ ಜನರ ಕಲ್ಯಾಣಕ್ಕಾಗಿ ಸ್ಪಂದಿಸುವ ಕಾಲ ಸನ್ನಿಹಿತವಾಗಿದೆ. ಗುಂಪು, ಪಂಗಡಗಳನ್ನು ಕಟ್ಟಿಕೊಂಡರೆ ಸಮುದಾಯದ ಅಭಿವೃದ್ಧಿ ಖಂಡಿತ ಅಸಾಧ್ಯ. ಸಮುದಾಯದ ಸ್ವಾಮೀಜಿಗಳ ಮಾರ್ಗದರ್ಶನದಿಂದ ರಾಜಕೀಯ ನೇತಾರರ ಒಗ್ಗೂಡುವಿಕೆಯಿಂದ ರಾಜ್ಯದ ಅತ್ಯಂತ ಹಿಂದುಳಿದ ಈಡಿಗ, ಬಿಲ್ಲವ ಸೇರಿದಂತೆ 26 ಪಂಗಡಗಳ ಸಮಗ್ರ ಬೆಳವಣಿಗೆಗೆ ಚಿಂತನೆ ನಡೆಸುವ ಇಂತಹ ಸಭೆ ಅತ್ಯಂತ ಪ್ರಶಂಸನೀಯವಾದುದು. ಕಲ್ಯಾಣ ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಚಿಂತನ ಮಂಥನ ಸಭೆಗೆ ಸಂಪೂರ್ಣ ಸಹಕಾರ ನೀಡಲಾಗುವುದು**

-ಸತೀಶ್ ಗುತ್ತೇದಾರ್

## ಶಿಕ್ಷಣದ ಜೊತಗೆ ಸಂಸ್ಕಾರವನ್ನೂ ಕಲಿಯಬೇಕು

• **ಉದಯವಾಹಿನಿ, ಬಾದಾಮಿ**

ಹೆತ್ತವರು ಮಗುವನ್ನು ಜಗತ್ತಿನ ಪರಿಚಯ ಮಾಡಿಕೊಟ್ಟರೆ, ಶಿಕ್ಷಣ, ಸಂಸ್ಕಾರ ನೀಡಿದ ಶಿಕ್ಷಕರು ಆ ಮಗುವನ್ನು ಇಡೀ ಜಗತ್ತಿಗೆ ಪರಿಚಯ ಮಾಡಿಕೊಡುತ್ತಾರೆ. ಮಗುವಿಗೆ ಜಗತ್ತಿನ ಪರಿಚಯ ಮಾಡಿಕೊಟ್ಟರೆ, ಮಗುವನ್ನೇ ಜಗತ್ತಿಗೆ ಪರಿಚಯ ಮಾಡಿಕೊಡುವುದು ಶಿಕ್ಷಕರು ಎಂದು ಶಿಕ್ಷಕ ಬಿ.ಎಸ್. ಗೌಡರ ಹೇಳಿದರು.

ಅವರು ತಾಲ್ಲೂಕಿನ ಚಿಕ್ಕಮುಚ್ಚಳಗುಡ್ಡದ ಸರಕಾರಿ ಆದರ್ಶ ವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ಮಾಡುವ ಕಾಯಕದಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ, ಶ್ರದ್ಧೆ ಇರಬೇಕು. ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯುವುದೇ ಕಾಯಕ. ನಾನು ಏನು ಮಾಡುತ್ತಿದ್ದೇನೆ ಎಂಬ ಪ್ರಜ್ಞೆ ಇರಬೇಕು. ಜೊತೆಗೆ ಕಾಯಕ ಏನಾದರೂ ಇರಲಿ ಅದು ದೇಶದ ಹಿತಕ್ಕೆ ಪೂರಕವಾಗಿರಬೇಕು. ದೇಶ ಉಳಿದರೆ ಪ್ರದೇಶ ಉಳಿಯುತ್ತದೆ. ಪ್ರದೇಶ ಉಳಿದರೆ ನಾವು ಉಳಿಯುತ್ತೇವೆ. ಹೀಗೆ ದೇಶವೇ ಮೊದಲು. ಈ ಎಲ್ಲಾ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.


ಉದಯವಾಹಿನಿ ಚಿತ್ರ

ಕೋಟೆಕಲ್ಲನ ಅಮರೇಶ್ವರ ಮಠದ ಶ್ರೀ ನೀಲಕಂಠ ಸ್ವಾಮಿಗಳು ಸಾನಿಧ್ಯವಹಿಸಿ ಮಾತನಾಡಿ, ದೇಶದ ಸತ್ಪ್ರಜೆಯಾಗಬೇಕು ಯಾಕೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮನ್ನು ಆಳುವವರನ್ನು ನಾವು ಗುಪ್ತವಾಗಿ ಆಯ್ಕೆ ಮಾಡಿಕೊಳ್ಳುತ್ತೇವೆ.

ನಿಮಗೆ ಆಯ್ಕೆ ಮಾಡುವ ಅವಕಾಶವಿದ್ದಾಗ ಅತ್ಯುತ್ತಮವಾದದ್ದನ್ನೇ ಆಯ್ಕೆಮಾಡಿಕೊಳ್ಳಬೇಕು. ಮತದಾರರು ಆದರ್ಶರಾಗಿರಬೇಕು. ಆಯ್ಕೆ ಮಾಡುವವರು ಉತ್ತಮರಲ್ಲದಿದ್ದರೆ ನಮ್ಮ ನಾಯಕರು ಉತ್ತಮರಾಗಿರುವುದಿಲ್ಲ ಎಂದರು.

ಇದೇ ಸಂದರ್ಭದಲ್ಲಿ ಆದರ್ಶ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಸನ್ಮಾನಿಸಲಾಯಿತು.

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

• **ಉದಯವಾಹಿನಿ, ಕಮಲನಗರ**

ತಾಲ್ಲೂಕಿನ ಡಾ|| ಚನ್ನಬಸವ ಪಟ್ಟದ್ದೇವರು ಪ್ರೌಢ ಶಾಲೆ ಹಾಗೂ ಶ್ರೀ ಗುರಪ್ಪಾ ಟೊಣ್ಣೆ ಪ್ರಾಥಮಿಕ ಶಾಲೆಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ವಿಜ್ರಂಭಣೆಯಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ 10ನೇ ತರಗತಿಯ ವಿದ್ಯಾರ್ಥಿಯಾದ ಮಹೇಶ್ವರಿ ಅವಿನಾಶ ದೇಶಸೇವೆ ಮಾಡಿರುವ ಕಿತ್ತೂರ ರಾಣಿ ಚನ್ನಮ್ಮ, ಮದರ ತೆರೆಸ್ಸಾ, ಸಾವಿತ್ರಿಬಾಯಿ ಫುಲೆ, ಒನಕೆ ಒಬವ್ವ, ವಿವಿಧ ಮಹೀಳೆರನ್ನು ಸ್ಮರಿಸುತ್ತ ಮಾತನಾಡಿದಳು ಅದೆ ರೀತಿ 4ನೇ ತರಗತಿಯ ವಿದ್ಯಾರ್ಥಿನಿ ಪ್ರಗತಿ ಪ್ರಕಾಶ ಕಾರ್ಯಕ್ರಮವನ್ನು ಉದೇಶಿಸಿ ಮಾತನಾಡಿದಳು

ಶಾಲೆಯ ಅಡಳಿತಾಧಿಕಾರಿಗಳಾದ ಶ್ರೀಯುತ ಚನ್ನಬಸವ ಘಾಳೆಯವರು ಮಕ್ಕಳನ್ನು ಉದ್ದೇಶಿಸಿ ಆಧುನಿಕ ಮಹಿಳೆಯರು ಇನ್ನು ಮುಂದೆ ಪುರುಷರ ಮೇಲೆ ಅವಲಂಬಿತರಾಗಿಲ್ಲ. ಅವರು ಪ್ರತಿಯೊಂದು ವಿಷಯದಲ್ಲೂ ಸ್ವತಂತ್ರರು ಮತ್ತು ಆತ್ಮವಿಶ್ವಾಸ ಹೊಂದಿದ್ದಾರೆ ಮತ್ತು ಪುರುಷರಿಗೆ ಸಮನಾವಾಗಿ ಎಲ್ಲವನ್ನೂ ಮಾಡಲು ಸಮರ್ಥರಾಗಿದ್ದಾರೆ. ಅಲ್ಲದೆ ನಾವು ಅವರಲ್ಲಿ ಪ್ರತಿಯೊಬ್ಬರು ಲಿಂಗದ ಕಾರಣದಿಂದಲ್ಲ ಬದಲಾಗಿ ಅವರ ಸ್ವಂತ ಗುರುತಿಗಾಗಿ ಗೌರವಿಸಬೇಕು ಇದಲ್ಲದೆ, ಮನೆ ಮತ್ತು ಸಮಾಜದ ಸುಧಾರಣೇಗೆ ಮಹಿಳೆಯರು ಮತ್ತು ಪುರುಷರು ಇಬ್ಬರೂ ಸಮಾನವಾಗಿ ಕೊಡುಗೆ ನೀಡುತ್ತಾರೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಪ್ರತಿಯೊಬ್ಬ ಮಹಿಳೆ ಅಸಾಧಾರಣಳು, ಅವಳು ಎಲ್ಲಿ ಕೆಲಸ ಮಾಡಿದರೂ ಅದು ಮನೆಯಾಗಿರಲಿ ಅಥವಾ ಕಚೇರಿಯಾಗಿರಲಿ ಅವರು ತಮ್ಮ ಸುತ್ತಿಲಿನ ಪ್ರಪಂಚಕ್ಕೆ ಬದಲಾವಣೆ ತರುತ್ತಿದ್ದಾರೆ ಎಂದು ಹೇಳಿದರು. ಶಿಕ್ಷಕಿಯರಾದ ಪಲ್ಲಿವಿ ನಾಯ್ಕ, ರಾಜೇಶ್ವರಿ ಬಿರಾದರ ವಿಜಯಲಕ್ಷ್ಮಿ ಎಕಲಾರೆ, ಶಾಂತಾ ಮಡಿವಾಳ, ಶಿವಲಿಲಾ ಧರೆಗಾವೆ, ಶೋಭಾ ಪಾಟೀಲ, ಜ್ಯೋತಿ ಘಾಳೆ, ದೀಪಿಕಾ ಪಾಟೀಲ ಆಸ್ಮಾ ಪಠಾಣ, ರಾಜೇಶ್ವರು ಸಿರಸಗೆ, ರಂಜನಾ ಪಾಟೀಲ, ರಾಗೀಣಿ ಉಪಸ್ಥಿತರಿದರು.


ಉದಯವಾಹಿನಿ ಚಿತ್ರ

# ಝೆಲೆನ್ಸ್ಕಿಗೆ ಯುದ್ಧ ನಿಲ್ಲುವುದು ಬೇಕಿಲ್ಲ ಎಂದ ಡಿಒಜಿಇ ಮುಖ್ಯಸ್ಥ

## ಸ್ಟಾರ್‌ಲಿಂಕ್ ಸೇವೆ ನಿಲ್ಲಿಸಿದರೆ ಉಕ್ರೇನ್ ರಕ್ಷಣಾ ವ್ಯವಸ್ಥೆ ಧ್ವಂಸ; 'ದುಷ್ಟ' ಝೆಲೆನ್ಸ್ಕಿಗೆ ಎಲಾನ್ ಮಸ್ಕ್ ಗಂಭೀರ ಎಚ್ಚರಿಕೆ

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಸಾರ್ವಜನಿಕ ವಾಗ್ವಾದ ನಡೆಸಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ವಿರುದ್ಧ, ಸ್ಪೇಸ್ ಎಕ್ಸ್ ಮಾಲೀಕ ಮತ್ತು ಯುಎಸ್ ಕ್ಷಮತಾ ಇಲಾಖೆ ಮುಖ್ಯಸ್ಥ ಎಲಾನ್ ಮಸ್ಕ್ ತೀವ್ರ ವಾಗ್ದಾಳಿ ನಡೆಸಿದ್ದಾರೆ. ವೊಲೊಡಿಮಿರ್ ಝೆಲೆನ್ಸ್ಕಿ ಅವರನ್ನು ದುಷ್ಟ ಎಂದು ಕರೆದಿರುವ ಎಲಾನ್ ಮಸ್ಕ್, ಉಕ್ರೇನ್ ಅಧ್ಯಕ್ಷ ರಷ್ಯಾ ಜೊತೆಗೆ ಶಾಶ್ವತ ಯುದ್ಧವನ್ನು ಬಯಸುತ್ತಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ. ಉಕ್ರೇನ್ ಮೇಲೆ ರಷ್ಯಾ ನಿರಂತರವಾಗಿ ಆಕ್ರಮಣ ಮಾಡಲಿ ಎಂದು ಬಯಸಿರುವ ಝೆಲೆನ್ಸ್ಕಿ, ಈ ಯುದ್ಧದಲ್ಲೇ ತಮ್ಮ ರಾಜಕೀಯ ಅಸ್ತಿತ್ವವನ್ನು ಕಾಣುತ್ತಿದ್ದಾರೆ.. ಎಂದು ಎಲಾನ್ ಮಸ್ಕ್ ಕಿಡಿಕಾರಿದ್ದಾರೆ.

- ವೊಲೊಡಿಮಿರ್ ಝೆಲೆನ್ಸ್ಕಿ ವಿರುದ್ಧ ಗುಡಿಗಿದ ಎಲಾನ್ ಮಸ್ಕ್
- ಉಕ್ರೇನ್ ಅಧ್ಯಕ್ಷರನ್ನು ದುಷ್ಟ ಎಂದು ಕರೆದ ಸ್ಪೇಸ್ ಎಕ್ಸ್ ಮಾಲೀಕ
- ಸ್ಟಾರ್‌ಲಿಂಕ್ ಸ್ಯಾಟ್‌ಲೈಟ್ ಸೇವೆ ನಿಲ್ಲಿಸುವ ಬೆದರಿಕೆ ಹಾಕಿದ ಎಲಾನ್ ಮಸ್ಕ್



ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರನ್ನು ದುಷ್ಟ ಎಂದು ಕರೆದಿರುವ ಎಲಾನ್ ಮಸ್ಕ್, ಉಕ್ರೇನ್ ಅಧ್ಯಕ್ಷ ರಷ್ಯಾ ಜೊತೆಗೆ ಶಾಶ್ವತ ಯುದ್ಧವನ್ನು ಬಯಸುತ್ತಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ. ಅಲ್ಲದೇ ಒಂದು ವೇಳೆ ತಾವು ಸ್ಟಾರ್‌ಲಿಂಕ್ ಸ್ಯಾಟ್‌ಲೈಟ್ ಇಂಟರ್ನೆಟ್ ಸೇವೆಯನ್ನು ಸ್ಥಗಿತಗೊಳಿಸಿದರೆ, ಉಕ್ರೇನ್‌ನ ರಕ್ಷಣಾ ವ್ಯವಸ್ಥೆ ಕುಸಿಯಲಿದೆ ಎಂದೂ ಎಲಾನ್ ಮಸ್ಕ್ ಎಚ್ಚರಿಕೆ ನೀಡಿದ್ದಾರೆ. ಉಕ್ರೇನ್ ಸಾವು-ನೋವುಗಳಿಂದ ತಾವು ಬೇಸತ್ತಿರುವುದಾಗಿ ಎಲಾನ್ ಮಸ್ಕ್ ಹೇಳಿದ್ದಾರೆ.

ನಮ್ಮ ಸ್ಟಾರ್‌ಲಿಂಕ್ ಸ್ಯಾಟಲೈಟ್ ಇಂಟರ್ನೆಟ್ ವ್ಯವಸ್ಥೆಯೇ ಉಕ್ರೇನ್ ಸೇನೆಯ ಸಂವಹನಕ್ಕೆ ಬೆನ್ನೆಲುಬಾಗಿದೆ. ಒಂದು ವೇಳೆ ನಾವು ಈ ಸೇವೆಯನ್ನು ನಿಲ್ಲಿಸಿದರೆ ಉಕ್ರೇನ್‌ನ ರಕ್ಷಣಾ ವ್ಯವಸ್ಥೆ ಸಂಪೂರ್ಣವಾಗಿ ಕುಸಿಯುತ್ತದೆ ಎಂಬ ಎಲಾನ್ ಮಸ್ಕ್ ಅವರ ಎಚ್ಚರಿಕೆ ಇದೀಗ ಜಾಗತಿಕವಾಗಿ ಗಮನ ಸೆಳೆದಿದೆ.

ನಾನು ಉಕ್ರೇನ್ ವಿಚಾರದಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಏಕಾಂಗಿ ಹೋರಾಟಕ್ಕೆ ಅಕ್ಷರಶಃ ಸವಾಲು ಹಾಕಿದ್ದೆ. ನನ್ನ ಸ್ಟಾರ್‌ಲಿಂಕ್ ವ್ಯವಸ್ಥೆಯೇ ಉಕ್ರೇನ್ ಸೇನೆಯ ಬೆನ್ನೆಲುಬು. ನಾನಿದನ್ನು ನಿಲ್ಲಿಸಿದರೆ ಅವರ ಸಂಪೂರ್ಣ ರಕ್ಷಣಾ ವ್ಯವಸ್ಥೆ ಕುಸಿಯುತ್ತದೆ. ಮೂರು ವರ್ಷಗಳಿಂದ ನಡೆಯುತ್ತಿರುವ ಸಾವು-ನೋವುಗಳಿಂದ ನನಗೆ ಬೇಸರವಾಗಿದೆ. ಉಕ್ರೇನ್ ಈ ಯುದ್ಧದಲ್ಲಿ ಸೋಲುವುದು ನಿಶ್ಚಿತ.

ನಿಜವಾಗಿಯೂ ಕಾಳಜಿ ವಹಿಸುವ, ಯೋಚಿಸುವ ಮತ್ತು ಅರ್ಥಮಾಡಿಕೊಳ್ಳುವ ಯಾರಾದರೂ, ಈ ರಕ್ತಪಾತ ನಿಲ್ಲಬೇಕೆಂದು ಬಯಸುತ್ತಾರೆ ಎಂದು ಎಲಾನ್ ಮಸ್ಕ್ ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಟ್ವೀಟ್ ಮಾಡಿದ್ದಾರೆ. ಉಕ್ರೇನ್ ಯುದ್ಧದಲ್ಲಿನ ಸಾವು-ನೋವುಗಳಿಂದ ನಾನು ಬೇಸತ್ತಿದ್ದೇನೆ. ಉಕ್ರೇನ್ ಈ ಯುದ್ಧದಲ್ಲಿ ಸೋಲುವುದು ನಿಶ್ಚಿತ. ಆದರೆ ಈ ಯುದ್ಧ ದುಷ್ಟ ಝೆಲೆನ್ಸ್ಕಿ ಅವರ ರಾಜಕೀಯ ಅಸ್ತಿತ್ವದ ಟಾನಿಕ್ ಆಗಿದ್ದು, ಉಕ್ರೇನ್ ಮೇಲಿನ ರಷ್ಯಾದ ಆಕ್ರಮಣ ನಿಲ್ಲುವುದು ಝೆಲೆನ್ಸ್ಕಿ ಅವರಿಗೆ ಬೇಕಿಲ್ಲ ಎಂದು ಎಲಾನ್ ಮಸ್ಕ್ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಝೆಲೆನ್ಸ್ಕಿ ತಮ್ಮ ಅಧಿಕಾರ ಉಳಿಸಿಕೊಳ್ಳಲು ಉದ್ದೇಶಪೂರ್ವಕವಾಗಿ ಶಾಂತಿ ಮಾತುಕತೆಗೆ ವಿಳಂಬ ಮಾಡುತ್ತಿದ್ದಾರೆ. ಅಧಿಕಾರಕ್ಕಾಗಿ ತಮ್ಮವರ ಸಾವು-ನೋವುಗಳಿಗೆ ಝೆಲೆನ್ಸ್ಕಿ ಕಿವಿಯಾಗುತ್ತಿಲ್ಲ. ಝೆಲೆನ್ಸ್ಕಿ ಶಾಶ್ವತ ಯುದ್ಧವನ್ನು ಬಯಸುತ್ತಾರೆ.

ಅಂತ್ಯವಿಲ್ಲದ ಭ್ರಷ್ಟಾಚಾರದ ರಕ್ತಪಾತವನ್ನು ಬಯಸುತ್ತಾರೆ. ಇದು ದುಷ್ಟತನ ಎಂದು ಎಲಾನ್ ಮಸ್ಕ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ಸ್ಟಾರ್‌ಲಿಂಕ್ ಉಕ್ರೇನ್‌ಗೆ ಎಷ್ಟು ಮುಖ್ಯ?

**ಸ್ಟಾರ್‌ಲಿಂಕ್ ಬಳಕೆದಾರರು ಚಿಕ್ಕ ಸ್ಯಾಟಲೈಟ್ ಡಿಶ್ ಬಳಸಿ ಇಂಟರ್ನೆಟ್ ಪಡೆಯುತ್ತಾರೆ. ಈ ಡಿಶ್ ಆಕಾಶದಲ್ಲಿರುವ ಸ್ಯಾಟಲೈಟ್‌ಗಳ ಜಾಲಕ್ಕೆ ಸಿಗ್ನಲ್‌ಗಳನ್ನು ಕಳುಹಿಸಿ ಮಾಹಿತಿ ಅಥವಾ ಧ್ವನಿ ಸಂವಹನವನ್ನು ಸಾಧ್ಯವಾಗಿಸುತ್ತದೆ.**
**2022ರ ಫೆಬ್ರವರಿಯಲ್ಲಿ ರಷ್ಯಾ ಉಕ್ರೇನ್ ಮೇಲೆ ಆಕ್ರಮಣ ಮಾಡಿದಾಗಿನಿಂದ, ಉಕ್ರೇನ್‌ನ ಲ್ಯಾಂಡ್ ಲೈನ್ ಮತ್ತು ಮೊಬೈಲ್ ನೆಟ್‌ವರ್ಕ್‌ಗಳು ನಿರಂತರ ಬಾಂಬ್ ದಾಳಿಯಿಂದ ತೀವ್ರವಾಗಿ ಹಾನಿಗೊಳಗಾಗಿವೆ. ಸ್ಟಾರ್‌ಲಿಂಕ್ ಸಾವಿರಾರು ಸ್ಯಾಟ್‌ಲೈಟ್ ಡಿಶ್‌ಗಳನ್ನು ಕಳುಹಿಸುವ ಮೂಲಕ, ಈ ಕೊರತೆಯನ್ನು ನೀಗಿಸಲು ಉಕ್ರೇನ್‌ಗೆ ಸಹಾಯ ಮಾಡಿದೆ.**

## ಅಮೆರಿಕದಲ್ಲಿ ಹಿಂದೂ ದೇವಾಲಯದ ಗೋಡೆ ವಿರೂಪಗೊಳಿಸಿದ ಅಪರಿಚಿತ ವ್ಯಕ್ತಿ

• **ಉದಯವಾಹಿನಿ, ನ್ಯೂಯಾರ್ಕ್**

ಅಮೆರಿಕದಲ್ಲಿ ಕ್ಯಾಲಿಫೋರ್ನಿಯಾದ ಬಿಎಪಿಎಸ್ ಹಿಂದೂ ದೇವಾಲಯದ ಗೋಡೆ ಹಾಗೂ ಇತರೆಡೆ ಅಪರಿಚಿತ ವ್ಯಕ್ತಿ ಕಪ್ಪುಬರಹ ಗೀಚಿ ವಿರೂಪ ಗೊಳಿಸಿ ಅವಮಾನಿಸಿದ್ದಾನೆ. ಚಿನೋ ಹಿಲ್ಸ್‌ನಲ್ಲಿರುವ ಶ್ರೀ ಸ್ವಾಮಿನಾರಾಯಣ ಮಂದಿರ ಅಪವಿತ್ರಗೊಂಡಿದೆ ಎಂದು ಅಕ್ಷರ ಪುರುಷೋತ್ತಮ್ ಸ್ವಾಮಿನಾರಾಯಣ ಸಂಸ್ಥೆ ಹೇಳಿದೆ. ಚಿನೋ ಹಿಲ್ಸ್ ಮತ್ತು ದಕ್ಷಿಣ ಕ್ಯಾಲಿಫೋರ್ನಿಯಾದ ಸಮುದಾಯದೊಂದಿಗೆ ಒಟ್ಟಾಗಿ, ನಾವು ಎಂದಿಗೂ ದ್ವೇಷವನ್ನು ಬೇರುಬಿಡಲು ಬಿಡುವುದಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ.ಘಟನೆಯ ವಿವರಗಳನ್ನು ನೀಡದೆ, ನಮ ಸಾಮಾನ್ಯ ಮಾನವೀಯತೆ ಮತ್ತು ನಂಬಿಕೆಯು ಶಾಂತಿ ಮತ್ತು ಸಹಾನುಭೂತಿ ಮೇಲುಗೈ ಸಾಧಿಸುವುದನ್ನು ಖಚಿತಪಡಿಸುತ್ತದೆ ಎಂದು ಅದು ಹೇಳಿದೆ.

ಉತ್ತರ ಅಮೇರಿಕಾದ ಹಿಂದೂಗಳ ಒಕ್ಕೂಟ, ಉತ್ತರ ಅಮೆರಿಕದಲ್ಲಿ ಹಿಂದೂ ಧರ್ಮದ ತಿಳುವಳಿಕೆಯನ್ನು ಸುಧಾರಿಸಲು ಮೀಸಲಾಗಿರುವ ವಕೀಲರ ಗುಂಪು ಸಂಪೂರ್ಣ ತನಿಖೆಗೆ ಒತ್ತಾಯಿಸಿದೆ. ಖಾಲಿಸ್ತಾನ್ ಬೆಂಬಲದಿಂದ ಇದು ಸಂಭವಿಸಿದೆ ಎಂದರೆ ಆಶ್ಚರ್ಯವೇ ನಿಲ್ಲ ಎಂದು ಅದು ಹೇಳಿದೆ. ಕಳೆದ ಕೆಲವು ವರ್ಷಗಳಲ್ಲಿ ಧ್ವಂಸಗೊಂಡ ಅಥವಾ ಕಳ್ಳತನವಾಗಿರುವ 10 ದೇವಾ ಲಯಗಳ ಪಟ್ಟಿಯನ್ನು ನೀಡಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ, ಕ್ಯಾಲಿ ಫೋರ್ನಿಯಾದ ಸ್ಯಾಕ್ರಮೆಂಟೊದಲ್ಲಿರುವ ಹಿಂದೂ ದೇವಾಲಯವನ್ನು ಹಿಂದೂಗಳು ಹಿಂತಿರುಗಿ ಎಂದು ಗೀಚಲಾಗಿದೆ. ಸ್ಯಾಕ್ರಮೆಂಟೊ ಘಟನೆಯ ಸುಮಾರು 10 ದಿನಗಳ ಮೊದಲು, ನ್ಯೂಯಾರ್ಕ್‌ನ ಮೆಲ್‌ವಿಲ್ಲೆಯಲ್ಲಿರುವ ಮತ್ತೊಂದು ಶ್ರೀ ಸ್ವಾಮಿನಾರಾಯಣ ಮಂದಿರವನ್ನು ದ್ವೇಷ ಪೂರಿತ ಸಂದೇಶಗಳೊಂದಿಗೆ ವಿರೂಪಗೊಳಿಸಲಾಯಿತು. ಪ್ರಸ್ತುತ ನ್ಯೂಯಾರ್ಕ್‌ನಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಘಟನೆಯನ್ನು ತೀವ್ರವಾಗಿ ಖಂಡಿಸಿದೆ.

## ಪ್ರಯಾಗ್‌ರಾಜ್‌ಗೆ ಹರಿದುಬರುತ್ತಲೇ ಇದೆ ಭಕ್ತಸಾಗರ



**ಪ್ರಯಾಗ್ ರಾಜ್:** ಮಹಾಕುಂಭಮೇಳ ಅಧಿಕೃತವಾಗಿ ಮುಕ್ತಾಯಗೊಂಡ ನಂತರವೂ ಭಕ್ತರು ಪ್ರಯಾಗ್ ರಾಜ್ ಪ್ರದೇಶಕ್ಕೆ ಭೇಟಿ ನೀಡುತ್ತಲೇ ಇದ್ದಾರೆ. ಭಕ್ತರ ಸಂಖ್ಯೆ ಹೆಚ್ಚುತ್ತಿರುವುದರಿಂದ ಕೆಲವು ವ್ಯವಸ್ಥೆಗಳನ್ನು ವರ್ಷವಿಡೀ ಉಳಿಸಿಕೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಸಂಗಮ್ ಪ್ರದೇಶಕ್ಕೆ ಭೇಟಿ ನೀಡಿದ ಪ್ರಯಾಗ್ ರಾಜ್‌ನ ಕರ್ನಲ್ ಗಂಜ್ ಪ್ರದೇಶದ ನಿವಾಸಿ ನೀರಜ್ ಕೇಸರಿವಾನಿ, ಭಾರಿ ಜನಸಂದಣಿಯಿಂದಾಗಿ ನಾವು ಮಹಾ ಕುಂಭಕ್ಕೆ ಭೇಟಿ ನೀಡಲು ಸಾಧ್ಯವಾಗಲಿಲ್ಲ, ಇದು ನಿರಾಶೆಯಾಗಿದೆ. ಆದಾಗ್ಯೂ, ಆಹ್ಲಾದಕರ ಸಂಜೆಯ ಹವಾಮಾನ ಮತ್ತು ಸಂಗಮ್ ಪ್ರದೇಶವನ್ನು ಅಲಂಕರಿಸುವ ಎಲ್‌ಇಡಿ ದೀಪಗಳು ಜಾತ್ರೆ ಇನ್ನೂ ನಡೆಯುತ್ತಿದೆ ಎಂದು ಭಾವಿಸುವಂತೆ ಮಾಡುತ್ತದೆ ಎಂದಿದ್ದಾರೆ. ಭಾರಿ ಜನಸಂದಣಿಯಿಂದಾಗಿ ಮಹಾ ಕುಂಭಕ್ಕೆ ಭೇಟಿ ನೀಡದಿದ್ದ ಅನೇಕ ಜನರು ಈಗ ಸಂಗಮ್ ಪ್ರದೇಶಕ್ಕೆ ಹೋಗುತ್ತಿದ್ದಾರೆ.

ಜನದಟ್ಟಣೆಯ ವರದಿಗಳಿಂದಾಗಿ ನಾವು ಮೊದಲೇ ಬರಲು ಹಿಂಜರಿಯುತ್ತಿದ್ದೆವು. ಈಗ, ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ ನಂತರ, ನಾನು ಆಶೀರ್ವದಿಸಲ್ಪಟ್ಟಿದ್ದೇನೆ.

ಒಂದೇ ಒಂದು ವಿಷಾದವೆಂದರೆ ನಾವು ನಾಗಾ ಸಾಧುಗಳ ದೃಷ್ಟಿಯನ್ನು ಕಳೆದುಕೊಂಡಿದ್ದೇವೆ. ಸರ್ಕಾರದ ಸೌಂದರ್ಯೀಕರಣ ಪ್ರಯತ್ನಗಳನ್ನು ಮತ್ತಷ್ಟು ಶ್ಲಾಘಿಸಿದ ಅವರು, ಇಡೀ ಪ್ರಯಾಗ್ ರಾಜ್ ನಗರವು ಅದ್ಭುತವಾಗಿ ಕಾಣುತ್ತದೆ ಎಂದು ಕೆಲವರು ಹೇಳಿದ್ದಾರೆ.

ಒಂದು ಅಂದಾಜಿನ ಪ್ರಕಾರ ವರ್ಷವಿಡಿ ದೇಶದ ವಿವಿಧ ಭಾಗಗಳಿಂದ ಭಕ್ತಸಾಗರ ಪ್ರಯಾಗ್‌ರಾಜ್‌ಗೆ ಹರಿದುಬರಲಿದೆ ಎಂದು ವರದಿಯಾಗಿದೆ.

## ಕ್ಯಾಲಿಫೋರ್ನಿಯಾದ ಅತಿದೊಡ್ಡ ಹಿಂದೂ ದೇವಾಲಯ ಧ್ವಂಸ



**ವಾಷಿಂಗ್ಟನ್:** ದಕ್ಷಿಣ ಕ್ಯಾಲಿಫೋರ್ನಿಯಾದ ಅತಿದೊಡ್ಡ ಹಿಂದೂ ದೇವಾಲಯಗಳಲ್ಲಿ ಒಂದಾದ ಬಿಎಪಿಎಸ್ ಶ್ರೀ ಸ್ವಾಮಿನಾರಾಯಣ್ ಮಂದಿರವನ್ನು ವಿರೂಪಗೊಳಿಸಲಾಗಿದೆ. ಭಾರತ ವಿರೋಧಿ ಸಂದೇಶಗಳೊಂದಿಗೆ ದೇವಾಲಯವನ್ನು ಅಪವಿತ್ರಗೊಳಿಸಲಾಯಿತು.

ಕಳೆದ ಕೆಲವು ತಿಂಗಳುಗಳಲ್ಲಿ ಯುಎಸ್‌ನಲ್ಲಿ ಇಂತಹ ಮತ್ತೊಂದು ಘಟನೆ ನಡೆದಿದೆ. ಕ್ಯಾಲಿಫೋರ್ನಿಯಾದ ಚಿನೋ ಹಿಲ್ಸ್‌ನಲ್ಲಿರುವ ದೇವಾಲಯವನ್ನು, ಹಿಂದೂ ಸಮುದಾಯದ ವಿರುದ್ಧ ದ್ವೇಷದ ಬರಹದೊಂದಿಗೆ ಅಪವಿತ್ರಗೊಳಿಸಲಾಗಿದೆ ಎಂದು ಬಿಎಪಿಎಸ್ ತಿಳಿಸಿವೆ.

ಸಮುದಾಯವು ದ್ವೇಷವನ್ನು ಬೇರೂರಲು ಎಂದಿಗೂ ಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಈ ಘಟನೆಯ ಬಗ್ಗೆ ಚಿನೋ ಹಿಲ್ಸ್ ಪೊಲೀಸ್ ಇಲಾಖೆ ಇನ್ನೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಕ್ಯಾಲಿಫೋರ್ನಿಯಾದ ಸ್ಯಾಕ್ರಮೆಂಟೊದಲ್ಲಿ ನಡೆದ ಬಿಎಪಿಎಸ್ ಶ್ರೀ ಸ್ವಾಮಿನಾರಾಯಣ್ ಮಂದಿರವನ್ನು ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಧ್ವಂಸಗೊಳಿಸಲಾಗಿತ್ತು.

ದ್ವೇಷದ ಸಂದೇಶಗಳನ್ನು ದೇವಾಲಯದ ಚಿಹ್ನೆಯ ಮೇಲೆ ಬರೆಯಲಾಗಿದೆ. ಸ್ಯಾಕ್ರಮೆಂಟೊ ಘಟನೆಗೆ ಸುಮಾರು 10 ದಿನಗಳ ಮೊದಲು, ನ್ಯೂಯಾರ್ಕ್‌ನ ಮೆಲ್ವಿಲ್ಲೆಯಲ್ಲಿರುವ ಮತ್ತೊಂದು ಬಿಎಪಿಎಸ್ ಶ್ರೀ ಸ್ವಾಮಿನಾರಾಯಣ್ ಮಂದಿರವನ್ನು ದ್ವೇಷದ ಸಂದೇಶಗಳಿಂದ ವಿರೂಪಗೊಳಿಸಲಾಗಿತ್ತು. ನ್ಯೂಯಾರ್ಕ್‌ನ ಭಾರತದ ಕಾನ್ಸುಲೇಟ್ ಜನರಲ್ ಈ ಘಟನೆಯನ್ನು ಬಲವಾಗಿ ಖಂಡಿಸಿದ್ದಾರೆ. ಇದು ಸ್ವೀಕಾರಾರ್ಹವಲ್ಲ ಎಂದು ಹೇಳಿದ್ದಾರೆ.

## ಎರಡು ದಿನದಲ್ಲಿ ಸಾವಿರಕ್ಕೂ ಅಧಿಕ ಮಂದಿ ಸಾವು



### ಸಿರಿಯಾದಲ್ಲಿ ಪ್ರತೀಕಾರದ ಹತ್ಯೆ

**ಬೈರುತ್:** ಸಿರಿಯನ್ ಭದ್ರತಾ ಪಡೆಗಳು ಮತ್ತು ಪದಚ್ಯುತ ಅಧ್ಯಕ್ಷ ಬಷರ್ ಅಸ್ಸಾದ್ ಅವರ ನಿಷ್ಠಾವಂತರ ನಡುವಿನ ಎರಡು ದಿನಗಳ ಕಾಳಗದಲ್ಲಿ ಸೇಡಿನ ಹತ್ಯೆಗಳಲ್ಲಿ ಮೃತಪಟ್ಟ ನಾಗರಿಕರ ಸಂಖ್ಯೆ ಸಾವಿರಕ್ಕೂ ಅಧಿಕವಾಗಿದೆ ಎಂದು ಯುದ್ಧ ಮೇಲ್ವಿಚಾರಣಾ ಗುಂಪು ತಿಳಿಸಿದೆ, ಇದು 14 ವರ್ಷಗಳ ಹಿಂದೆ ಸಿರಿಯಾದ ಸಂಘರ್ಷ ಪ್ರಾರಂಭವಾದಾಗಿನಿಂದ ನಡೆದ ಅತ್ಯಂತ ಮಾರಕ ಹಿಂಸಾಚಾರಗಳಲ್ಲಿ ಒಂದಾಗಿದೆ.

ಬ್ರಿಟನ್ ಮೂಲದ ಸಿರಿಯನ್ ಮಾನವ ಹಕ್ಕುಗಳ ವೀಕ್ಷಣಾಲಯವು, 745 ನಾಗರಿಕರು ಮೃತಪಟ್ಟಿದ್ದಾರೆ. ಹತ್ತಿರದಿಂದ ನಡೆದ ಗುಂಡಿನ ದಾಳಿಯಲ್ಲಿ, 125 ಸರ್ಕಾರಿ ಭದ್ರತಾ ಪಡೆ ಸದಸ್ಯರು, ಅಸ್ಸಾದ್‌ಗೆ ಸಂಬಂಧಿಸಿದ ಸಶಸ್ತ್ರ ಗುಂಪುಗಳೊಂದಿಗೆ 148 ಉಗ್ರರು ಮೃತಪಟ್ಟಿದ್ದಾರೆ ಎಂದು ಹೇಳಿದೆ. ಲಟಾಕಿಯಾ ನಗರದ ಸುತ್ತಮುತ್ತಲಿನ ದೊಡ್ಡ ಪ್ರದೇಶಗಳಲ್ಲಿ ವಿದ್ಯುತ್ ಮತ್ತು ಕುಡಿಯುವ ನೀರನ್ನು ಕಡಿತಗೊಳಿಸಲಾಗಿದೆ ಎಂದು ಅದು ಹೇಳಿದೆ.

ಕಳೆದ ಗುರುವಾರ ಭುಗಿಲೆದ್ದ ಘರ್ಷಣೆಗಳಿಂದ ಅಸ್ಸಾದ್ ಅವರನ್ನು ಅಧಿಕಾರದಿಂದ ತೆಗೆದುಹಾಕಿದ ನಂತರ ದಂಗೆಕೋರರು ಅಧಿಕಾರ ವಹಿಸಿಕೊಂಡ ಮೂರು ತಿಂಗಳ ನಂತರ, ಡಮಾಸ್ಕಸ್‌ನಲ್ಲಿ ಹೊಸ ಸರ್ಕಾರಕ್ಕೆ ಪ್ರಮುಖ ಸಮಸ್ಯೆಗಳು ಉಂಟಾದವು.

**ಸುನ್ನಿಗಳು, ಅಲಾವೈಟ್‌ಗಳ ನಡುವಿನ ಪ್ರತೀಕಾರದ ಹತ್ಯೆಗಳು:** ಅಸ್ಸಾದ್‌ನ ಅಲ್ಪಸಂಖ್ಯಾತ ಅಲಾವೈಟ್ ಪಂಥದ ಸದಸ್ಯರ ವಿರುದ್ಧ ಸರ್ಕಾರಕ್ಕೆ ನಿಷ್ಠರಾಗಿರುವ ಸುನ್ನಿ ಮುಸ್ಲಿಂ ಬಂದೂಕುಧಾರಿಗಳು ಪ್ರಾರಂಭಿಸಿದ ಸೇಡಿನ ಹತ್ಯೆಗಳು, ಹಿಂದಿನ ಸರ್ಕಾರವನ್ನು ಉರುಳಿಸಲು ಕಾರಣವಾದ ಹಯಾತ್ ತಹ್ರಿರ್ ಅಲ್-ಶಾಮ್ ಬಣಕ್ಕೆ ದೊಡ್ಡ ಹೊಡೆತವಾಗಿದೆ. ದಶಕಗಳಿಂದ ಅಲಾವೈಟ್‌ಗಳು ಅಸ್ಸಾದ್‌ನ ಬೆಂಬಲ ನೆಲೆಯ ದೊಡ್ಡ ಭಾಗವಾಗಿದ್ದರು.

ಬಂದೂಕುಧಾರಿಗಳು ಅಲಾವೈಟ್‌ಗಳನ್ನು, ಅವರಲ್ಲಿ ಹೆಚ್ಚಿನವರು ಪುರುಷರನ್ನು ಬೀದಿಗಳಲ್ಲಿ ಅಥವಾ ಅವರ ಮನೆಗಳ ದ್ವಾರಗಳಲ್ಲಿ ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ. ಅಲಾವೈಟ್‌ಗಳ ಅನೇಕ ಮನೆಗಳನ್ನು ಲೂಟಿ ಮಾಡಲಾಗಿದೆ. ವಿವಿಧ ಪ್ರದೇಶಗಳಲ್ಲಿ ಬೆಂಕಿ ಹಚ್ಚಲಾಯಿತು ಎಂದು ಸಿರಿಯಾದ ಕರಾವಳಿ ಪ್ರದೇಶದ ಇಬ್ಬರು ನಿವಾಸಿಗಳು ತಮ್ಮ ಅಡಗುತಾಣಗಳಿಂದ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಬಂದೂಕುಧಾರಿಗಳಿಂದ ಕೊಲ್ಲಲ್ಪಡುವ ಭಯದಿಂದ ತಮ್ಮ ಹೆಸರುಗಳನ್ನು ಬಹಿರಂಗಪಡಿಸಬಾರದು ಎಂದು ಅವರು ಕೇಳಿಕೊಂಡರು, ಸಾವಿರಾರು ಜನರು ಸುರಕ್ಷತೆಗಾಗಿ ಹತ್ತಿರದ ಪರ್ವತಗಳಿಗೆ ಪಲಾಯನ ಮಾಡಿದರು.

## ಧನಕರ್‌ಜೀ ಉತ್ತಮ ಆರೋಗ್ಯಕ್ಕಾಗಿ ಪ್ರಾರ್ಥಿಸುತ್ತೇನೆ



**ನವದೆಹಲಿ:** ಎದೆನೋವು ಕಾಣಿಸಿಕೊಂಡು ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಆಸ್ಪತ್ರೆಗೆ ದಾಖಲಾದ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ದೆಹಲಿಯ ಏಮ್ಸ್‌ಗೆ ಭೇಟಿ ನೀಡಿದ್ದಾರೆ. ಈ ವೇಳೆ ಧನಕರ್ ಅವರ ಆರೋಗ್ಯ ವಿಚಾರಿಸಿದ್ದಾರೆ.

ಈ ಕುರಿತು ತಮ್ಮ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಮೋದಿ, ಏಮ್ಸ್‌ಗೆ ಹೋಗಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಜೀ ಅವರ ಆರೋಗ್ಯ ವಿಚಾರಿಸಿದೆ. ಅವರ ಉತ್ತಮ ಆರೋಗ್ಯ ಮತ್ತು ಶೀಘ್ರ ಚೇತರಿಕೆಗಾಗಿ ನಾನು ಪ್ರಾರ್ಥಿಸುತ್ತೇನೆ ಎಂದು ಬರೆದುಕೊಂಡಿದ್ದಾರೆ. 73 ವಯಸ್ಸಿನ ಜಗದೀಪ್ ಧನಕರ್ ಅವರಿಗೆ ಎದೆನೋವು ಕಾಣಿಸಿಕೊಂಡ ಹಿನ್ನೆಲೆ ನಸುಕಿನ 2 ಗಂಟೆ ಸುಮಾರಿಗೆ ಆಸ್ಪತ್ರೆಗೆ ದಾಖಲಿಸಲಾಯಿತು. ಎಐಐಎಂಎಸ್‌ನಲ್ಲಿ ಹೃದ್ರೋಗ ವಿಭಾಗದ ಮುಖ್ಯಸ್ಥ ಡಾ.ರಾಜೀವ್ ನಾರಾಂಗ್ ಅವರು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಧನಕರ್ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ವೈದ್ಯರ ತಂಡವು ಅವರ ಆರೋಗ್ಯವನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುತ್ತಿದೆ.

## ಅಜಾನ್ ವೇಳೆ ಜೋರಾಗಿ ಧ್ವನಿವರ್ಧಕ ಬಳಕೆ, ಇಮಾಮ್ ವಿರುದ್ಧ ಎಫ್‌ಐಆರ್



**ಸಂಭಾಲ್:** ಉತ್ತರ ಪ್ರದೇಶದಲ್ಲಿ ಅಬ್ಬರದ ಅಜಾನ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ಸಂಭಾಲ್ ಹಿಂಸಾಚಾರದ ನಂತರ, ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಸಂಭಾಲ್‌ನ ಶಾಹಿ ಜಾಮಾ ಮಸೀದಿಯಲ್ಲಿ ಧ್ವನಿವರ್ಧಕದ ಮೂಲಕ ಜೋರಾಗಿ ಅಜಾನ್ ಹಾಕಲಾಗಿತ್ತು.

ಈ ಸಂಬಂಧ ಸಂಭಾಲ್‌ನ ಚಂದೌಸಿ ಪ್ರದೇಶದಲ್ಲಿ ಪೊಲೀಸರು ಮಸೀದಿಯ ಇಮಾಮ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೆ ಧ್ವನಿವರ್ಧಕವನ್ನು ವಶಪಡಿಸಿಕೊಂಡಿದ್ದಾರೆ. ಭಾನುವಾರ, ಸಂಭಾಲ್ ಪೊಲೀಸ್ ಠಾಣೆಯ ಚಂದೌಸಿ ಪ್ರದೇಶದಿಂದ ಹೊಸ ಪ್ರಕರಣ ಬೆಳಕಿಗೆ ಬಂದಿದೆ. ನ್ಯಾಯಾಲಯ ಮತ್ತು ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಮಸೀದಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಅಜಾನ್ ನೀಡಿದ ಇಮಾಮ್ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಕಾನ್ಸ್‌ಟೇಬಲ್‌ಗಳಾದ ಜಿತೇಂದ್ರ ಕುಮಾರ್, ಅರುಣ್ ಕುಮಾರ್ ಅವರು ಶನಿವಾರ ಸಂಜೆ ತಡರಾತ್ರಿಯಿಂದ ರಾತ್ರಿಯವರೆಗೆ ಚಂದೌಸಿ ಕೊಟ್ವಾಲಿ ಪ್ರದೇಶದ ಅಡಿಯಲ್ಲಿ ಮೊಹಲ್ಲಾ ಪಂಜಾಬಿಯನ್ ಸೇರಿದಂತೆ ಇಡೀ ಪ್ರದೇಶದಲ್ಲಿ ಗಸ್ತು ತಿರುಗುತ್ತಿದ್ದರು, ಆಗ ಮಸೀದಿಯಿಂದ ಲೌಡ್ ಸ್ಪೀಕರ್‌ನಲ್ಲಿ ಅಜಾನ್ ಶಬ್ದ ಬರಲು ಆರಂಭಿಸಿತ್ತು. ಮಸೀದಿಯಲ್ಲಿ ಅಳವಡಿಸಲಾದ ಧ್ವನಿವರ್ಧಕವನ್ನು ಪರಿಶೀಲಿಸಲಾಯಿತು. ಪೊಲೀಸರು ಧ್ವನಿವರ್ಧಕವನ್ನು ತೆಗೆದು ವಶಪಡಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಇಮಾಮ್ ಹಫೀಜ್ ಶಕೀಲ್ ಶಮ್ಸಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

## 11 ವರ್ಷದ ಮಗಳ ಮೇಲೆ ಅತ್ಯಾಚಾರ ಎಸಗಿದ ತಂದೆ ಅರೆಸ್ಟ್




**ಲಕ್ನೋ:** ತನ್ನ 11 ವರ್ಷದ ಮಗಳ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಬಂಧಿಸಿರುವ ಘಟನೆ ಉತ್ತರ ಪ್ರದೇಶದ ಮಹಾರಾಜ್‌ಗಂಜ್‌ನಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಸಂತ್ರಸ್ತೆಯ ತಾಯಿ ತನ್ನ ತವರು ಮನೆಗೆ ಹೋಗಿದ್ದಾಗ ಘಟನೆ ನಡೆದಿದೆ ಎಂದು ಕೊತ್ವಾಲಿ ಪೊಲೀಸ್ ಠಾಣೆಯ ಎಸ್‌ಹೆಚ್‌ಒ ಸತ್ಯೇಂದ್ರ ಕುಮಾರ್ ರೈ ತಿಳಿಸಿದ್ದಾರೆ.

ತನ್ನ ಮಗಳ ಮೇಲೆ ಅತ್ಯಾಚಾರ ಎಸಗಿರುವುದಲ್ಲದೇ ಯಾರಿಗಾದ್ರೂ ಹೇಳಿದ್ರೆ, ವಿಷ ನೀಡಿ ಸಾಯಿಸುವುದಾಗಿ ಬೆದರಿಕೆ ಸಹ ಹಾಕಿದ್ದಾನೆ. ಆದ್ರೆ ತಾಯಿ ತವರು ಮನೆಯಿಂದ ಬಂದ ಬಳಿಕ ಬಾಲಕಿ ಈ ವಿಷಯ ಹೇಳಿಕೊಂಡಿದ್ದಾಳೆ. ನಂತರ ಬಾಲಕಿ ತಾಯಿ ಪೊಲೀಸರಿಗೆ ದೂರು ನೀಡಿದ್ದಾರೆ. ಮಹಿಳೆಯ ದೂರಿನ ಆಧಾರದ ಮೇಲೆ, ಆರೋಪಿ ತಂದೆಯನ್ನ ಬಂಧಿಸಲಾಗಿದೆ ಮತ್ತು ಬಾಲಕಿಯನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ರೈ ಹೇಳಿದ್ದಾರೆ.

### ಕುಲಭೂಷಣ್ ಜಾಧವ್ ಅಪಹರಣ ಪ್ರಕರಣ; ISIಗೆ ಸಹಾಯ ಮಾಡಿದ್ದಾತ ಅಪರಿಚಿತರ ಗುಂಡೇಟಿಗೆ ಬಲಿ

# ವಿಧ್ವಂಸನ ಸೋಗಿನಲ್ಲಿ ಮಾನವ ಕಳ್ಳಸಾಗಣೆಯಲ್ಲಿ ಭಾಗಿ

**ಬಲೂಚಿಸ್ತಾನ:** ಭಾರತೀಯ ನೌಕಾಪಡೆಯ ಮಾಜಿ ಅಧಿಕಾರಿ ಕುಲಭೂಷಣ್ ಜಾಧವ್ ಅವರನ್ನು ಇರಾನ್‌ನಿಂದ ಅಪಹರಿಸಲು ಪಾಕಿಸ್ತಾನದ ಐಎಸ್‌ಐಗೆ ಸಹಾಯ ಮಾಡಿದ ಆರೋಪ ಹೊತ್ತಿದ್ದ ಮುಫ್ತಿ ಶಾ ಮಿರ್ ಬಲೂಚಿಸ್ತಾನದ ಟರ್ಬತ್‌ನಲ್ಲಿ ಅಪರಿಚಿತ ಬಂದೂಕುಧಾರಿಗಳ ಗುಂಡಿಗೆ ಕಳೆದ ಶುಕ್ರವಾರ (ಮಾ.7) ಬಲಿಯಾಗಿದ್ದಾನೆ ಎಂದು ವರದಿಯಾಗಿದೆ.

ಮಾನವ ಕಳ್ಳಸಾಗಣೆಯಲ್ಲಿ ಭಾಗಿಯಾಗಿರುವ ಆರೋಪ ಹೊತ್ತಿರುವ ಮುಫ್ತಿ ಶಾ ಮಿರ್ ರಾತ್ರಿ ಪ್ರಾರ್ಥನೆ ಮುಗಿಸಿ ಸ್ಥಳೀಯ ಮಸೀದಿಯಿಂದ ಹೊರಡುತ್ತಿದ್ದಾಗ, ಬೈಕ್‌ನಲ್ಲಿ ಬಂದ ಅಪರಿಚಿತರು ನಿರಂತರ ಗುಂಡಿನ ದಾಳಿ ನಡೆಸಿದ್ದಾರೆ. ವರದಿಯ ಪ್ರಕಾರ, ಮುಫ್ತಿ ಶಾ ಮಿರ್‌ನನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಗಂಭೀರ ಗಾಯಗೊಂಡಿದ್ದ ಮುಫ್ತಿ ಅಷ್ಟರಲ್ಲಾಗಲೆ ಮೃತಪಟ್ಟಿದ್ದ.

ವಿಧ್ವಂಸನ ಸೋಗಿನಲ್ಲಿದ್ದ ಮುಫ್ತಿ ಶಾ ಮಿರ್ ಮಾನವ ಮತ್ತು ಶಸ್ತ್ರಾಸ್ತ್ರ ಕಳ್ಳಸಾಗಣೆ ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದ. ಜತೆಗೆ ಇಸ್ಲಾಮಿಕ್ ಮೂಲಭೂತ ವಾದಿ ರಾಜಕೀಯ ಪಕ್ಷವಾದ ಜಮಿಯತ್ ಉಲೇಮಾ-ಇ-ಇಸ್ಲಾಂನ ಸದಸ್ಯನಾಗಿದ್ದ. ಕಳೆದ ವರ್ಷ ಮಿರ್ ಮೇಲೆ ಎರಡು ಬಾರಿ ಹತ್ಯೆ ದಾಳಿ ನಡೆದಿತ್ತು. ಆಗ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದ.

### ನಿರಂತರ ಗುಂಡಿನ ದಾಳಿ

**ಭಾರತೀಯ ನೌಕಾಪಡೆಯ ಮಾಜಿ ಅಧಿಕಾರಿ ಕುಲಭೂಷಣ್ ಜಾಧವ್ ಅವರನ್ನು ಇರಾನ್‌ನಿಂದ ಅಪಹರಿಸಲು ಪಾಕಿಸ್ತಾನದ ಐಎಸ್‌ಐಗೆ ಸಹಾಯ ಮಾಡಿದ ಆರೋಪ ಹೊತ್ತಿದ್ದ ಮುಫ್ತಿ ಶಾ ಮಿರ್ ಬಲೂಚಿಸ್ತಾನದ ಟರ್ಬತ್‌ನಲ್ಲಿ ಅಪರಿಚಿತ ಬಂದೂಕುಧಾರಿಗಳ ಗುಂಡಿಗೆ ಕಳೆದ ಶುಕ್ರವಾರ ಬಲಿಯಾಗಿದ್ದಾನೆ ಎಂದು ವರದಿಯಾಗಿದೆ. ಮಾನವ ಕಳ್ಳಸಾಗಣೆಯಲ್ಲಿ ಭಾಗಿಯಾಗಿರುವ ಆರೋಪ ಹೊತ್ತಿರುವ ಮುಫ್ತಿ ಶಾ ಮಿರ್ ರಾತ್ರಿ ಪ್ರಾರ್ಥನೆ ಮುಗಿಸಿ ಸ್ಥಳೀಯ ಮಸೀದಿಯಿಂದ ಹೊರಡುತ್ತಿದ್ದಾಗ, ಬೈಕ್‌ನಲ್ಲಿ ಬಂದ ಅಪರಿಚಿತರು ನಿರಂತರ ಗುಂಡಿನ ದಾಳಿ ನಡೆಸಿದ್ದಾರೆ.**



ಮುಫ್ತಿಯಲ್ಲಿ ಕೃತ್ಯ ಎಸಗುತ್ತಿದ್ದ ಈತ ಐಎಸ್‌ಐ ನೇತೃತ್ವದ ಡೆತ್ ಸ್ಕ್ವಾಡ್‌ಗಳೊಂದಿಗೆ ಸಂಪರ್ಕ ಹೊಂದಿದ್ದ. ಬಲೂಚಿಸ್ತಾನದ ಹಲವಾರು ಯುವಕರ ಅಪಹರಣ ಮತ್ತು ವಿವಿಧ ಕಾನೂನುಬಾಹಿರ ಹತ್ಯೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಬಲೂಚಿಸ್ತಾನದಲ್ಲಿ ಧಾರ್ಮಿಕ ಉಗ್ರವಾದವನ್ನು ಹರಡುವಲ್ಲಿಯೂ ಸಹ ತೊಡಗಿಸಿಕೊಂಡಿದ್ದ ಎಂದು ವರದಿಯಾಗಿದೆ.

2016ರ ಮಾರ್ಚ್‌ನಲ್ಲಿ ಜೈಶ್ ಅಲ್-ಅದ್ಲ್‌ನ ಮುಲ್ಲಾ ಒಮರ್ ಇರಾನಿ ನೇತೃತ್ವದ ಗುಂಪು ಭಾರತೀಯ ನೌಕಾಪಡೆಯ ಮಾಜಿ ಅಧಿಕಾರಿ ಕುಲಭೂಷಣ್ ಜಾಧವ್ ಅವರನ್ನು ಇರಾನ್-ಪಾಕಿಸ್ತಾನ ಗಡಿಯಿಂದ ಅಪಹರಿಸಿತ್ತು. ಮುಫ್ತಿ ಶಾ ಮಿರ್ ಸೇರಿದಂತೆ ಹಲವು ಮಧ್ಯವರ್ತಿಗಳ ಮೂಲಕ ಪಾಕಿಸ್ತಾನ ಸೇನೆಗೆ ಹಸ್ತಾಂತರಿಸಲಾಗಿತ್ತು.

ನೌಕಾಪಡೆಯಿಂದ ಅಕಾಲಿಕ ನಿವೃತ್ತಿಯ ನಂತರ ಚಬಹಾರ್‌ನಲ್ಲಿ ವ್ಯಾಪಾರ ನಡೆಸುತ್ತಿದ್ದ ಕುಲಭೂಷಣ್ ಜಾಧವ್ ಅವರನ್ನು ಅಪಹರಿಸಿ ಪಾಕಿಸ್ತಾನದಲ್ಲಿ ಸುಳ್ಳು ಆರೋಪಗಳ ಮೇಲೆ ಬಂಧಿಸಲಾಯಿತು. 2016ರ ಮಾರ್ಚ್ 3 ರಂದು ಪಾಕಿಸ್ತಾನ-ಅಫ್ಘಾನಿಸ್ತಾನ ಗಡಿಯಲ್ಲಿರುವ ಬಲೂಚಿಸ್ತಾನದ ಚಮನ್ ಪ್ರದೇಶದಲ್ಲಿ ಅವರನ್ನು ಸೆರೆ ಹಿಡಿಯಲಾಯಿತು. 2017ರ ಏಪ್ರಿಲ್‌ನಲ್ಲಿ ಪಾಕಿಸ್ತಾನದ ಮಿಲಿಟರಿ ನ್ಯಾಯಾಲಯವು ಜಾಧವ್ ಅವರಿಗೆ ಗೂಢಚರ್ಯೆ ಮತ್ತು ವಿಧ್ವಂಸಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆಂದು ಆರೋಪಿಸಿ ಮರಣದಂಡನೆ ವಿಧಿಸಿತು. ಈ ತೀರ್ಪನ್ನು ಭಾರತ ಖಂಡಿಸಿತ್ತು.

ಮರಣ ದಂಡನೆಯನ್ನು ಅಂತಾರಾಷ್ಟ್ರೀಯ ನ್ಯಾಯಾಲಯ ತಡೆಹಿಡಿದಿದೆ. ದೋಷಾರೋಪಣೆ ಪ್ರಕ್ರಿಯೆಯನ್ನು ಪರಿಶೀಲಿಸುವಂತೆ ಮತ್ತು ಭಾರತಕ್ಕೆ ಕಾನ್ಸುಲರ್ ಪ್ರವೇಶವನ್ನು ನೀಡುವಂತೆ ಪಾಕಿಸ್ತಾನ ಸರ್ಕಾರಕ್ಕೆ ಸೂಚಿಸಿದೆ.

ಮಿರ್ ಬಲೂಚ್ ಹೋರಾಟಗಾರರ ಬಗ್ಗೆ ಪಾಕ್ ಸೇನೆಗೆ ಗುಪ್ತಚರ ಮಾಹಿತಿ ನೀಡುತ್ತಿದ್ದ. 2023ರಲ್ಲಿ ಅಬ್ದುಲ್ ರೌಫ್ ಎಂಬ ಶಿಕ್ಷಕರೊಬ್ಬರನ್ನು ದೇವರ ಬಗ್ಗೆ ದೂಷಣೆ ಮಾಡಿದ್ದಾರೆ ಎಂದು ಆರೋಪ ಹೊರಿಸಿ ಹತ್ಯೆ ಮಾಡಲಾಗಿತ್ತು. ಮಿರ್ ಸೂಚನೆಯ ಮೇರೆಗೆ ಈ ಹತ್ಯೆ ನಡೆದಿದೆ ಹೇಳಲಾಗುತ್ತಿದೆ.

### ಐಎಸ್‌ಐ ಕಾರ್ಯಕರ್ತರಿಂದ ಹತ್ಯೆ?

**ಐಎಸ್‌ಐ ಸಂಘಟನೆ ಕಾರ್ಯಕರ್ತರೇ ಮಿರ್‌ರನ್ನು ಹತ್ಯೆ ಮಾಡಿದ್ದಾರೆ ಎಂದು ಶಂಕಿಸಲಾಗಿದೆ. ಕಳೆದ ಕೆಲ ಸಮಯದಿಂದ ಐಎಸ್‌ಐನಲ್ಲಿ ಆಂತರಿಕ ಸಂಘರ್ಷ ನಡೆಯುತ್ತಿದೆ. ಕಳೆದ ವಾರ, ಈನ ವಡೇರಾ ಗುಲಾಮ್ ಸರ್ವರ್ ಮತ್ತು ಮೌಲ್ವಿ ಅಮಾನುಲ್ಲಾ ದುಷ್ಕರ್ಮಿಗಳ ಗುಂಡೇಟಿಗೆ ಬಲಿಯಾಗಿದ್ದರು. ಅಪರಿಚಿತರು ಇಬ್ಬರನ್ನು ಗುರಿಯಾಗಿಸಿ ನಡೆಸಿದ ಹತ್ಯೆ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ. ಕಳೆದ ವರ್ಷ ಮಿರ್ ಮೇಲೆ ಎರಡು ಬಾರಿ ಹತ್ಯಾ ಪ್ರಯತ್ನಗಳು ನಡೆದಿದ್ದವು.**

## ಮಿನಿ ನ್ಯೂಸ್

### ರೈಲು ಡಿಕ್ಕಿ ಹೊಡೆದರೂ ಬದುಕುಳಿದ ಕುಡುಕ..!

**ನವದೆಹಲಿ:** ಫುಲ್ ಟೈಟ್ ಆಗಿ ರೈಲು ಹಳಿ ಮೇಲೆ ಮಲಗಿದ್ದ ವ್ಯಕ್ತಿಗೆ ರೈಲು ಡಿಕ್ಕಿ ಹೊಡೆದರೂ ಆತ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಪೆರುವಿನಲ್ಲಿ ನಡೆದಿದೆ. ರೈಲು ಹಳಿಗಳ ಮೇಲೆ ಮಲಗಿದ್ದ ವ್ಯಕ್ತಿಯೊಬ್ಬ ಶನಿವಾರ ಸರಕು ರೈಲಿಗೆ ಡಿಕ್ಕಿ ಹೊಡೆದ ನಂತರ ಹೇಗೋ ಬದುಕುಳಿದಿದ್ದಾನೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ. ಕುಡಿದ ಮತ್ತಿನಲ್ಲಿ ಹಳಿ ಮೇಲೆ ಮಲಗಿದ್ದ ವ್ಯಕ್ತಿ ಮೇಲೆ ರೈಲು ಹಾದು ಹೋದರೂ ಆತ ಪವಾಡ ಸದೃಶ್ಯದಂತೆ ಬದುಕುಳಿದ್ದಾನೆ ಎಂದು ಲಿಮಾ ಪ್ರಾಂತ್ಯದ ಅಟೆ ಪಟ್ಟಣದ ಭದ್ರತಾ ಅಧಿಕಾರಿ ಜನರಲ್ ಜೇವಿಯರ್ ಅವಲೋಸ್ ತಿಳಿಸಿದ್ದಾರೆ. ಅವರು ಅಮಲಿನಲ್ಲಿದ್ದರು. ರೈಲು ಹಳಿಗಳ ಉದ್ದಕ್ಕೂ ನಿದ್ರೆಗೆ ಜಾರಿದ್ದರು ಮತ್ತು ರೈಲು ಬರುವುದನ್ನು ಗಮನಿಸಲಿಲ್ಲ ಎಂದು ಅವಾಲೋಸ್ ಹೇಳಿದರು. ಪೆರುವಿಯನ್ ಆಂಡಿಸ್ ಕಡೆಗೆ ನಿಯಮಿತವಾಗಿ ಚಲಿಸುತ್ತಿದ್ದ ರೈಲು 28 ವರ್ಷದ ಜುವಾನ್ ಕಾರ್ಲೋಸ್ ಟೆಲೊಗೆ ಡಿಕ್ಕಿ ಹೊಡೆದಿದೆ.

ಕಣ್ಗಾವಲು ತುಣುಕಿನಲ್ಲಿ ಲೋಕೋಮೋಟಿವ್ ರೈಲು ಯುವಕನನ್ನು ಹಲವಾರು ಮೀಟರ್ ದೂರ ಎಳೆಯುತ್ತಿರುವುದನ್ನು ತೋರಿಸುತ್ತದೆ. ಆದರೂ ಅವರ ಎಡಗೈಗೆ ಸಣ್ಣ ಗಾಯಗಳಾಗಿವೆ ಎಂದು ಅವಾಲೋಸ್ ಹೇಳಿದರು. ಈ ರೈಲು ಮಾರ್ಗದಲ್ಲಿ ಅಪಘಾತಗಳು ಸಾಮಾನ್ಯವಾಗಿದೆ.

### ತಲೆಮರೆಸಿಕೊಂಡಿದ್ದ ಉಗ್ರನ ಸೆರೆ ಹಿಡಿದ ಯುಪಿ ಪೊಲೀಸರು

**ಮೊರಾದಾಬಾದ್:** ಉತ್ತರ ಪ್ರದೇಶ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಮತ್ತು ಕತ್ತರ್ ಪೊಲೀಸರು ಜಂಟಿ ಕಾರ್ಯಾಚರಣೆಯಲ್ಲಿ ಹಿಜ್ಬುಲ್ ಮುಜಾಹಿದ್ದೀನ್ ಭಯೋತ್ಪಾದಕನನ್ನು ಬಂಧಿಸಿದ್ದಾರೆ. ಕಳೆದ 17 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಉಗ್ರನನ್ನು ಜಮ್ಮು ಮತ್ತು ಕಾಶ್ಮೀರದ ಪೂಂಚ್‌ನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಂಧಿತ ಭಯೋತ್ಪಾದಕನನ್ನು ಉಲ್ಫತ್ ಹುಸೇನ್ ಎಂದು ಗುರುತಿಸಲಾಗಿದ್ದು, ಆತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. 2002ರಲ್ಲಿ ಇತರ ನಾಲ್ವರೊಂದಿಗೆ ಆತನನ್ನು ಬಂಧಿಸಿ 2008ರಲ್ಲಿ ಬಿಡುಗಡೆ ಮಾಡಲಾಗಿತ್ತು ಎಂದು ಎಸ್ಪಿ ರಣವಿಜಯ್ ಸಿಂಗ್ ತಿಳಿಸಿದ್ದಾರೆ.

ಎಟಿಎಸ್ ಸಹರಾನ್ಪುರ, ಕತ್ತರ್ ಪೊಲೀಸರ ಜಂಟಿ ಕಾರ್ಯಾಚರಣೆ ಯಲ್ಲಿ, ಹಿಜ್ಬುಲ್ ಮುಜಾಹಿದ್ದೀನ್‌ಗೆ ಸೇರಿದ ಭಯೋತ್ಪಾದಕ ಉಲ್ಫತ್ ಹುಸೇನ್ ಅವರನ್ನು ನಿನ್ನೆ ಪೂಂಚ್ ಜಿಲ್ಲೆಯಿಂದ ಬಂಧಿಸಲಾಯಿತು ಮತ್ತು ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದು ಅವರು ಮಾಹಿತಿ ನೀಡಿದ್ದಾರೆ. 2002ರಲ್ಲಿ ಇತರ ನಾಲ್ವರೊಂದಿಗೆ ಆತನನ್ನು ಬಂಧಿಸಲಾಗಿದ್ದು, ಆತನಿಂದ ಭಾರಿ ಪ್ರಮಾಣದ ಡಿಟೋನೇಟರ್‌ಗಳು, ಸ್ಫೋಟಕಗಳು, ಪಿಸ್ತೂಲ್ ಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಇದಲ್ಲದೆ, ಹುಸೇನ್ ಅವರನ್ನು 2008 ರಲ್ಲಿ ರಿಮಾಂಡ್ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ; ಆದಾಗ್ಯೂ, ಅವರ ವಿರುದ್ಧ ಸಮನ್ಸ್ ಮತ್ತು ವಾರಂಟ್‌ಗಳನ್ನು ಹೊರಡಿಸಲಾಗಿದ್ದರೂ ಆತ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ.

### ರೋಗ ಪತ್ತೆ ಹಚ್ಚುತ್ತಿರುವ ಎಐ ಎಕ್ಸ್-ರೇ ಯಂತ್ರಗಳು

**ಗೋರಖ್‌ಪುರ:** ರೋಗ ಪತ್ತೆ ಹಚ್ಚುವಲ್ಲಿಯೂ ಕೃತಕ ಬುದ್ದಿಮತ್ತೆ ಪರಿಣಾಮಕಾರಿಯಾಗಿ ಪರಿಣಮಿಸತೊಡಗಿದೆ. ರೋಗವನ್ನು ಮುಂಚಿತವಾಗಿ ಪತ್ತೆಹಚ್ಚುವಲ್ಲಿ ಎಐ-ಶಕ್ತಗೊಂಡ ಹ್ಯಾಂಡ್-ಹೆಲ್ಡ್ ಎಕ್ಸ್-ರೇ ಯಂತ್ರಗಳು ಗೇಮ್ ಚೇಂಜರ್‌ಗಳಾಗಿ ಹೊರಹೊಮ್ಮುತ್ತಿದೆ ಎಂದು ಉತ್ತರಪ್ರದೇಶದ ವೈದ್ಯರು ತಿಳಿಸಿದ್ದಾರೆ. ಕೃತಕ ಬುದ್ಧಿಮತ್ತೆಯೂ ಉತ್ತರ ಪ್ರದೇಶದಲ್ಲಿ 6.8 ಲಕ್ಷ ರೋಗಿಗಳನ್ನು ಪತ್ತೆಹಚ್ಚಲು ಮತ್ತು ಸೂಚನೆ ನೀಡಲು ಅನುವು ಮಾಡಿಕೊಡುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 2024 ರಲ್ಲಿ ಅಧಿಸೂಚನೆ ಹೊರಡಿಸಿದ 6.8 ಲಕ್ಷ ಪ್ರಕರಣಗಳಲ್ಲಿ, ಈ ರೋಗಿಗಳಲ್ಲಿ 4.29 ಲಕ್ಷ ಸಾರ್ವಜನಿಕ ವಲಯದಿಂದ ಮತ್ತು 2.5 ಲಕ್ಷ ಖಾಸಗಿ ವಲಯದಿಂದ ಅಧಿಸೂಚಿಸಲಾಗಿದೆ.

ದೇಶದಿಂದ ರೋಗವನ್ನು ನಿರ್ಮೂಲನೆ ಮಾಡುವ ಪ್ರಯತ್ನಗಳನ್ನು ವೇಗಗೊಳಿಸುವ ಗುರಿಯನ್ನು ಹೊಂದಿರುವ ಕ್ಷಯರೋಗವನ್ನು ನಿರ್ಮೂಲನೆ ಮಾಡಲು ನಡೆಯುತ್ತಿರುವ ಪ್ಯಾನ್ ಇಂಡಿಯಾ 100 ದಿನಗಳ ತೀವ್ರಗೊಳಿಸಿದ ಅಭಿಯಾನದ ಅಡಿಯಲ್ಲಿ ಈ ಎಐ-ಶಕ್ತ ಕೈಯಲ್ಲಿ ಹಿಡಿಯುವ ಎಕ್ಸ್-ರೇ ಯಂತ್ರಗಳು ತೀವ್ರವಾದ ತಪಾಸಣೆಗೆ ಸಹಾಯ ಮಾಡುತ್ತಿವೆ. ಕೇಂದ್ರ ಆರೋಗ್ಯ ಸಚಿವಾಲಯದ ಸಹಯೋಗದೊಂದಿಗೆ ಐಸಿಎಂಆರ್ ನಡೆಸಿದ ಭಾರತದಲ್ಲಿ ರಾಷ್ಟ್ರೀಯ ಟಿಬಿ ಹರಡುವಿಕೆ ಸಮೀಕ್ಷೆ (2019-2021) ಪ್ರಕಾರ, ಕ್ಷ-ಕಿರಣಗಳು ಕ್ಷಯರೋಗಕ್ಕೆ ನಿರ್ಣಾಯಕ ಸ್ಕ್ರೀನಿಂಗ್ ಸಾಧನವಾಗಿದೆ. ಏಕೆಂದರೆ ಎಕ್ಸ್-ರೇ ಮೂಲಕ ಪರೀಕ್ಷಿಸದಿದ್ದರೆ ರೋಗದ ಶೇಕಡಾ 42.6 ರಷ್ಟು ಪ್ರಕರಣಗಳು ತಪ್ಪಿಹೋಗುತ್ತವೆ.

### ಮುಂಬೈನಲ್ಲಿ ಗ್ಯಾಸ್ ಪೈಪ್ ಲೈನ್ ಸೋರಿಕೆಯಾಗಿ ಬೆಂಕಿ ಅವಘಡ



**ಮುಂಬೈ:** ಮುಂಬೈನ ಅಂಧೇರಿ ಪ್ರದೇಶದ ರಸ್ತೆಯೊಂದರಲ್ಲಿ ಸೋರಿಕೆಯಾದ ಗ್ಯಾಸ್ ಪೈಪ್ ಲೈನ್‌ಗೆ ಮುಂಜಾನೆ ಬೆಂಕಿ ಹೊತ್ತಿಕೊಂಡ ಪರಿಣಾಮ ಮೂವರು ಗಾಯಗೊಂಡಿದ್ದಾರೆ. ಅಂಧೇರಿ (ಪೂರ್ವ) ಪ್ರದೇಶದ ತಕ್ಷಿಲಾದಲ್ಲಿ ಗುರುದ್ವಾರದ ಸಮೀಪವಿರುವ ಶೇರ್, ಇ-ಪಂಜಾಬ್ ಸೊಸೈಟಿಯ ರಸ್ತೆಯ ಮಧ್ಯದಲ್ಲಿ ಹಾದುಹೋದ ಮಹಾನಗರ ಗ್ಯಾಸ್ ಲಿಮಿಟೆಡ್‌ನ ಸರಬರಾಜು ಪೈಪ್ ಲೈನ್‌ನಲ್ಲಿ 12.35 ಕ್ಕೆ ಬೆಂಕಿ ಕಾಣಿಸಿಕೊಂಡಿದೆ ಎಂದು ಅಗ್ನಿಶಾಮಕ ಅಧಿಕಾರಿ ತಿಳಿಸಿದ್ದಾರೆ.

ಇದು ಲೆವೆಲ್ -ಒನ್ ಬೆಂಕಿಯಾಗಿದ್ದು, ಮೂವರು ಗಾಯಗೊಂಡಿದ್ದಾರೆ ಎರಡು ವಾಹನ ಹಾನಿಯಾಗಿದೆ ಎಂದು ಹೇಳಿದರು. ನೀರಿನ ಟ್ಯಾಂಕರ್, ಅಗ್ನಿಶಾಮಕ ವಾಹನ ಮತ್ತು ಇತರ ನೆರವಿನೊಂದಿಗೆ ಸ್ಥಳಕ್ಕೆ ಧಾವಿಸಲಾಯಿತು ಸುಮಾರು 1.34 ಕ್ಕೆ ಬೆಂಕಿಯನ್ನು ನಂದಿಸಲಾಗಿದೆ, ಬೆಂಕಿಗೆ ನಿಖರವಾದ ಕಾರಣವನ್ನು ಇನ್ನೂ ತಿಳಿದುಬಂದಿಲ್ಲ ಎಂದರು.



# ಚಿತ್ರತಾರೆ ಶ್ರೀಲೀಲಾಗೆ ಮೆಗಾಸ್ಟಾರ್ ಕಡೆಯಿಂದ ಸ್ಪೆಷಲ್ ಗಿಫ್ಟ್

ಕನ್ನಡತಿ ಶ್ರೀಲೀಲಾ ಸದ್ಯ ಟಾಲಿವುಡ್‌ನಲ್ಲಿ ಬೇಡಿಕೆಯ ನಟಿಯಾಗಿದ್ದಾರೆ. ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಿರುವ ಶ್ರೀಲೀಲಾಗೆ ಮೆಗಾಸ್ಟಾರ್ ಚಿರಂಜೀವಿ ಕಡೆಯಿಂದ ವಿಶೇಷ ಉಡುಗೊರೆ ಸಿಕ್ಕಿದೆ.

ಮಹಿಳಾ ದಿನಾಚರಣೆಯ ಪ್ರಯುಕ್ತ ಚಿರಂಜೀವಿ ಅವರು 'ವಿಶ್ವಂಭರ' ಸಿನಿಮಾದ ಸೆಟ್‌ನಲ್ಲಿದ್ದರು. ಈ ವೇಳೆ, ಸೆಟ್‌ನಲ್ಲಿ ಶ್ರೀಲೀಲಾಗೆ ದುಬಾರಿ ಉಡುಗೊರೆಯೊಂದನ್ನು ಕೊಟ್ಟಿದ್ದಾರೆ. ದುರ್ಗಾ ದೇವಿಯ ಮುಖವಿರುವ ಬೆಳ್ಳಿ ಶಂಖವನ್ನು ನಟಿಗೆ ಗಿಫ್ಟ್ ಆಗಿ ನೀಡಿದ್ದಾರೆ. ಅದಕ್ಕೆ ಶ್ರೀಲೀಲಾ ಕೂಡ ಸೋಶಿಯಲ್ ಮೀಡಿಯಾದಲ್ಲಿ ಚಿರಂಜೀವಿ ಜೊತೆಗಿನ ಫೋಟೋ ಶೇರ್ ಮಾಡಿ ಥ್ಯಾಂಕ್ಯೂ ಎಂದಿದ್ದಾರೆ.

ಇನ್ನೂ 'ವಿಶ್ವಂಭರ' ಸಿನಿಮಾ ಸೆಟ್‌ನಲ್ಲಿ ಪಿಂಕ್ ಕಲರ್ ಡ್ರೆಸ್‌ನಲ್ಲಿ ಶ್ರೀಲೀಲಾ ಗ್ಲ್ಯಾಮರಸ್ ಆಗಿ ಕಾಣಿಸಿಕೊಂಡಿರೋದು ಚರ್ಚೆಗೆ ಗ್ರಾಸವಾಗಿದೆ. ಅವರು ಕೂಡ ಈ ಸಿನಿಮಾದಲ್ಲಿ ನಟಿಸುತ್ತಿದ್ದಾರಾ. ಈ ಚಿತ್ರವು ಮೇ 9ರಂದು ರಿಲೀಸ್ ಆಗಲಿದ್ದು, ಅಂದು ಶ್ರೀಲೀಲಾ ಇರುವಿಕೆಯ ಬಗ್ಗೆ ಉತ್ತರ ಸಿಗಲಿದೆ. ನಿತಿನ್ ಜೊತೆ 'ರಾಬಿನ್‌ಹುಡ್', ಪವನ್ ಕಲ್ಯಾಣ್ ಜೊತೆ 'ಉಸ್ತಾದ್ ಭಗತ್ ಸಿಂಗ್', ರವಿತೇಜ ಜೊತೆ 'ಮಾಸ್ ಜಾತ್ರಾ', ಬಾಲಿವುಡ್‌ನಲ್ಲಿ ಸೈಫ್ ಅಲಿ ಖಾನ್‌ಗೆ ನಾಯಕಿಯಾಗಿದ್ದಾರೆ.

# 'ಜೊತೆಯಲಿ ಇರುವೆನು ಹೀಗೆ ಎಂದು'
## ಪತ್ನಿಗಾಗಿ ಹಾಡು ಹಾಡಿದ ಯಶ್




ಸ್ಯಾಂಡಲ್‌ವುಡ್ ನಟಿ ರಾಧಿಕಾ ಪಂಡಿತ್‌ಬರ್ತ್‌ಡೇ ಪಾರ್ಟಿಯಲ್ಲಿ ಪತಿ ಯಶ್ ಅವರು ಹಾಡೊಂದನ್ನು ಹಾಡಿದ್ದಾರೆ. ಶಂಕರ್‌ನಾಗ್ ನಟನೆಯ ಸಿನಿಮಾದ ಹಾಡನ್ನು ಪತ್ನಿಯ ಹುಟ್ಟುಹಬ್ಬದಂದು ಪ್ರೀತಿಯಿಂದ ಹಾಡಿದ್ದಾರೆ. ಪತಿ ಯಶ್ 'ಜೊತೆಯಲಿ ಇರುವೆನು ಹೀಗೆ' ಎಂದು ಹಾಡಿದ ಹಾಡನ್ನು ಸೋಶಿಯಲ್ ಮೀಡಿಯಾದಲ್ಲಿ ರಾಧಿಕಾ ಹಂಚಿಕೊಂಡಿದ್ದಾರೆ.

ಯಶ್ ಅವರು 'ಜೊತೆಯಲಿ ಜೊತೆ ಜೊತೆಯಲಿ' ಹಾಡನ್ನು ಹಾಡಿದ್ದಾರೆ. ಪತಿ ತಮಗಾಗಿ ಹಾಡು ಹಾಡಿದ ವಿಡಿಯೋವನ್ನು ರಾಧಿಕಾ ಪಂಡಿತ್ ಶೇರ್ ಮಾಡಿದ್ದಾರೆ. ಯಶ್ ಹಾಡುವಾಗ ರಾಧಿಕಾ ಸಖತ್ ಆಗಿ ಎಂಜಾಯ್ ಮಾಡಿದ್ದಾರೆ. ಯಾವಾಗಲೂ ಇದು ನಮ್ಮ ಹಾಡು. ಈಗಲೂ ಇದನ್ನು ಕೇಳಿದಾಗ ನನ್ನ ಹೃದಯ ಓಡುತ್ತದೆ ಎಂದು ರಾಧಿಕಾ ಅವರು ರೆಡ್ ಹಾರ್ಟ್ ಎಮೋಜಿ ಹಾಕಿ ದೃಷ್ಟಿ ಎಮೋಜಿಯನ್ನು ಹಾಕಿದ್ದಾರೆ. ಈ ಜೋಡಿಯ ನಡುವಿನ ಪ್ರೀತಿ ನೋಡಿ ಫ್ಯಾನ್ಸ್ ಹಾಡಿ ಹೊಗಳಿದ್ದಾರೆ. ಅಂದಹಾಗೆ, ರಾಧಿಕಾ ಪಂಡಿತ್ ಅವರು ಮಾರ್ಚ್ 7ರಂದು ಹುಟ್ಟುಹಬ್ಬದ ಹಿನ್ನೆಲೆ ಬೆಂಗಳೂರಿನ ತಮ್ಮ ನಿವಾಸದಲ್ಲಿ ಅಭಿಮಾನಿಗಳ ಜೊತೆ ಬರ್ತ್‌ಡೇ ಆಚರಿಸಿಕೊಂಡಿದ್ದರು.


ಆ ನಂತರ ಖಾಸಗಿ ಹೋಟೆಲ್‌ವೊಂದರಲ್ಲಿ ಗ್ರ್ಯಾಂಡ್ ಆಗಿ ಪತ್ನಿಯ ಹುಟ್ಟುಹಬ್ಬವನ್ನು ಆಪ್ತರ ಸಮ್ಮುಖದಲ್ಲಿ ಯಶ್ ಆಯೋಜಿಸಿದ್ದಾರೆ. ಲೈಟ್ ಕಲರ್ ಡ್ರೆಸ್‌ನಲ್ಲಿ ನಟಿ ಮಿಂಚಿದ್ದಾರೆ. ಕುಟುಂಬದ ಜೊತೆ ಕೇಕ್ ಕತ್ತರಿಸಿ ಸಂಭ್ರಮಿಸಿದ್ದಾರೆ.

# ನಿರ್ದೇಶನದತ್ತ ರಾಧಿಕಾ ಆಪ್ಟೆ

ಬಾಲಿವುಡ್ ಬೆಡಗಿ ಕಂಗನಾ ರಣಾವತ್, ಪೂಜಾ ಭಟ್, ಕೊಂಕಣ್ ಸೇನ್, ನಂದಿತಾ ದಾಸ್ ಹಾದಿಯನ್ನೇ ನಟಿ ರಾಧಿಕಾ ಆಪ್ಟೆ ಅನುಸರಿಸುತ್ತಿದ್ದಾರೆ. ನಟಿಯಾಗಿ ಗೆದ್ದಿದ್ದ ರಾಧಿಕಾ ಈಗ ನಿರ್ದೇಶನದತ್ತ ಒಲವು ತೋರಿಸಿದ್ದಾರೆ. ಆಯಕ್ಷನ್ ಕಮ್ ಫ್ಯಾಂಟಸಿ ಚಿತ್ರಕ್ಕೆ ಡೈರೆಕ್ಷನ್ ಮಾಡಲು ಹೊರಟಿದ್ದಾರೆ. ನಟನೆಯ ಜೊತೆ ನಿರ್ದೇಶನ ಮಾಡಲು ರಾಧಿಕಾ ದಿಟ್ಟ ನಿರ್ಧಾರ ಮಾಡಿದ್ದಾರೆ. ತಮ್ಮ ನಿರ್ದೇಶನದ ಪ್ರಾಜೆಕ್ಟ್‌ಗೆ 'ಕೋಟ್ಯ' ಎಂದು ಹೆಸರಿಡಲಾಗಿದೆ. ಹಿಂದಿ ಹಾಗೂ ಮರಾಠಿ ಭಾಷೆಯಲ್ಲಿ ಸಿನಿಮಾ ಮೂಡಿ ಬರಲಿದೆ. ನಿರ್ದೇಶನದ ಮೊದಲ ಸಿನಿಮಾದಲ್ಲೇ ಆಕ್ಷನ್ ಕಮ್ ಫ್ಯಾಂಟಸಿ ಕಥೆ ಹೇಳೋಕೆ ಹೊರಟಿದ್ದಾರೆ. ಕಬ್ಬು ಕಡಿಯುವ ವಲಸೆ ಕಾರ್ಮಿಕಳೊಬ್ಬಳು ವೈದ್ಯಕೀಯ ಚಿಕಿತ್ಸೆಯಿಂದ ಅಸಾಧಾರಣ ಶಕ್ತಿ ಪಡೆಯುತ್ತಾಳೆ. ಇದರಿಂದ ತನ್ನ ಕುಟುಂಬವನ್ನು ಸಾಲದಿಂದ ಹೇಗೆ ಮುಕ್ತಗೊಳಿಸುತ್ತಾಳೆ ಎಂಬುದು ಚಿತ್ರದ ಆನ್‌ಲೈನ್ ಕಥೆಯಾಗಿದೆ. ಈ ಮಹಿಳಾ ಪ್ರಧಾನ ಚಿತ್ರವನ್ನು ನಿರ್ದೇಶನ ವಿಕ್ರಮಾದಿತ್ಯ ಮೋಟ್ವಾನೆ ನಿರ್ಮಾಣ ಮಾಡಲಿದ್ದಾರೆ. ಹಿಂದಿಯ ಪ್ಯಾಡ್‌ಮ್ಯಾನ್, ಅಂಧಾದುನ್, ಸೇರಿದಂತೆ ಹಲವು ಸಿನಿಮಾಗಳಲ್ಲಿ ರಾಧಿಕಾ ನಟಿಸಿದ್ದಾರೆ.



## ಒಟ್ಟಿಗೆ ಕಾಣಿಸಿಕೊಂಡು ಇಂಟರ್‌ನೆಟ್‌ಗೆ
# ಬೆಂಕಿ ಹಚ್ಚಿದ ಮಾಜಿ ಲವ್ ಬರ್ಡ್ಸ್



ಬಾಲಿವುಡ್ ನಟ ಶಾಹಿದ್ ಕಪೂರ್ ಹಾಗೂ ಮಾಜಿ ಪ್ರೇಯಸಿ ಕರೀನಾ ಕಪೂರ್ ಒಂದೇ ವೇದಿಕೆಯಲ್ಲಿ ಜೊತೆಯಾಗಿ ಕಾಣಿಸಿಕೊಂಡಿದ್ದಾರೆ

ಮಾಜಿ ಲವ್ ಬರ್ಡ್ಸ್ ಒಟ್ಟಾಗಿ ಕಾಣಿಸಿಕೊಂಡು ಇಂಟರ್‌ನೆಟ್‌ಗೆ ಬೆಂಕಿ ಹಚ್ಚಿದ್ದಾರೆ. ಜೈಪುರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ನಟ ಶಾಹಿದ್ ಕಪೂರ್, ಕರಣ್ ಜೋಹರ್ ಮತ್ತು ಕರೀನಾ ಕಪೂರ್ ಖಾನ್ ಒಂದೇ ವೇದಿಕೆಗೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಮಾಜಿ ಲವ್ ಬರ್ಡ್ಸ್ ಒಬ್ಬರನೊಬ್ಬರನ್ನು ನೋಡಿ ನಕ್ಕಿದ್ದಾರೆ. ಬ್ರೇಕಪ್ ಆದ್ಮೇಲೆ ಹಲವು ವರ್ಷಗಳ ಬಳಿಕ ಹಳೆಯ ಪ್ರೇಮಿಗಳು ಮೊದಲ ಬಾರಿಗೆ ಹೀಗೆ ಸಾರ್ವಜನಿಕವಾಗಿ ಬಹಳ ಆತ್ಮೀಯವಾಗಿದ್ದುದ್ದನ್ನು ಕಂಡು ಫ್ಯಾನ್ಸ್ ಖುಷಿಪಟ್ಟಿದ್ದಾರೆ. ಶೋ ಮುಗಿದ ಬಳಿಕ ಮಾಧ್ಯಮಕ್ಕೆ ಶಾಹಿದ್ ಕಪೂರ್ ಮಾತನಾಡಿ, ಇದು ನಮಗೆ ಹೊಸತೇನಲ್ಲ. ಒಂದಲ್ಲಾ ಒಂದು ಕಾರ್ಯಕ್ರಮದಲ್ಲಿ ಅಥವಾ ಆಗಾಗ ನಾವು ಆಗಾಗ ಸಿಗುತ್ತೇವೆ ಎಂದು ಹೇಳಿದ್ದಾರೆ. ಅಂದಹಾಗೆ, 2004ರಲ್ಲಿ ಬಾಲಿವುಡ್ 'ಫಿದಾ' ಸಿನಿಮಾದಲ್ಲಿ ಜೊತೆಯಾಗಿ ನಟಿಸಿದ್ದರು. ಈ ವೇಳೆ, ಇಬ್ಬರಿಗೂ ಪ್ರೇಮಾಂಕುರವಾಗಿತ್ತು. 2008ರಲ್ಲಿ 'ಜಬ್ ವಿ ಮೆಟ್' ವೇಳೆ ಇಬ್ಬರ ನಡುವೆ ಮನಸ್ತಾಪ ಉಂಟಾಯ್ತು. ಬಳಿಕ ಶಾಹಿದ್ ಅವರು ಮೀರಾ ಕಪೂರ್ ಅವರನ್ನು ಮದುವೆಯಾದರು. ಕರೀನಾ ಅವರು ಸೈಫ್ ಅಲಿ ಖಾನ್ ಜೊತೆ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.



# ಕನ್ನಡಕ್ಕೆ ಬಾಲಿವುಡ್ ಡೈರೆಕ್ಟರ್



ದಕ್ಷಿಣ ಸಿನಿರಂಗದತ್ತ ಬಾಲಿವುಡ್ ತಾರಾ ದಂಡು ಒಬ್ಬೊಬ್ಬರಾಗಿ ಹೆಜ್ಜೆ ಹಾಕುತ್ತಿರುವುದು ಹೊಸ ವಿಷಯವಲ್ಲ. ಈಗಾಗಲೇ ಅನೇಕ ಸಿನಿಮೇಕರ್ಸ್, ಸ್ಟಾರ್ಸ್ ಕಾಲಿವುಡ್, ಸ್ಯಾಂಡಲ್‌ವುಡ್, ಟಾಲಿವುಡ್‌ನಲ್ಲಿ ಧೂಳ್ ಎಬ್ಬಿಸುತ್ತಿದ್ದಾರೆ. ಇದೀಗ ಹೊಸ ಸೇರ್ಪಡೆ ಬಾಲಿವುಡ್ ಖ್ಯಾತ ನಿರ್ದೇಶಕ ಅನುರಾಗ್ ಕಶ್ಯಪ್. ಅನುರಾಗ್ ಕಶ್ಯಪ್ ದಕ್ಷಿಣದ ಕಡೆಗೆ ಬಂದಾಗಿದೆ. ತಮಿಳಿನ 'ಮಹಾರಾಜ' ಚಿತ್ರದಲ್ಲಿ ಅದ್ಭುತ ಪಾತ್ರದಲ್ಲಿ ಗಮನ ಸೆಳೆದಿದ್ದಾರೆ. ಈ ಮೂಲಕ ತಮಿಳು ಪ್ರೇಕ್ಷಕರನ್ನ ರಂಜಿಸಿದ್ದಾರೆ. ತೆಲುಗಿನ 'ಡಕಾಯಿತ್' ಚಿತ್ರದಲ್ಲಿ ಪೊಲೀಸ್ ಆಫೀಸರ್ ಪಾತ್ರದಲ್ಲಿ ನಟಿಸುತ್ತಿರುವ ಅವರೀಗ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಹಾಸ್ಯ ನಟ-ನಿರ್ದೇಶಕ ಸುಜಯ್ ಶಾಸ್ತ್ರಿ ಈ ಚಿತ್ರವನ್ನ ಡೈರೆಕ್ಷನ್ ಮಾಡುತ್ತಿದ್ದಾರೆ. ಈ ಮೂಲಕ ಒಂದು ಒಳ್ಳೆಯ ಕಥೆಯನ್ನ ಹೇಳುತ್ತಿದ್ದಾರೆ. '8' ಸಿನಿಮಾದ ಟೈಟಲ್ ಲಾಂಚ್ ಕಾರ್ಯಕ್ರಮ ಬೆಂಗಳೂರಿನಲ್ಲಿ ನಡೆಯಿತು. ಈ ವೇಳೆ, ನಿರ್ದೇಶಕ ಕಮ್ ನಟ ಅನುರಾಗ್ ಕಶ್ಯಪ್ ಮಾತನಾಡಿ, ಇದೊಂದು ಎಮೋಷನಲ್ ಕಥೆ. ಜೀವನ ಎಲ್ಲರಿಗೂ ಎರಡನೇ ಅವಕಾಶ ನೀಡುತ್ತದೆ. ಈ ಚಿತ್ರ ಕೂಡ ಅದನ್ನೇ ಹೇಳುತ್ತದೆ. ಈ ಸಿನಿಮಾದ ಭಾಗವಾಗಿರೋದಕ್ಕೆ ಅರವಿಂದ್ ಹಾಗೂ ಸುಜಯ್ ಶಾಸ್ತ್ರಿಗೆ ಧನ್ಯವಾದ ಎಂದರು.

ಕನ್ನಡದ '8' ಎಂಬ ಚಿತ್ರದಲ್ಲಿ ಅನುರಾಗ್ ಕಶ್ಯಪ್ ನಟಿಸುತ್ತಿದ್ದಾರೆ. ಹಾಸ್ಯನಟ ಸುಜಯ್ ಶಾಸ್ತ್ರೀ ಈ ಚಿತ್ರದ ಸಾರಥಿ. ಎವಿಆರ್ ಎಂಟರ್‌ಟೈನ್‌ಮೆಂಟ್ ಬ್ಯಾನರ್ ಅಡಿಯಲ್ಲಿ ಅರವಿಂದ್ ವೆಂಕಟೇಶ್ ರೆಡ್ಡಿ ಚಿತ್ರಕ್ಕೆ ಹಣ ಹೂಡುತ್ತಿದ್ದಾರೆ. ಫುಟ್‌ಬಾಲ್ ಆಟದ ಸುತ್ತ ನಡೆಯುವ ಕಥೆ '8' ಚಿತ್ರದಲ್ಲಿದೆ. ಕನ್ನಡ ಚಿತ್ರರಂಗಕ್ಕೆ ಸದಾ ಅಭಿರುಚಿ ಸಿನಿಮಾಗಳನ್ನು ನೀಡುವ ಉದ್ದೇಶದಿಂದ ಶುರುವಾಗಿರುವ ಎವಿಆರ್ ಚೊಚ್ಚಲ ಕಾಣಿಕೆ 8.

# ಸತತ ಸೋಲುಗಳೊಂದಿಗೆ ಐಪಿಎಲ್‌ನಿಂದ ಹೊರಬಿದ್ದ ಆರ್‌ಸಿಬಿ

ವುಮೆನ್ಸ್ ಪ್ರೀಮಿಯರ್ ಲೀಗ್‌ನ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಐಪಿಎಲ್‌ನಿಂದ ಹೊರಬಿದ್ದಿದೆ. ಅದು ಸಹ ಸತತ ಐದು ಸೋಲುಗಳೊಂದಿಗೆ. ಅಂದರೆ ಮುಂಬೈ ಇಂಡಿಯನ್ಸ್ ವಿರುದ್ಧದ ಕೊನೆಯ ಪಂದ್ಯಕ್ಕೂ ಮುನ್ನವೇ ಆರ್‌ಸಿಬಿ ತಂಡ ವುಮೆನ್ಸ್ ಪ್ರೀಮಿಯರ್ ಲೀಗ್‌ನಿಂದ ಹೊರಬಿದ್ದಿದೆ.

ಮೊದಲೆರಡು ಪಂದ್ಯಗಳಲ್ಲಿ ಜಯ ಆ ಬಳಿಕ ಸತತ 5 ಸೋಲು ಇದು ಈ ಬಾರಿಯ ವುಮೆನ್ಸ್ ಪ್ರೀಮಿಯರ್ ಲೀಗ್‌ನಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರದರ್ಶನ. ಅದರಲ್ಲೂ ನಿರ್ಣಾಯಕವಾಗಿದ್ದ ಯುಪಿ ವಾರಿಯರ್ಸ್ ವಿರುದ್ಧದ ಪಂದ್ಯದಲ್ಲೂ ಆರ್‌ಸಿಬಿ ಮುಗ್ಗರಿಸಿದೆ.

**ಆರ್‌ಸಿಬಿ ಪ್ರದರ್ಶನ**

**ಈ ಬಾರಿಯ ವುಮೆನ್ಸ್ ಪ್ರೀಮಿಯರ್ ಲೀಗ್‌ನ ಮೊದಲ ಪಂದ್ಯದಲ್ಲಿ ಆರ್‌ಸಿಬಿ ತಂಡ 6 ವಿಕೆಟ್‌ಗಳ ಜಯ ಸಾಧಿಸಿತ್ತು. ಇನ್ನು ತನ್ನ ದ್ವಿತೀಯ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ 8 ವಿಕೆಟ್‌ಗಳ ಸೋಲುಣಿಸಿತ್ತು. ಆದರೆ ಈ ಎರಡು ಗೆಲುವುಗಳ ಬಳಿಕ ಆರ್‌ಸಿಬಿ ಪಡೆ ಮುಂಬೈ ಇಂಡಿಯನ್ಸ್, ಗುಜರಾತ್ ಜೈಂಟ್ಸ್, ಡೆಲ್ಲಿ ಕ್ಯಾಪಿಟಲ್ಸ್, ಯುಪಿ ವಾರಿಯರ್ಸ್ (2 ಪಂದ್ಯ) ವಿರುದ್ಧದ ಪಂದ್ಯಗಳಲ್ಲಿ ಸತತ ಸೋಲುಂಡಿದೆ. ಈ ಸೋಲುಗಳೊಂದಿಗೆ ಆರ್‌ಸಿಬಿ ತಂಡದ ಪ್ಲೇಆಫ್ ಪ್ರವೇಶಿಸುವ ಕನಸು ಕೂಡ ಕೊನೆಗೊಂಡಿದೆ.**

ಈ ಸೋಲಿನೊಂದಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಐಪಿಎಲ್ 2025 ರಿಂದ ಹೊರಬಿದ್ದಿದೆ. ಲಕ್ನೋನ ಏಕಾನ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಯುಪಿ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ದಾಖಲೆಯ 225 ರನ್ ಕಲೆಹಾಕಿತು.

ಈ ಕಠಿಣ ಗುರಿಯನ್ನು ಬೆನ್ನತ್ತಿದ ಆರ್‌ಸಿಬಿ ಪರ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ನಿರೀಕ್ಷಿತ ಪ್ರದರ್ಶನ ನೀಡಿರಲಿಲ್ಲ. ಇದಾಗ್ಯೂ ಮಧ್ಯಮ ಕ್ರಮಾಂಕದಲ್ಲಿ ರಿಚಾ ಘೋಷ್ 33 ಎಸೆತಗಳಲ್ಲಿ 69 ರನ್ ಚಚ್ಚಿದ್ದರು. ಇನ್ನು ಕೊನೆಯ ಹಂತದಲ್ಲಿ ಸ್ನೇಹ್ ರಾಣಾ 6 ಎಸೆತಗಳಲ್ಲಿ 26 ರನ್ ಬಾರಿಸಿದರು. ಪರಿಣಾಮ ಕೊನೆಯ ಓವರ್‌ನಲ್ಲಿ ಆರ್‌ಸಿಬಿ ತಂಡಕ್ಕೆ 15 ರನ್‌ಗಳು ಬೇಕಿತ್ತು. ಆದರೆ ಕಿಮ್ ಗಾರ್ತ್ ರನೌಟ್ ಆಗುವುದರೊಂದಿಗೆ ಆರ್‌ಸಿಬಿ ತಂಡವು 19.3 ಓವರ್‌ಗಳಲ್ಲಿ 213 ರನ್‌ಗಳಿಸಿ ಇನಿಂಗ್ಸ್ ಅಂತ್ಯಗೊಳಿಸಿದೆ. ಈ ಮೂಲಕ ಯುಪಿ ವಾರಿಯರ್ಸ್ ತಂಡವು 12 ರನ್‌ಗಳ ಜಯ ಸಾಧಿಸಿದೆ.

**ಆರ್‌ಸಿಬಿ ಸೋಲು-ಮುಂಬೈ ಪ್ಲೇಆಫ್‌ಗೆ:**

ಇತ್ತ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಸೋಲುತ್ತಿದ್ದಂತೆ ಅತ್ತ ಅಂಕ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದ ಮುಂಬೈ ಇಂಡಿಯನ್ಸ್ ತಂಡವು ಪ್ಲೇಆಫ್‌ಗೆ ಅರ್ಹತೆ ಪಡೆದುಕೊಂಡಿದೆ. ಏಕೆಂದರೆ ಮುಂಬೈ ಇಂಡಿಯನ್ಸ್ ಒಟ್ಟು 8 ಅಂಕಗಳನ್ನು ಪಡೆದುಕೊಂಡಿದ್ದು, ಆರ್‌ಸಿಬಿ ತಂಡ ತನ್ನ ಕೊನೆಯ ಪಂದ್ಯದಲ್ಲಿ ಗೆದ್ದರೂ 6 ಅಂಕಗಳನ್ನು ಮಾತ್ರ ಹೊಂದಲಿದೆ.



# ಸ್ನೇಹ್ ರಾಣಾ ಸಿಡಿಲಬ್ಬರ




ವುಮೆನ್ಸ್ ಪ್ರೀಮಿಯರ್ ಲೀಗ್‌ನ 18ನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ವಿರೋಚಿತವಾಗಿ ಸೋಲುಂಡಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಯುಪಿ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 225 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಆರ್‌ಸಿಬಿ ತಂಡವು 18 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 183 ರನ್ ಕಲೆಹಾಕಿತ್ತು. ಈ ಹಂತದಲ್ಲಿ 10ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಸ್ನೇಹ್ ರಾಣಾ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿ ಆರ್‌ಸಿಬಿ ತಂಡಕ್ಕೆ ಗೆಲುವಿನ ಆಸೆ ಚಿಗುರಿಸಿದ್ದರು.

ಯುಪಿ ವಾರಿಯರ್ಸ್ ತಂಡದ ನಾಯಕಿ ದೀಪ್ತಿ ಶರ್ಮಾ ಎಸೆದ 19ನೇ ಓವರ್‌ನಲ್ಲಿ 2 ಫೋರ್ ಹಾಗೂ 3 ಸಿಕ್ಸ್‌ಗಳನ್ನು ಚಚ್ಚುವ ಮೂಲಕ ಸ್ನೇಹ್ ರಾಣಾ ಅಬ್ಬರಿಸಿದರು. ಪರಿಣಾಮ ದೀಪ್ತಿ ಶರ್ಮಾ ಓವರ್‌ನಲ್ಲಿ ಬರೋಬ್ಬರಿ 28 ರನ್‌ಗಳು ಮೂಡಿಬಂದವು.

ಆದರೆ 19ನೇ ಓವರ್‌ನ ಕೊನೆಯ ಎಸೆತದಲ್ಲಿ ಸ್ನೇಹ್ ರಾಣಾ ಔಟಾದರು. ಪರಿಣಾಮ ಆರ್‌ಸಿಬಿ ತಂಡವು 19.3 ಓವರ್‌ಗಳಲ್ಲಿ 213 ರನ್‌ಗಳಿಸಿ 12 ರನ್‌ಗಳಿಂದ ವಿರೋಚಿತವಾಗಿ ಸೋಲೊಪ್ಪಿಕೊಳ್ಳಬೇಕಾಯಿತು. ಈ ಸೋಲಿನೊಂದಿಗೆ ಆರ್‌ಸಿಬಿ ತಂಡವು ವುಮೆನ್ಸ್ ಪ್ರೀಮಿಯರ್ ಲೀಗ್‌ನ ಪ್ಲೇಆಫ್ ರೇಸ್‌ನಿಂದ ಹೊರಬಿದ್ದಿದೆ.

**ದಾಖಲೆಗಳು**

**ವುಮೆನ್ಸ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲೇ ಒಂದೇ ಓವರ್‌ನಲ್ಲಿ ಅತ್ಯಧಿಕ ರನ್ ಬಾರಿಸಿದ ಬ್ಯಾಟರ್ ಎಂಬ ದಾಖಲೆ ಸ್ನೇಹ್ ರಾಣಾ ಪಾಲಾಗಿದೆ. ದೀಪ್ತಿ ಶರ್ಮಾ ಓವರ್‌ನಲ್ಲಿ ಒಟ್ಟು 26 ರನ್ ಬಾರಿಸಿ ಈ ದಾಖಲೆ ನಿರ್ಮಿಸಿದ್ದಾರೆ. ಇದಕ್ಕೂ ಮುನ್ನ 2023ರಲ್ಲಿ ಆಯಶ್ ಗಾರ್ಡ್ನರ್ ಓವರ್‌ನಲ್ಲಿ ಸೋಫಿ ಡಿವೈನ್ 24 ರನ್ ಬಾರಿಸಿದ್ದು ದಾಖಲೆಯಾಗಿತ್ತು. ಇನ್ನು ಈ ಪಂದ್ಯದಲ್ಲಿ ಯುಪಿ ವಾರಿಯರ್ಸ್ ಬಾರಿಸಿದ 225 ರನ್‌ಗಳು ವುಮೆನ್ಸ್ ಪ್ರೀಮಿಯರ್ ಲೀಗ್ ಇತಿಹಾಸದ ಗರಿಷ್ಠ ಸ್ಕೋರ್. ಇದಕ್ಕೂ ಮುನ್ನ 2023 ಡೆಲ್ಲಿ ಕ್ಯಾಪಿಟಲ್ಸ್ ಬಾರಿಸಿದ 223 ರನ್‌ಗಳು ಅತ್ಯಧಿಕ ಮೊತ್ತವಾಗಿತ್ತು. ಇದೀಗ 225 ರನ್ ಸಿಡಿಸಿ ಯುಪಿ ವಾರಿಯರ್ಸ್ ಹೊಸ ಇತಿಹಾಸ ನಿರ್ಮಿಸಿದ್ದಾರೆ.**

# ಹೊಸ ಇತಿಹಾಸ ನಿರ್ಮಿಸಿದ ಯುಪಿ ವಾರಿಯರ್ಸ್



ವುಮೆನ್ಸ್ ಪ್ರೀಮಿಯರ್ ಲೀಗ್‌ನಲ್ಲಿ ಹೊಸ ಇತಿಹಾಸ ನಿರ್ಮಾಣವಾಗಿದೆ. ಅದು ಸಹ ಬರೋಬ್ಬರಿ 225 ರನ್‌ಗಳೊಂದಿಗೆ ಎಂಬುದು ವಿಶೇಷ. ಲಕ್ನೋನ ಏಕಾನ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಐಪಿಎಲ್‌ನ 18ನೇ ಪಂದ್ಯದಲ್ಲಿ ಯುಪಿ ವಾರಿಯರ್ಸ್ ಬ್ಯಾಟರ್‌ಗಳು ಭರ್ಜರಿ ಪ್ರದರ್ಶನ ನೀಡಿದ್ದಾರೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ಆರ್‌ಸಿಬಿ ತಂಡದ ನಾಯಕಿ ಸ್ಮೃತಿ ಮಂಧಾನ ಬೌಲಿಂಗ್ ಆಯ್ದುಕೊಂಡಿದ್ದರು.

ಅದರಂತೆ ಇನಿಂಗ್ಸ್ ಆರಂಭಿಸಿದ ಯುಪಿ ವಾರಿಯರ್ಸ್ ತಂಡಕ್ಕೆ ಗ್ರೇಸ್ ಹ್ಯಾರಿಸ್ ಹಾಗೂ ಜಾರ್ಜಿಯಾ ವೋಲ್ ಭರ್ಜರಿ ಆರಂಭ ಒದಗಿಸಿದ್ದರು. ಮೊದಲ ವಿಕೆಟ್‌ಗೆ 77 ರನ್ ಪೇರಿಸಿದ ಬಳಿಕ ಗ್ರೇಸ್ ಹ್ಯಾರಿಸ್ (39) ಔಟಾದರು. ಈ ಹಂತದಲ್ಲಿ ಕಣಕ್ಕಿಳಿದ ಕಿರಣ್ ನವಗಿರೆ ವಿಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿದರು.

ಆರ್‌ಸಿಬಿ ಬೌಲರ್‌ಗಳನ್ನು ಮನಸೋ ಇಚ್ಛೆ ದಂಡಿಸಿದ ಕಿರಣ್ ನವಗಿರೆ ಕೇವಲ 16 ಎಸೆತಗಳಲ್ಲಿ 5 ಭರ್ಜರಿ ಸಿಕ್ಸ್ ಹಾಗೂ 2 ಫೋರ್‌ನೊಂದಿಗೆ 46 ರನ್ ಚಚ್ಚಿದರು. ಪರಿಣಾಮ 10 ಓವರ್ ಮುಗಿಯುವಷ್ಟರಲ್ಲಿ ಯುಪಿ ವಾರಿಯರ್ಸ್ ತಂಡದ ಸ್ಕೋರ್ 100ರ ಗಡಿದಾಟಿತು.

# ಪಿಎಸ್‌ಎಲ್‌ಗೆ ಟಾಟಾ ಬೈ ಬೈ



ಸೌತ್ ಆಫ್ರಿಕಾ ವೇಗಿ ಕಾರ್ಬಿನ್ ಬಾಷ್ ಐಪಿಎಲ್‌ಗೆ ಎಂಟ್ರಿ ಕೊಟ್ಟಿದ್ದಾರೆ. ಅದು ಕೂಡ ಬದಲಿ ಆಟಗಾರನಾಗಿ ಎಂಬುದು ವಿಶೇಷ. ಆದರೆ ಇದಕ್ಕೂ ಮುನ್ನ ಪಾಕಿಸ್ತಾನ್ ಸೂಪರ್ ಲೀಗ್ ಆಡಲು ಸಹಿ ಮಾಡಿಕೊಂಡಿದ್ದಾರೆ. ಇದೀಗ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಚಾನ್ಸ್ ಸಿಗುತ್ತಿದ್ದಂತೆ ಕಾರ್ಬಿನ್ ಬಾಷ್ ಪಿಎಸ್‌ಎಲ್‌ಗೆ ಕೈ ಕೊಟ್ಟಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಆರಂಭಕ್ಕೂ ಮುನ್ನ ಮುಂಬೈ ಇಂಡಿಯನ್ಸ್ ತಂಡದಲ್ಲಿ 2 ಬದಲಾವಣೆಯಾಗಿದೆ. ಈ ಬಾರಿ ತಂಡಕ್ಕೆ ಎಂಟ್ರಿ ಕೊಟ್ಟಿರುವುದು ಸೌತ್ ಆಫ್ರಿಕಾ ವೇಗಿ ಕಾರ್ಬಿನ್ ಬಾಷ್. ಈ ಬಾರಿಯ ಐಪಿಎಲ್ ಮೆಗಾ ಹರಾಜಿನಲ್ಲಿ 75 ಲಕ್ಷ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಬಾಷ್ ಅವರನ್ನು ಯಾವುದೇ ಫ್ರಾಂಚೈಸಿ ಖರೀದಿಸಿರಲಿಲ್ಲ. ಹೀಗಾಗಿ ಕಾರ್ಬಿನ್ ಬಾಷ್ ಪಾಕಿಸ್ತಾನ್ ಸೂಪರ್ ಲೀಗ್‌ಗೆ ಹೆಸರು ನೀಡಿದ್ದರು. ಅದರಂತೆ ಪಿಎಸ್‌ಎಲ್‌ನ ಪೇಶಾವರ್ ಝಲ್ಮಿ ಫ್ರಾಂಚೈಸಿಯು ಬಾಷ್ ಅವರನ್ನು ಮುಂಬರುವ ಟೂರ್ನಿಗೆ ಆಯ್ಕೆ ಮಾಡಿಕೊಂಡಿದ್ದರು. ಆದರೀಗ ಸೌತ್ ಆಫ್ರಿಕಾ ಪಾಕಿಸ್ತಾನ್ ಸೂಪರ್ ಲೀಗ್‌ಗೆ ಕೈಕೊಟ್ಟಿದ್ದಾರೆ. ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದ ಸೌತ್ ಆಫ್ರಿಕಾ ವೇಗಿ ಲಿಝಾಡ್ ವಿಲಿಯಮ್ಸ್ ಮೊಣಕಾಲಿನ ಗಾಯದ ಕಾರಣ ಈ ಬಾರಿಯ ಐಪಿಎಲ್‌ನಿಂದ ಹೊರಗುಳಿದಿದ್ದಾರೆ. ಹೀಗಾಗಿ ಅವರ ಬದಲಿಯಾಗಿ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಕಾರ್ಬಿನ್ ಬಾಷ್ ಅವರನ್ನು ಆಯ್ಕೆ ಮಾಡಿಕೊಂಡಿದೆ.

ಇತ್ತ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಚಾನ್ಸ್ ಸಿಕ್ಕಿದ್ದೇ ತಡ, ಕಾರ್ಬಿನ್ ಬಾಷ್ ಪಾಕಿಸ್ತಾನ್ ಸೂಪರ್ ಲೀಗ್‌ನಿಂದ ಹಿಂದೆ ಸರಿದಿದ್ದಾರೆ. ಅದರಂತೆ ಈ ಬಾರಿಯ ಐಪಿಎಲ್‌ನಲ್ಲಿ ಬಾಷ್ ಮುಂಬೈ ಇಂಡಿಯನ್ಸ್ ತಂಡದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅತ್ತ ಪಿಎಸ್‌ಎಲ್‌ನಲ್ಲಿ ಪೇಶಾವರ್ ಝಲ್ಮಿ ಫ್ರಾಂಚೈಸಿಗೆ ಇದೀಗ ಬದಲಿ ಆಟಗಾರನ ಆಯ್ಕೆ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಅಂದಹಾಗೆ ಇದು ಮುಂಬೈ ಇಂಡಿಯನ್ಸ್ ತಂಡದ 2ನೇ ಬದಲಾವಣೆ. ಇದಕ್ಕೂ ಮುನ್ನ ಮುಂಬೈ ಫ್ರಾಂಚೈಸಿ ಬರೋಬ್ಬರಿ 4.80 ಕೋಟಿ ರೂ. ನೀಡಿ ಖರೀದಿಸಿದ್ದ ಅಲ್ಲಾ ಗಝನ್‌ಫರ್ ಗಾಯಗೊಂಡು ಹೊರಗುಳಿದಿದ್ದರು. ಅವರ ಬದಲಿಗೆ ಅಫ್ಘಾನಿಸ್ತಾನದ ಅನುಭವಿ ಸ್ಪಿನ್ನರ್ ಮುಜೀಬ್ ಉರ್ ರೆಹಮಾನ್ ಅವರನ್ನು ಮುಂಬೈ ಇಂಡಿಯನ್ಸ್ ಆಯ್ಕೆ ಮಾಡಿಕೊಂಡಿದೆ.

ಮುಂಬೈ ಇಂಡಿಯನ್ಸ್ ತಂಡ: ಹಾರ್ದಿಕ್ ಪಾಂಡ್ಯ (ನಾಯಕ), ರೋಹಿತ್ ಶರ್ಮಾ, ಸೂರ್ಯಕುಮಾರ್ ಯಾದವ್, ಜಸ್‌ಪ್ರೀತ್ ಬುಮ್ರಾ, ತಿಲಕ್ ವರ್ಮಾ, ಟ್ರೆಂಟ್ ಬೌಲ್ಟ್, ನಮನ್ ಧೀರ್, ರಾಬಿನ್ ಮಿಂಝ್, ಕರ್ಣ್ ಶರ್ಮಾ, ದೀಪಕ್ ಚಹರ್, ರೀಸ್ ಟೋಪ್ಲಿ, ರಿಯಾನ್ ರಿಕೆಲ್ಟನ್, ವಿಲ್ ಜ್ಯಾಕ್ಸ್, ಮಿಚೆಲ್ ಸ್ಯಾಂಟ್ನರ್, ಕರ್ಣ್ ಶರ್ಮಾ, ರಾಜ್ವ ಶರ್ಮಾ, ಸತ್ಯನಾರಾಯಣ ರಾಜು, ರಾಜ್ ಬಾವ, ಕೃಷ್ಣನ್ ಶ್ರೀಜಿತ್, ಅಶ್ವಾಣಿ ಕುಮಾರ್, ಬೆವನ್ ಜೇಕಬ್ಸ್, ಅರ್ಜುನ್ ತೆಂಡೂಲ್ಕರ್, ಮುಜೀಬ್ ಉರ್ ರೆಹಮಾನ್, ಕಾರ್ಬಿನ್ ಬಾಷ್.


**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**